ಬೀದರ ಜಿಲ್ಲೆಯ ಕೃಷಿ ಆಚರಣೆಗಳು

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಸುರೇಖಾ ಅಂಬಾದಾಸರಾವ

ಸಂಶೋಧನ ಮಾರ್ಗದರ್ಶಕರು

ಡಾ. ಶಿವಗಂಗಾ ರುಮ್ಮಾ

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ. ಹಂಪಿ. ವಿದ್ಯಾರಣ್ಯ - 583276.

ಸೆಪ್ಟೆಂಬರ್ - 2009

ಬೀದರ ಜಿಲ್ಲೆ ಕೃಷಿ ಆಚರಣೆಗಳು

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಸುರೇಖಾ ಅಂಬಾದಾಸರಾವ್

ಸಂಶೋಧನ ಮಾರ್ಗದರ್ಶಕರು

ಡಾ. ಶಿವಗಂಗಾ ರುಮ್ಮಾ

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - 583276.

ಸೆಪ್ಟೆಂಬರ್ – **2009**

617

ಪ್ರಮಾಣ ಪತ್ರ

"ಬೀದರ ಜಿಲ್ಲೆಯ ಕೃಷಿ ಆಚರಣೆಗಳು" ಎಂಬ ನಿಬಂಧವನ್ನು ಡಾ. ಶಿವಗಂಗಾ ರುಮ್ಮಾ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಬೀದರ

ದಿನಾಂಕ: 3/10/2009

Surekha

ಸುರೇಖಾ ಅಂಬಾದಾಸರಾವ

ಎಂ.ಫಿಲ್. ವಿದ್ಯಾರ್ಥಿನಿ

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ

ಸಂಶೋಧನ ಕೇಂದ್ರ, ಬೀದರ.

ಮಾರ್ಗದರ್ಶಕರ ಪ್ರಮಾಣ ಪತ್ರ

ಸುರೇಖಾ ತಂದೆ ಅಂಬಾದಾಸರಾವ ಅವರು ಸಾದರಪಡಿಸಿದ " ಬೀದರ ಜಿಲ್ಲೆಯ ಕೃಷಿ ಆಚರಣೆಗಳು " ಎಂಬ ಸಂಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದೆ. ಇವರು ನನ್ನ ಮಾರ್ಗದರ್ಶನದಲ್ಲಿ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರದಲ್ಲಿ ಈ ಸಂಶೋಧನೆಯನ್ನು ಕೈಕೊಂಡಿದ್ದಾರೆ.

ಪ್ರಸ್ತುತ ಸಂಶೋಧನ ಸಂಪ್ರಬಂಧನ ವಿಷಯ ಕುರಿತು ಯಾವುದೇ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಡೆದಿರುವುದಿಲ್ಲ. ಅಲ್ಲದೇ ಈ ಮೊದಲು ಸಂಪ್ರಬಂಧದ ಯಾವುದೇ ಭಾಗ ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲ. ಈ ಸಂಪ್ರಬಂಧ ಎಂ.ಫಿಲ್. ಪದವಿಗೆ ಅರ್ಹವಾಗಿದೆಯೆಂದು ಹೇಳುತ್ತಾ, ಈ ಪ್ರಮಾಣ ಪತ್ರ ನೀಡುತ್ತೇನೆ.

ಸ್ಥಳ: ಬೀದರ.

ದಿನಾಂಕ: 3.10.09

ಡಾ. ಶಿವಗಂಗಾ ರುಮ್ಮಾ
ಸಂಶೋಧನ ಮಾರ್ಗದರ್ಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ.

ಪ ರಿ ವಿ ಡಿ

ಅಧ್ಯಯನ – 1

ಬೀದರ ಜಿಲ್ಲೆ ಕೃಷಿ ಆಚರಣೆಯ ಉದ್ದೇಶ ಮತ್ತು ವ್ಯಾಪ್ತಿ

1.1 ಅಧ್ಯಯನದ ಉದ್ದೇಶ

1.2 ಅಧ್ಯಯನದ ವ್ಯಾಪ್ತಿ

ಅಧ್ಯಾಯ-1
ಬೀದರ ಜಿಲ್ಲೆ ಕೃಷಿ ಆಚರಣೆಯ ಉದ್ದೇಶ ಮತ್ತು ವ್ಯಾಪ್ತಿ

1.1 ಅಧ್ಯಯನದ ಉದ್ದೇಶ:

ಮಾನವನು ಭೂಮಿಯ ಮೇಲೆ ಅವತರಿಸಿದಾಗ ಆತನಲ್ಲಿ ಭಾವನೆಗಳಷ್ಟೇ ಸಹಜವಾಗಿ ಹಸಿವು. ಬಾಯಾರಿಕೆಗಳು ಇದ್ದವು. ಆದರೆ ಆತನಿಗೆ ಯಾವುದೇ ಕೃಷಿಯ ಮೂಲಕ ಧವಸ – ಧಾನ್ಯಗಳ ಉತ್ಪಾದನೆಯ ಬಗ್ಗೆ ಎಳ್ಳಷ್ಟು ಪರಿಕಲ್ಪನೆಯೂ ಇರಲಿಲ್ಲ. ವ್ಯವಸ್ಥಿತ ಸಮಾಜ ರಚನೆಯ ನಾಗರಿಕತೆಯ ಪ್ರಜ್ಞೆಯೂ ಇರಲಿಲ್ಲ. ಅದಕ್ಕೆ ಅವನು ಮೃಗ (ಪ್ರಾಣಿ) ಗಳಂತೆ ಕಾಡಿನಲ್ಲಿ ಅಡ್ಡಾಡುತ್ತಿದ್ದ. ಹಸಿವು ಎನಿಸಿದಾಗ ಕಾಡಿನ ಸೋಪ್ಪು, ಗೆಡ್ಡೆ, ಗೆಣಸು, ಹಣ್ಣು–ಹಂಪಲುಗಳನ್ನು ತಿನ್ನುತ್ತಾ ತನ್ನ ದೇವನ ಸಾಗಿಸುತ್ತಿದ್ದ. ಚೇವರು ಪ್ರಾಣಿಗಿಂತ ಭಿನ್ನವಾಗಿ ನೀಡಿದ ಮಾತನಾಡುವ ಶಕ್ತಿ ಮತ್ತು ಆಲೋಚನಾ ಶಕ್ತಿಗಳು ಅದುವರೆಗೂ ಆತನಲ್ಲಿ ಸುಪ್ತವಾಗಿಯೇ ಉಳಿದವು. ಯಾವಾಗ ಕಲ್ಲು–ಕಲ್ಲುಗಳ ಘರ್ಷಣೆಯಿಂದ ಕಿಡಿಗಳು ಎದ್ದು ಬೆಂಕಿಯ ಆವಿಷ್ಕಾರವಾಯಿತೋ ಆಗ ಮನುಷ್ಯ ಪ್ರಾಣಿ–ಪಕ್ಷಿಗಳನ್ನು ಕೊಂದು ಅವುಗಳನ್ನು ಸುಟ್ಟು ಮೌಂಸ ತಿನ್ನುವುದು ಕಲಿತನೋ ಆಗ ಆತ ತನ್ನ ದೇಹವನ್ನು ಮುಚ್ಚಿಕೊಳ್ಳುವ ಅರಿವು ಹೊಂದಿ ಕಾಡಿನ ಸೊಪ್ಪುಗಳಿಂದಲೋ. ಮರದ ತೊಗಟೆಗಳಿಂದಲೋ ದೇಹವನ್ನು ಮುಚ್ಚಿಕೊಂಡ, ತನ್ನ ಭಾವಾಭಿವ್ಯಕ್ತಿಗಳನ್ನು ಹೊರಹಾಕಲು ಚಿತ್ರಬಿಡಿಸುವುದು, ವಾದ್ಯಗಳು ಬಾರಿಸುವ ಮುಖಾಂತರ ತನ್ನಲ್ಲಿ ಕಲಾ ಹವ್ಯಾಸವನ್ನು ಮಾತನ್ನು ಆಡುವ ಶಕ್ತಿಯನ್ನು ಬೆಳೆಸಿಕೊಂಡ, ಹೀಗೆ ಪ್ರಾಣಿಗಳಿಂದ ಭಿನ್ನವಾಗಿ ತನ್ನ ಜೀವನ ರೂಪಿಸಿಕೊಂಡ ಈತ ತನಗೆ ಎಲ್ಲಿ ನೀರು ಉಳಿಯಲು ಭೂಮಿ, ಅನುಕೂಲಕರ ವಾತಾವರಣವಿರುತಿತ್ತು. ಅಲ್ಲಿ ಕಲ ಸಾಧು ಪ್ರಾಣಿಗಳನ್ನು ಜೊತೆ ಒಯ್ದು ಕೆಲ ಕಾಲ ಜೀವಿಸಿ ಮತ್ತೆ ಆಹಾರ ನೀರು ವಾತಾವರಣ ಹುಡುಕಿ ಹೊರಟ. ಆ ಸಂದರ್ಭದಲ್ಲಿ. ಕಾಡಿನಲ್ಲಿದ್ದ ಮರಗಳಿಂದ ಹಣ್ಣಾದ ಬೀಜಗಳು ನೆಲಕ್ಕುರುಳಿ. ಸುತ್ತಲಿನ ನೀರಿನ ಸತ್ವವನ್ನು ಹೀರಿಕೊಂಡು ಕುಡಿಯೊಡೆದು ಚಿಗುರಿ ಸಸಿಯಾಗಿ ಮತ್ತೆ ಮರವಾಗುತ್ತಿದ್ದವು. ನಿಸರ್ಗದ ಈ ಕ್ರಿಯೆಯನ್ನು ಕಂಡು ಮಾನವ ನೆಲೆಯನ್ನು ಕಸಿ ಮಾಡದೆ ಭೂಮಿಯ ಮೇಲೆ ಬೀಜ ಚೆಲ್ಲಿದ ತುಂಬ ಫಲವತ್ತತೆಯಿಂದ ಕೂಡಿದ, ಹೆಚ್ಚಿನ ಅಂತರ್ಜಲ ಮಟ್ಟದಿಂದ ಕೃಷಿಯನ್ನು ಕಂಡು ಹಿಡಿದವಳು ಹೆಣ್ಣು. ಕೂಡಿದ ಆ ಭೂಮಿಯಿಂದ ಒಂದು ಬೀಜಕ್ಕೆ ಹತ್ತರಷ್ಟಾಗಿ ಬೆಳೆಬಂತು ಈ ವಿಧಾನವನ್ನು ತಮ್ಮ ಇಡೀ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ನಿರ್ಧರಿಸಿ. ತಿರುಗಿ ಬೇಸತ್ತ ಮಾನವ ಒಂದು ಫಲವತ್ತಾದ ಭೂಮಿ ಅಕ್ಕ–ಪಕ್ಕದಲ್ಲೆ ಹಳ್ಳ – ಕೆರೆ – ನದಿ – ಝರಿಗಳು ಇರುವ ಕಡೆ ನೆಲೆನಿಂತ ಬಯಲು ಭೂಮಿಗಿಂತ ಕಾಡು ಆವರಿಸಿದ ದಟ್ಟಾರಣ್ಯವೆ ಅಂದು ಹೆಚ್ಚಾಗಿದ್ದರಿಂದ. ಕಾಡನ್ನು ಕಡಿದು ಅದನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿಕೊಂಡ.

ಈ ರೀತಿಯಾಗಿ ಕೃಷಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಮಾನವ ನೆಲವನ್ನು ಕಟ್ಟಿಗೆಯಿಂದ ಅಥವಾ ಕಲ್ಲಿನಿಂದ ಕಸಿ ಮಾಡಿ ಬೀಜಗಳನ್ನು ಮಣ್ಣಿನಲ್ಲಿ ಮರೆಮಾಡಿ ಹಾಕಿದ. ಬೀಜಗಳು ಚಿಗುರೊಡೆದು ಮೇಲೆ ಬರುವಾಗ ಅದರೊಮದಿಗೆ ಬೆಳೆದು ಬಮದ ಹುಲ್ಲು ಬೆಳೆಯ ಬೆಳವಣಿಗೆಗೆ ಅಡ್ಡಿ ಮಾಡುತ್ತಿದೆ. ಎಮದು ತಿಳಿದು ಅದನ್ನು ಕೀಳುವುದು ಅಭ್ಯಸಿಸಿಕೊಂಡು ಬೆಳೆಗೆ ಶಕ್ತಿ ತುಂಬಲು ಮರಗಳಿಂದ ಉದುರಿ ಬಿದ್ದ ಎಲೆಗಳನ್ನು ತಂದು ಬೆಳೆಯ ಬುಡಕ್ಕೆ ಸುರಿದ ಅದರಿಂದ ಅವು ಕೊಳೆತು ಗೊಬ್ಬರವಾದವು. ಹೀಗೆ ಉತ್ಪಾದನಾ ರೀತಿಯನ್ನು ಕರಗತ ಮಾಡಿಕೊಂಡ ಅಕ್ಕ-ಪಕ್ಕ ಭೂಮಿಯಲೆಲ್ಲಾ ಕೆಲಸ ಮಾಡಲು ಮುಂದಾದ ಜನ ತಮ್ಮ ಕೃಷಿ ಭೂಮಿಯಲ್ಲೇ ಗುಡಿಸಲು ನಿರ್ಮಿಸಿಕೊಂಡ. ಸಂಘ ಜೀವಿಯಾದ ಮನುಷ್ಯ ಒಂಟಿಯಾಗಿ ಬಾಳಲು ಅಭಿರುಚಿ ಇಲ್ಲದೆ ಜೀವನ ಸಂಗಾತಿಯನ್ನು ಪಡೆದ ಇದರಿಂದ ಆತನ ವಂಶಾಭಿವೃದ್ಧಿಯು ಮುಂದುವರೆಯಿತು. ಆಗ ಆತ ಒಬ್ಬನಲ್ಲದೆ ಕೌಟುಂಬಿಕ ವ್ಯಕ್ತಿಯಾದ ಅದರಿಂದ ಕೃಷಿ ಭೂಮಿಯಲ್ಲಿ ಕೆಲ ಸಾಮಗ್ರಿಗಳು ಮಾಡಿಕೊಂಡು ಇಬ್ಬರು ಮುಂದೆ (ಭೂಮಿ ಸಾಗುವಳಿಗಾನ) ಇಬ್ಬರು / ಒಬ್ಬರು ಎಳೆಯುತ್ತಿದ್ದರೆ. ಅದು ಭೂಮಿಯೊಳಗೆ ಇಳಿಯುವಂತೆ ಸಾಲಾಗಿ ನಡೆಯುವಂತೆ ಒತ್ತಿ ಹಿಡಿಯುತ್ತಿದ್ದ. ಆಗ ವ್ಯವಸಾಯದ ಜೊತೆಗೆ ವ್ಯವಸಾಯಕ್ಕೆ ಅಗತ್ಯವಾದ ಪರಿಕರಗಳನ್ನು ತಯ್ಯಾರಿಸುವ ವರ್ಗಗಳು ರಚನೆಗೊಂಡವು. ಉದಾ:- ಕಂಬಾರ, ಬಡಿಗೆ, ಕುಂಬಾರ ವ್ಯಾಪಾರಿ, ಇತ್ಯಾದಿ. ಅದಕ್ಕಾಗಿ ಕೂರಿಗೆ, ಕುಂಎ, ಕುಡಗೋಲು, ಖುರಿಪೆ ಬುಕ್ಕಾ ಮೆಟ್ಟನಲಿಗೆಗಳು ಹೀಗೆ ಅನೇಕ ಕೃಷಿ ಸಾಮಗ್ರಿ ಸಿದ್ಧವಾದವು. ಈ ಸಲಕರಣೆಗಳನ್ನು ಅಂದರೆ ನೊಗದ ಭಾರವನ್ನು ತನ್ನ ಹೆಗಲ ಮೇಲೆ ಹೊತ್ತು ಎಳೆಯುತ್ತಿದ್ದನು. ಇದರಿಂದ ಹೆಚ್ಚು ಶ್ರಮ ಪಡುತ್ತಿದ್ದ ಅದರಿಂದ ತಾನು ಸಾಕುತ್ತಿದ್ದ ಎಮ್ಮೆ, ಆಕಳು, ಎತ್ತುಗಳನ್ನು, ಕೋಣಗಳನ್ನು ಈ ಕಾರ್ಯಕ್ಕಾಗಿ ಬಳಸಿಕೊಂಡ. ಈ ರೀತಿಯಾಗಿ ಕೃಷಿ ಪದ್ಧತಿಯನ್ನು ರೂಢಿಸಿಕೊಂಡ, ಜೊತೆಗೆ ಮನೆ ಕುಟುಂಬ. ಸಮಾಜವನ್ನು ರಚಿಸಿಕೊಂಡ.

ದೇವರು ಮತ್ತು ದೆವ್ವ ಎರಡರಾ ಕಲ್ಪನೆಗಳನ್ನು ಬೆಳೆಸಿಕೊಂಡ ಮಾನವ ತನ್ನ ಜೀವನದಲ್ಲಿ ಪ್ರಜೆ ಪುನಸ್ಕಾರಗಳಲ್ಲಿ ತೊಡಗಿಸಿಕೊಂಡ ಪ್ರಕೃತಿಯ ವಿವಿಧ ವಿಷಯಗಳಾದ ಮಳೆ ಗಾಳಿ ಬಿಸಿಲು, ಚಂಡಮಾರುತ್ತ ರೆಲಿಗ ಇತ್ಯಾದಿ. ಆತ ಪ್ರತಿಯೊಂದು ಸುಖ, ದುಃಖಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುತ್ತಿದ್ದಗಳನ್ನು ಅಂತು ತನಗಿಂತ ಯವುದೇ ಶಕ್ತಿಯಿದೆ ಎಮದು ನಂಬಿ ಭಯದಿಂದ ಪ್ರತಿಯೊಂದು ಕಾರ್ಯದ ಆರಂಭ ಪ್ರಜೆಯಿಂದಲೇ ಆರಂಭಗೊಳಿಸುತ್ತಿದ್ದ ಪ್ರಜೆಸಲಾರಂಭಿಸಿದ ತನಗೆ ಬಂದ ಲಾಭ / ದೊರೆತ ಸುಖ ದೇವರ ದಯೆ ಎನ್ನುತ್ತಿದ್ದ. ಹೀಗೆ ಪ್ರತಿ ವಿಷಯದಲ್ಲಿ ಸಂಪ್ರದಾಯ. ಆಚರಣೆ (ಎನ್ನುತ್ತಿದದ ಮಾನವರು ತಮ್ಮ ಜೀವನದ ಆಧಾರಸ್ತಂಭವಾಗಿದ್ದ ಕೃಷಿಗಂತೂ ಇನ್ನು ಹೆಚ್ಚಿನ ಪ್ರಜೆ, ಪುನಸ್ಕಾರ ಸಮಪ್ರದಾಯ, ಆಚರಣೆಗಳನ್ನು) ಸಲ್ಲಿಸುತ್ತಿದ್ದ. ಆ

ಸಂಪ್ರದಾಯಗಳಲ್ಲಿ ಆತ ಯಾವ ರೀತಿಯ ನಂಬಿಕೆಗಳನ್ನು ಹೊಮದಿದ್ದ. ಅವುಗಳನ್ನು ಎಷ್ಟು ವಿಶಿಷ್ಟವಾಗಿ ವಿಭಿನ್ನವಾಗಿ ಆಚರಿಸುತ್ತಿದ್ದ. ಅವುಗಳ ಮಹತ್ವನ್ನು ಯಾವ ರೀತಿ ಕಂಡುಕೊಂಡಿದ್ದ, ಎಂಬುದರ ಬಗ್ಗೆ ಅಭ್ಯಸಿಸುವ ಆಶಯ ಹೊಂದಿದ್ದ ನನು ಇಡಿಯಾದ ಕರ್ನಾಟಕದ ಜನಪದರ ಆಚರಣೆಗಳನ್ನು ಸಂಗ್ರಹಿಸಲು ಈ ಪ್ರಬಂಧದಲ್ಲಿ ಸಾಧ್ಯವಾಗುತ್ತಿಲ್ಲವಾದ್ದರಿಂದ. ಕರ್ನಾಟಕ ರಾಜ್ಯದ ಶ್ರೀರಿಮುಡಿಯಂತಿರುವ. ಹಿಂದೆ ಹೈದ್ರಾಬಾದ – ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ ಬಿದರ ಜಿಲ್ಲೆಯಲ್ಲಿ ಆಚರಿಸಲ್ಪಡುವ ಆಚರಣೆಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಂಡಿದ್ದೇನೆ. ಆನಪದ ಆಚಾರ – ವಿಚಾರಗಳು ಕಾಲದಿಂದ – ಕಾಲಕ್ಕೆ (ಪ್ರದೇಶದಿಂದ – ಪ್ರದೇಶಕ್ಕೆ ವಿಭಿನ್ನವಾಗಿ ಆಚರಿಸಲ್ಪಡುತ್ತವೆ. ಅದರಿಂದ ಇತರ ಜಿಲ್ಲೆಗಳಿಗಿಂತ ಈ ಭಾಗದಲ್ಲಿ ಆಚರಿಸಲ್ಪಡುವ ಆಚರಣೆಗಳು ಯಾವುವು ಅವುಗಳನ್ನು ಯಾವು ರೀತಿಯಾಗಿ ಆಚರಿಸುತ್ತಾರೆ. ಮತ್ತು ಇಂದಿನ ಜಾಗತೀಕರದ ಸಂದರ್ಭದಲ್ಲಿ ಕೃಷಿ ಜಾನಪದ ಆಧುನಿಕ ರೀತಿಯಿಂದ ಹೇಗೆ ಸಾಗುತ್ತಿದೆ. ಅದರಿಮದ ಆಚರಣೆಗಳಲ್ಲಾಗಿರುವ ಬದಲಾವನೆ ಎಂತಹ್ಮದೆಂಬುದೇ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಬೀದರ ಜಿಲ್ಲೆ ಐತಿಹಾಸಿಕವಾಗಿ ಹೆಸರನ್ನು ಪಡೆದಿರುವ ಜಿಲ್ಲೆ ಇಲ್ಲಿ ಗವಾನ್ ಸಂತತಿಯ ಆಳ್ವಿಕೆಯು ನಡೆದಿತ್ತು ಇಲ್ಲಿ ಕೋಟೆ ಗವಾನ್ ಮದರಸಾಗಳನ್ನು ನಿರ್ಮಿಸಿದ ಈ ಪ್ರದೇಶ ನಿಜಾಮನ ಆಳ್ವಿಕೆಗೂ ಒಳಪಟ್ಟು ಇಂದಿಗೂ ಹೈದ್ರಾಬಾದ – ಕರ್ನಾಟಕ ಪ್ರದೇಶವೆಚಿದೇ ಕರೆಯಲ್ಪಡುತ್ತದೆ. ಇದರ ಒಚಿದೆಡೆ ಮಹಾರಾಷ್ಟ್ರ. ಇನೋಂದೆಡೆ ಆಂಧ್ರಪ್ರದೇಶ ರಾಜ್ಯಗಳಿಗೂ ಮತ್ತೋಂದೆಡೆ ಗುಲ್ಬರ್ಗಾ ಜಿಲ್ಲೆಗೂ ಗ್ವಡಿ ಸಂಬಂಥ ಹೊಂದಿದ ಹಿಮದೆ ಗವಾನನ ನಿಜಾಮನ ಆಳ್ವಿಕೆಯಿಂದ ಇಲ್ಲಿನ ಬಹು ಜನ ಉರ್ದು ತೆಲುಗು ಮರಾಠಿ ಕನ್ನಡ ಹಿಂದಿ ಭಾಷೆಗಳನ್ನು ಬಲ್ಲ ಪಂಚಾ ಭಾಷ ಪಚಿಡಿತರಾಗಿದ್ದರು ಕರ್ನಾಟಕದ ಇತರ ಕನ್ನಡಿಗರಿಗಿಂತ ಇವರ ಭಾಷೆ ವೇಷ – ಭೂಷಣ ಜೀವನ ಶೈಲಿ ವಿಭಿನ್ನವಾಗಿದೆ ಇಲ್ಲಿನ ವಾತಾವರಣ ಕೊಂಚ ಬಿಸಿಲಿನಿಂದ ಕೂಡಿರುತ್ತದೆ ಕಡಿಮೆ ಮಳೆ ತಂಪಿನೀದ ಕೂಡಿದೆ ಇಲ್ಲಿ ಫಲವತ್ತಾದ ಮಣ್ಣಿದ್ದು ಜೋಳ ತೊಗರಿ ಉದ್ದು ಹೆಸರು ತರಕಾರಿ ಬಳೆಯುತ್ತಾರೆ ಈಗ ಕಬ್ಬು ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಚಿಯಾಗಿದೆ ಕುರಿ ಕೋಳಿ ದನಕರುಗಳ ಸಾಕಾಣಿಕೆ ಮಾಡುತ್ತಿದ್ದರು.

ಬೀದರ ಜಿಲ್ಲೆಯಲ್ಲಿ ಆಚರಿಸಲ್ಪಡುವ ಕೃಷಿ ಹಿನ್ನಲೆಯ ಹುಣ್ಣಿ ಅಮವ್ಯಸ್ಯೆ ಹಬ್ಬಗಳು ಯಾವು? ಅವುಗಳ ಹಿಂದಿರುವ ನಂಬಿಕೆಗಳೇನು ಆ ನಂಬಿಕೆಗಳ ಆಧಾರದ ಮೇಲೆ ಅವರು ಯಾವ ರೀತಿಯಾಗಿ ಆಚರಿಸುವುದರ ವೈಶಿಷ್ಯ ಎನೆಂಬುದನ್ನು ಈ ಪ್ರಬಂಧದಲ್ಲಿ ಸವಿವರವಾಗಿ ಹಿಡಿದಿಡಲಾಗಿದೆ.

1.2 ಅಧ್ಯಯಾನದ ವ್ಯಾಪ್ತಿ

ಕೃಷಿ ವ್ಯಾಪ್ತಿ:-

ಈ ಒಂದು ನಿಭಂಧದಲ್ಲಿ ಕರ್ನಾಟಕ ರಾಜ್ಯದ ಒಂದು ಜಿಲ್ಲೆಯಾಗಿರುವ ಒಂದು ಸೀಮಿತ ಪ್ರದೇಶಕ್ಕೆ ಆಯ್ದುಕೊಳ್ಳುವದು. ಕೃಷಿ ಈ ನಿಭಂಧದ ಕೃಷಿ ಆಚರಣೆಗಳು ಹಿಂದಿನ ನಂಬಿಕೆಗಳು ಮತ್ತು ಆಚರಣೆಗಳು ಮತ್ತು ವೈಜ್ಞಾನಿಕತೆ ಮತ್ತು ವೈಶಿಷ್ಟತೆ ಈ ನಿಭಂಧದಲ್ಲಿ ಹಿಡಿದಿಟ್ಟಿದೆನೆ.

ಈ ನಿಭಂಧದಲ್ಲಿ ಐದು ಅಧ್ಯಾಯನದಲ್ಲಿ ಒಂದನೇಯ ಅಧ್ಯಾಯನದಲ್ಲಿ ಉದ್ದೇಶದಲ್ಲಿ ಆಳೀದ ಅರಸರ ಬಗ್ಗೆ ಮತ್ತು ಇತಿಹಾಸ ಸಂಪನ್ಮೂಲಗಳ ಬಗ್ಗೆ ನೀರಾವರಿ ಸೌಲಭ್ಯ ಮತ್ತು ಬೀದರ ಜಿಲ್ಲೆಯ ಬೆಳೆಗಳ ಬಗ್ಗೆ ಹವಾಮಾನ ಮತ್ತು ಬಯಲು ಪ್ರದೇಶ ಮತ್ತು ವ್ಯಾಪ್ತಿ ಬಗ್ಗೆ ವಿವರವಾಗಿ ಬರೆದಿದ್ದೆನೆ. ಕೃಷಿ ಇಂದು ಜಾಗೃತಿಕರಣದಿಂದ ಮಾಯಾವಾಗಿ ಅದರ ಬಗ್ಗೆ ಅಧ್ಯಾಯನ ಈ ಒಂದು ರಿರ್ಸಸ್ಸ್ (Chapter)ನಲ್ಲಿ ತಿಳಿಸಿದೆನೆ. ಇನ್ನು ಎರಡನೇ ಅಧ್ಯಾಯದಲ್ಲಿ ಸಂಕ್ಷಿಪ್ತ ಪರಿಚಯ ಇಂದು ಇಲ್ಲಿ ಆಳಿದ ಅರಸರ ಬಗ್ಗೆ ಇಲ್ಲಿ ದೇವಲಯಗಳು ಮತ್ತು ಬೀದರ ಜಿಲ್ಲೆಯ ಜಾನಪದ ಕಲೆಗಳು ಮಹಾಪುರುಷರು ಬಗ್ಗೆ ಎರಡನೇಯ ಅಧ್ಯಯದಲ್ಲಿ ತಿಳಿಸಿದೆನೆ. ಇನ್ನು ಮೂರನೇಯ ಅಧ್ಯಾಯದಲ್ಲಿ ಬೀದರ ಜಿಲ್ಲೆಯ 'ಕೃಷಿ ಆಚರಣೆಯ ಹಿಂದಿನ ನಂಬಿಕೆಗಳು ಮತ್ತು ಆಚರಣೆಗಳು'. ಪ್ರಾಚೀನ ಕಾಲದ ಹಿಂದಿನ ಮೂಢನಂಬಿಕೆಗಳು ಮಾಯಾವಾಗಿವೆ. ಬೀದರ ಜಿಲ್ಲೆಯ ಆಚರಣೆಯ ಒಂದೊಂದಾಗಿ ಸಂಕ್ಷಿಪಿಸಿದೆನೆ. ಇನ್ನು ನಾಲ್ಕನೇಯ ಅಧ್ಯಾಯನದಲ್ಲಿ ವೈಶಿಷ್ಟತ್ತೆ ಬೀದರ ಜಿಲ್ಲೆಯ ಆಚರಿಸುವದು ಬೀನ ಬೀನವಾಗಿ ಆಚರಿಸುತ್ತಾರೆ ಎಂಬುದನ್ನು ಈ ಅಧ್ಯಾಯನದಲ್ಲಿ ತಿಳಿಸಿದ್ದೆನೆ. ಇನ್ನು ಐದನೇ ಅಧ್ಯಾಯದಲ್ಲಿ ವೈಜ್ಞಾನಿಕತೆ ಅಂದರೆ ಒಂದೊಂದು ಹಬ್ಬದಲ್ಲಿ ಆರೋಗ್ಯಕರವಾಗಿ ಪೋಷ್ಟಕ ಆಹಾರವನ್ನು ನಮಗೆ ಸಿಗುವದು ಎಂದು ಒಂದೊಂದು ಆಗಿ ತಿಳಿಸಿದೆನೆ.

ಇತಿಹಾಸ

ಕರ್ನಾಟಕ ರಾಜ್ಯದ ಉತ್ತರದ ತುತ್ತ ತುದಿಯಲ್ಲಿ ಸಾಂಸ್ಕೃತಿಕ ಕೊಡು ಕೇಂದ್ರದಂತೆ ದಕ್ಷಿಣಕ್ಕೆ ಕರ್ನಾಟಕ ಗುಲಬರ್ಗಾ ಜಿಲ್ಲೆ ಪಶ್ಚಿಮ ಹಾಗು ಉತ್ತರಗಳಲ್ಲಿ ಮಹಾರಷ್ಟ್ರ ಮತ್ತು ಪೂರ್ವದಲ್ಲಿ ಆಂಧ್ರ ಪ್ರದೇಶಗಳಿಂದ ಸುತ್ತುವರಿದಿರುವ ಐದು ತಾಲೂಕುಗಳನ್ನು ಹೊಂದಿರುವ ಚಿಕ್ಕ ಜಿಲ್ಲೆ ಬೀದರ. ಭವ್ಯ ಐತಿಹಾಸಿಕ ಪರಂಪರೆಯನ್ನು ಹೊಂದಿರುವ ಈ ಪ್ರದೇಶವು ಭೌಗೋಳಿಕವಾಗಿ ದಕ್ಷಿಣ ಪ್ರಸ್ಥ ಭೂಮಿಯ ಮಧ್ಯದಲ್ಲಿ ಬರುತ್ತದೆ. ಆರೋಗ್ಯಕರ ಹವಾಮಾ ಹೊಂದಿರುವ , ಹಾಲು-ಹಯನಕ್ಕೆ ಪ್ರಸಿದ್ಧವಾಗಿರುವ ಈ ಜಿಲ್ಲೆ 'ಬಿದರಿ' ಕಲೆಗಾಗಿ ಜಗತ್ ಪ್ರಸಿದ್ಧ. ಐತಿಹಾಸಿಕ ಕೋಟೆ ಕೊತ್ತಲಗಳು, ಸ್ಮಾರಕಗಳ, ಧಾರ್ಮಿಕ ಕೇಂದ್ರಗಳು ಜಿಲ್ಲೆಯ್ಯಾದಂತ ಹರಡಿವೆ. ಕೃಷಿ ಪ್ರಧಾನವಾಗಿರುವ ಈ ಜಿಲ್ಲೆ ಇತ್ತೀಚಿನ ದಶಕಗಳಲ್ಲಿ ಶೈಕ್ಷಣಿಕ ಕೇಂದ್ರವಾಗಿ ಬೆಳೆಯುತ್ತಿದೆ. ವಿವಿಧ ಉಪನದಿಯಾಗಿರುವ ಮಾಂಜರಾ ಹಾಗೂ ಅದರ

ಉಪನದಿಯಾಗಿರುವ ಕಾರಂಜಾ ನದಿಗಳು ಜಿಲ್ಲೆಯ ಪ್ರಮುಖ ನದಿಗಳಷ್ಟೇ ಅಲ್ಲ ಈ ಪ್ರದೇಶ ನಾಗರಿಕತೆಯ ತೊಟ್ಟಿಲುಗಳು ಎನ್ನುವುದು. ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬಂದಿರುತ್ತದೆ.

ಅತಿ ಪ್ರಾಚೀನಕಾಲದ ಜನವಸತಿಯ ನೆಲೆಗಳು ಮಾಂಜರಾ ಹಾಗೂ ಕ್ಕರಂಜಾ ನದಿಗಳು ದಂಡೆಗಳ ಮೇಲೆ ಮತ್ತೇ ಕೆಲವಡೆ ಗುರುತಿಸಲಾಗಿದ್ದರು, ಈ ಭಾಗದ ನಿಜವಾದ ಇತಿಹಾಸ ಆರಂಭಗೊಳ್ಳುವುದು ನಚಿತರ ಹಾಗೂ ಮೌರ್ಯರ ಆಳ್ವಿಕೆ ಕಾಲದಿಂದ, ಅಶೋಕ ಚಕ್ರವರ್ತಿಯ ನಂತರ ಕ್ರಮೇಣ ಪ್ರಬಲ್ಯ ತಳೆದ ಶಾತವಾಹನರು ಈ ಭಾಗದಲ್ಲಿ ಕ್ರ.ಪೂ.230 ರಿಂದ ಕ್ರಿ.ಪೂ 199ರ ವರೆಗೆ ಅಳ್ವಿಕೆ ನಡೆಸಿದರು. ಆದಾದ ಮೇಲೆ ಬನವಾಸಿಯ ಕದಂಬರ ಪ್ರಭಾವಲಯಕ್ಕೆ ಸೇರಿದ ಈ ಭಾಗದಲ್ಲಿ ಸಿಂಥ ಮನೆತನದವರು ರಂಜೇರು (ಇಂದಿನ ಖೇಣಿ ರಂಜೋಳ) ವನ್ನು ತಮ್ಮ ರಾಜಧಾನಿಯಾಗಿಸಿಕೊಂಡು ಆಧೀನ ಅರಸರಾಗಿ ಆಳಿದರು. ಕುಂತಲದ ಭಾಗವಾಗಿದ್ದ ಈ ನಾಡು ಅಟ್ಟಳೆ ನಾಡು ಎಂದು ಪ್ರಸಿದ್ಧ ಪಡೆದಿತ್ತು. ವಿದರ್ಭದ ಪ್ರಭಾವವೂ ಈ ಭಾಗದಲ್ಲಿ ಆಗದೇ ಇರಲಿಲ್ಲ. ಮುಂದೆ (ಮಾನ್ಯ ಖೇಟ) ದ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿದ್ದಿತು. ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಬೀದರಿನ ಸಮೀಪದ ಕಂಬಿತಾಣ (ಇಂದಿನ ಕಮಠಾಣ) ವು ಜೈನರ ಪ್ರಸಿದ್ಧ ಕೇಂದ್ರವಾಗಿದ್ದಿತೆಂದು ತಿಳಿದುಬಂದಿದೆ.

ಬೀದರಿನ ಈ ಭಾಗವು ಇತಿಹಾಸದಲ್ಲಿ ಮಹತ್ವದ ಸ್ಥಾನ ತಳೆಯಲಾರಂಭಿಸಿದುದು ಬಾದಾಮಿ ಚಾಲುಕ್ಯರ ವಂಶಜನೆ ಆಗಿದ್ದ ಇಮ್ಮಡಿ ತೈಲನು ಕ್ರಿ.ಶ.973ರ ಸುಮಾರಿಗೆ ಕಲ್ಯಾಣ ಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಾಗಿನಿಂದ, ಇದೇ ಮನೆತನದ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲ (ಕ್ರಿ.ಶ.1076–1126) ದಲ್ಲಿ ಚಾಳುಕ್ಯ ಸ್ರಾಮಾಜ್ಯವು ನರ್ಮದಾ ನದಿಯವರೆಗೆ ವಿಸ್ತೃತಗೊಂಡಿತು. ಆದರೆ ಆತನ ಆಳ್ವಿಕೆಯ ಕೆಲವೇ ವರ್ಷಗಳನಂತರ ಕಳಚೂರಿ ಬಿಜ್ಜಳನು ಸ್ವತಂತ್ರನೆಂದು ಘೋಷಿಸಿ ಕೊಂಡನು. ಇದೇ ಸಮಯದಲ್ಲಿ ಶ್ರೀ ಬಸವೇಶ್ವರರು ಸಾಮಾಜಿಕ ಧಾರ್ಮಿಕ ಕ್ಷಾಂತಿಯನ್ನು ಕಲ್ಯಾಣದಿಂದ ಮೊಳಗಿಸಿದರು. ಕಾಯಕ ತತ್ವ ಸಾರಿದರು. ಕಲ್ಯಾಣಕ್ಕೆ ಅನೇಕ ಶರಣಶರಣೆಯರು ದೇಶದ ನಾನಾ ಕಡೆಗಳಿಂದ ಆಗಮಿಸಿದರು. ಅನುಭವ ಮಂಟಪ ಸ್ಥಾಪಿತ ಗೊಂಡಿತು. ವಚನ ಸಾಹಿತ್ಯ ಬೆಳೆದು ಬಂದು ಅಂದಿನ ಜನಜೀವನಕ್ಕೆ ತಾತ್ವಿಕ ನೆಲೆಯನ್ನು ಒದಗಿಸಿತು. ಸ್ತ್ರೀ ಸ್ವಾತಂತ್ರ್ಯಕ್ಕೆ ಸಂಕೇತವಾಗಿದ್ದ ಅಕ್ಕಮಹಾದೇವಿ ಅನುಭವ ಮಂಟಪದ ಕಣ್ಮಣೀಯಾಗಿದ್ದರು. ಅಲ್ಲಮ ಪ್ರಭುಗಳು ನೇತೃತ್ವ ನೀಡಿದರು.

ಕಲ್ಯಾಣ ಚಾಳುಕ್ಯರು ಅವನತಿಯ ನಂತರ ಈ ಭಾಗವು ದೇವಗಿರಿ ಯಾದವರ, ಆ ಮೇಲೆ ವರಂಗಲ್ಲಿನ ಕಾಕತೀಯರ ವಸವಾಯಿತು. ತೆಲುಗು ಸಾಹಿತ್ಯ ಕೃತಿಗಳಲ್ಲಿ ಬೀದರನ್ನು ಬೆಡಣದ ಕೋಟ ಎಂದು ಉಲ್ಲೇಖಿಸಲಾಗಿದೆ. ಕನ್ನಡದಲ್ಲಿ ಬಿದನೂರು

ಪುರವೆಂದು ಕ್ಪರೆಯಲಾಗಿದೆ. ವರಂಗಲ್ಲಿನ ಅರಸರಿಂದ ಉಲಾಖಾನ (ಮುಂದೆ ಮೊಹಮ್ಮದ ಬಿನ್ ತುಘಲಕ್)ನು ಬೀದರನ್ನು 1321 ರಲ್ಲಿ ವಶಪಡಿಸಿಕೊಂಡನು. ಮುಂದೆ 1347 ರಲ್ಲಿ ಇದು ಹೊಸದಾಗಿ ಸ್ಥಾಪಿತ ಬಹಮನಿ ಅರಸರು ತಮ್ಮ ರಾಜಧಾನಿಯನ್ನು ಗುಲಬರ್ಗಾದಿಂದ ಬೀದರಿಗೆ ವರ್ಗಾಯಿಸಿ ಕೊಂಡರು. ಬೀದರ ಕ್ರಮೇಣ ಮಹತ್ವದ ಕೇಂದ್ರವಾಗಿ ಬೆಳೆಯಿತು. ಮಧ್ಯ ಏಷ್ಯಾದಿಂದ ಜನಗಳು ಇಲ್ಲಿಗೆ ಬರಲಾರಂಭಿಸಿದರು. ಅಂತಹವರಲ್ಲಿ ಗಿಲಾನದಿಂದ ಬಂದ ಮಹ್ಮದ ಗವಾನ್ ಒಬ್ಬಾತ. ಆತನು ತನ್ನ ಪ್ರಮಾಣಿಕತೆ ಮತ್ತು ಪರಿಶ್ರಮದಿಂದ ಪ್ರಧಾನಮಂತ್ರಿಯ ಹುದ್ದೆಗೆ ಏರಿದ. ಇವನ ಬಳಿಕ ಮುಂದೆ ಬಹುಮನಿ ಸಾಮ್ರಾಜ್ಯ ಬಹಳ ಕಾಲ ಮುಂದುವರೆಯಲಿಲ್ಲ. ಐದು ರಾಜ್ಯಗಳಲ್ಲಿ ಹಂಚಿ ಹೋಯಿತು. ಬೀದರ ಚಿಕ್ಕ ರಾಜ್ಯವಾಗಿ ಬರೀದ ಶಾಹಿಗಳ ರಾಜ್ಯದ ರಾಜಧಾನಿಯಾಯಿತು. ಅದೂ ಉಳಿಯದೆ ವಿಜಾಪೂರ ಅದಿಲ್ ಶಾಹಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಔರಂಗಜೇಬನು 1656 ರಲ್ಲಿ ಇದನ್ನು ತನ್ನ ವಶಕ್ಕೆ ತೆಗೆದುಕೊಂಡು ಮೊಗಲ ಸಾಮ್ರಾಜ್ಯದ ಭಾಗವಹಿಸಿದ 18 ನೇ ಶತಮಾನದ ಬೀದರನಲ್ಲಿ ಈ ಭಾಗವು ಆಸಫ್ ಶಾಹಿ ಮನೆತನದ ನೈಜಾಮರ ಆಳ್ವಿಕೆಗೆ ಒಳಪಟ್ಟು ಭಾರತದ ಸ್ವತಂತ್ರ ನಂತರವು ನೈಜಮರ ಆಳ್ವಿಕೆಗೆ ಸೇರಿದಿತ್ತು. ವಿಮುಕ್ತಿಯನ್ನು --------- ಸೆಪ್ಟೇಂಬರ 17-1948 ರಂದು ನವೆಂಬರ್ 1-1956 ರಂದು ಕೇವಲ 4 ತಾಲೂಕುಗಳೊಂದಿಗೆ ಬೀದರ ಜಿಲ್ಲೆ ಮೈಸೂರು (ಇಂದಿನ ಕರ್ನಾಟಕ) ರಾಜ್ಯಕ್ಕೆ ಸೇರಿಕೊಂಡಿತು.

ಹವಮಾನ

ನಮ್ಮ ಭಾರತ ದೇಶದ ಸಂಪ್ರದಾಯ, ನೈತಿಕತೆ, ಸಂಸ್ಕೃತಿ, ಧಾರ್ಮಿಕತೆ, ಅಧ್ಯಾತ್ಮಿಕತೆ ಇವೆಲ್ಲವೂ ವೈಜ್ಞಾನಿಕತೆ ತಳಹದಿಯ ಮೇಲೆ ನಿರ್ಮಿಸಲ್ಪಟ್ಟಿವೆ ಎಂದರೆ ತಪ್ಪಾಗಲಾರದು. ಉದಾಹರಣೆಗೆ ಭಾರತೀಯ ಕೃಷಿಯು ಬಹುತೇಕ ಸಂಪ್ರದಾಯಕ ಜ್ಞಾನದ ಮೇಲೆ ಬೆಳೆದು ಬಂದ ಪದ್ಧತಿ. ಸಂಪ್ರದಾಯಕ ಜ್ಞಾನವು ತಾತ್ಸಾರ ಮಾಡುವಂತಹ ವಿಚಾರವೆನಲ್ಲ. ತಲೆತಲಾಚಿತರ ಅನುಭವವನ್ನು ಭಟ್ಟಿ ಇಳಿಸಿ ತೆಗೆದ ರಸಸಾರವೇ ಸಂಪ್ರದಾಯಿಕ ಜ್ಞಾನದ ಕೃಷಿಯ ತಳಹದಿ. ನಮ್ಮ ರೈತರಲ್ಲಿ ಇಂದಿಗೂ ಬಳಕೆಯಲ್ಲಿರುವ ಪಂಚಾಂಗವೇ ಇದಕ್ಕೆ ಒಂದು ಆದ್ವಿತಿಯ ಸಾಕ್ಷಿ. ಇದಕ್ಕೆ ಸರಿಸಾಟಿಯಾದ ಆನುಭವಜನ್ಯ, ಪರಿಷ್ಕೃತ ಜ್ಞಾನಭಂಡಾರವು ಜಗತ್ತಿನಲ್ಲಿ ಬೇರೆ ಎಲ್ಲಿಯೂ ದೊರಕುವುದಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ.

ಇದಕ್ಕನುಸಾರವಾಗಿ ಪ್ರಾಚೀನ ಕಾಲದಿಂದಲೂ ರೈತರು ಹಿಂದು ವರ್ಷದ ಆರಂಭದ ದಿನವಾದ ಯುಗಾದಿ ಪಾಡ್ಯಿಮೆಯ ದಿವಸ ಆಭ್ಯಂಗ ಸ್ನಾನ ಮಾಡಿ ಗೋಮಾತೆಯನ್ನು ಪೂಜಿಸಿ ಹೊಸ ವರ್ಷದ ಪಂಚಾಂಗ ಓದಿಸುವುದು ಪರಿಪಾಠ. ಆ ವರ್ಷದಲ್ಲಿ ಗೃಹಗಳ ಚಲನ-ವಲನದ ಮೇಲಿಂದ ಖಗೋಳಶಾಸ್ತ್ರ ಆಧಾರದಮೇಲೆ ಯಾವ ಯಾವ ಮಳೆಗಳು ಚೆನ್ನಾಗಿ ಬರುತ್ತವೆ ಯಾವ ಯಾವ ಬೆಳೆಗಳಿಗೆ ಬಲ

ಇರುತ್ತದೆ ಮತ್ತು ಯಾವ ಯಾವ ಬೆಳೆಗಳಿಗೆ ಹೆಚ್ಚು ಬೆಲೆ ಬರವುದೆಂಬುದನ್ನು ತಿಳಿದುಕೊಳ್ಳುತ್ತಿದ್ದರು.

ಖಗೋಳ ಶಾಸ್ತ್ರದ ಪ್ರಕಾರ ಗ್ರಹಗಳ ಚಲನ-ವಲನದಿಂದ ನಿರ್ದಿಷ್ಟ ಮಳೆ, ಗಾಳಿ, ಬಿಸಿಲು, ಒಣಹವೆ , ಬಿರುಗಾಳಿ, ಆರ್ದ್ರತೆ ತುಂಬಿದ ಹವೆ, ಚಳಿ, ಹಗಲು, ರಾತ್ರಿ, ಮಂಜು, ಇಬ್ಬನಿ ಮುಂತಾದವುಗಳು (ಹವಾಮಾನ) ಉಂಟಾಗುವುದೆಂಬುದು ಒಂದು ಸಿದ್ಧಾಂತ. ಗ್ರಹಣ, ಅಮವಾಸ್ಯೆ, ಹುಣ್ಣಿಮೆಗಳಾಗುವುದು. ಉತ್ತರಾಯಣ ಮತ್ತು ದಕ್ಷಿಣಾಯನಗಳಾಗುವುದು ಗ್ರಹಗಳ ಚಲನ ವಲನಗಳಿಂದಲೇ, ಈ ಗ್ರಹಗಳ ಚಲನ ವಲನಗಳನ್ನು ತಿಳಿಸುವದೇ ಖಗೋಳ ಶಾಸ್ತ್ರದ ಒಂದು ಭಾಗ. ಆದುದರಿಂದ ಕೃಷಿಗೂ ಹವಾಮಾನಕ್ಕೂ , ಖಗೋಳ ಶಾಸ್ತ್ರಕ್ಕೂ ಮತ್ತು ಪಂಚಾಂಗ ಶಾಸ್ತ್ರಕ್ಕೂ ನಿಕಟ ಸಂಬಂಧವಿದೆಯೆಂಬುದು ತಿಳಿಯುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ಅನೇಕ ರೀತಿಯಿಂದ ಮಾನವನು ನಿಸರ್ಗಕ್ಕೆ ಅತ್ಯಾಚಾರವೆಸಗುತ್ತಿದ್ದಾನೆ.

1) ಅರಣ್ಯ ತೋಪು, ಇನ್ನಿತರ ಗಿಡಮರಗಳನ್ನು ನಾಶ ಮಾಡುತ್ತಿದ್ದಾನೆ. ಇದರಿಂದ ಗಿಡಮರಗಳ ನೆರಳಿನಿಂದ ಆಗುವ ಲಾಭಗಳು ಇಲ್ಲದಂತಾಗಿದೆ. ಇದರಿಂದ ಮಳೆಯು ಕೂಡ ಕಡಿಮೆಯಾಗಿದೆಯೆಂದು ಭಾವಿಸಬಹುದು.

2) ಭೂಮಿಯ ಮೇಲಿದ್ದ ಜಲಾಶಯಗಳಾದ ಹೊಂಡ, ಕೆರೆ, ಸರೋವರ ಇವುಗಳ ನಾಶ ಈ ಜಲಾಶಯಗಳಿಂದ ನೀರು ಸೂರ್ಯನ ಬಿಸಿಲಿನಿಂದ ಆವಿಯಾಗಿ ಹೋದಾಗ ಸುತ್ತಲಿನ ವಾತಾವರಣ ತಂಪು ಮಾಡುವುದೆಂಬುದು ಒಂದು ವೈಜ್ಞಾನಿಕ ವಿಚಾರ. ಇವೆಲ್ಲವೂ ನಾಶವಾಗಿ ಹೋದಾಗ ವಾತಾವರಣದಲ್ಲಿ ತಂಪು ಎಲ್ಲಿಂದ ಬರಬೇಕು?

3) ದೊಡ್ಡ ದೊಡ್ಡ ಪಟ್ಟಣ ನಗರಗಳಲ್ಲಿ ದೊಡ್ಡ ದೊಡ್ಡ ಬಹುಮಹಡಿ ಕಾಂಕ್ರೀಟ ಕಟ್ಟಡಗಳು ಬರುತ್ತಿವೆ. ಇವು ಸೂರ್ಯನ ಶಾಖವನ್ನು ಹೀರಿ ಸುತ್ತಲಿನ ವಾತವಾರಣವನ್ನೆ ಉಷ್ಣಮಯವಾಗಿ ಮಾಡುತ್ತಿವೆ.

4) ಪೆಟ್ರೋಲ್ ಮತ್ತು ಡೀಸೆಲಗಳಿಂದ ಚಲಿಸುವ ವಾಹನಗಳ ಸಂಖ್ಯೆಯ ಅತೀ ಹೆಚ್ಚಾಗಿ ವಿಷ ಅನಿಲವನ್ನು ಉಗುಳುತ್ತಿವೆಯೆಂಬುದು ನಿಜವಾದ ಮಾತು. ಇದರಿಂದಲೂ ಪರಿಸರದಲ್ಲಿ ಮಾಲಿನ್ಯವು ಹೆಚ್ಚಾಗುವುದಲ್ಲದೆ ಉಷ್ಣತಾಮಾನವು ಹೆಚ್ಚಾಗುವುದು. ಅಂಚಿತೂ ಈಗ ಅನೇಕ ವಿಜ್ಞಾನಿಗಳಿಗೆ ಮತ್ತು ತಜ್ಞರಿಗೆ ಜಗತ್ತಿನಲ್ಲಿ ಉಷ್ಣಾಂಶವೇ ಹೆಚ್ಚಾಗುತ್ತಿದೆಯೆಂಬುವ ಸಂಗತಿ ಕಂಡು ಬರುತ್ತಿದೆ. ಈ ಕಾರಣಗಳಿಂದಲೇ "ಜಗತ್ತಿಗೆ ಜ್ವರ ಬರುತ್ತದೆಯೆಂಬ" ಗಾದೆ ಮಾತು ರೂಢಿಯಲ್ಲಿ ಬಂದಿದೆ. ಇದೊಂದು ಸೃಷ್ಟಿಯ ವೈಪರೀತ್ಯ.

ಹೊಸ ವರ್ಷದ ಪಂಚಾಗದಲ್ಲಿ ಯಾವ ನಕ್ಷತ್ರದ ಮಳೆಗಳು ಎಷ್ಟೆಷ್ಟು ಪ್ರಮಾಣದಲ್ಲಿ ಬೀಳುತ್ತವೆ ಯಾವ ಕೃಷಿ ಹಂಗಾಮಿನಲ್ಲಿ ಯಾವ ಯಾವ ಬೆಳೆಗಳನ್ನು ಬೆಳದರೆ ಲಾಭಾದಾಯಕ ಎಂಬುದನ್ನು ಗ್ರಹಗತಿಗಳ ಆಧಾರದ ಮೇಲೆ ಸೂಕ್ಷ್ಮ ರೀತಿಯಲ್ಲಿ ಪಂಚಾಂಗದಲ್ಲಿ ತಿಳಿಸಿರುವುದು ಕಂಡುಬರುತ್ತದೆ.

ಇದರ ಆಧಾರದ ಮೇಲೆ ರೈತರು ತಮ್ಮಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಯಾವ ಹಂಗಾಮಿನಲ್ಲಿ ಯಾವ ಬೆಳೆಯನ್ನು ಬೆಳೆಯಬೇಕೆಂಬದು ಯೋಚಿಸುತ್ತಿದ್ದರು. ಅಚಿದರೆ ಯುಗಾದಿ ಪಾಡ್ಯದಿಂದಲೇ ತಮ್ಮ ಯೋಜನೆ ಪ್ರಕಾರ ಬೇಕಾದ ಬೀಜ, ಗೊಬ್ಬರಗಳನ್ನು ಕೂಡಿಸಿಟ್ಟು ಕೊಳ್ಳುತ್ತಿದ್ದರು. ಇದಲ್ಲದೆ ತಾವು ಬೆಳೆದ ಬೆಳೆಗಳ ಬೀಜಗಳನ್ನು ತಾವೇ ತಯಾರು ಮಾಡಿ ಇಟ್ಟುಕೊಳುವ ರೂಢಿಯೂ ಇತ್ತು. ಅದಲ್ಲದೆ ಬೀಜಗಳನ್ನು ಮಯ್ಯದ ರೀತಿಯಲ್ಲಿ ಅಂದರೆ ಊರಲ್ಲೇ ಇರುವ ರೈತರಲ್ಲಿ ಒಳ್ಳೆಯ ಅಲಸಂದಿ ಬೀಜವಿದ್ದರೆ ಅದನ್ನು ತೆಗೆದುಕೊಂಡು ಅದಕ್ಕೆ ಬದಲಾಗಿ ತನ್ನಲಿನ ಹೆಸರು ಬೀಜವನ್ನು ಕೊಡುತ್ತಿದ್ದರು. ಈ ವ್ಯವಹಾರಕ್ಕೆ ಮುಯ್ಯ ಎನ್ನುವರು. ಈ ಮುಯ್ಯ ಶಬ್ದವು ಇನ್ನೂ ಉತ್ತರ ಕರ್ನಾಟಕ ರೈತರಲ್ಲಿ ಬಳಕೆಯಲ್ಲಿದೆ. ಮತ್ತೊಂದು ರೀತಿಯೆಂದರೆ ಕಡ ತೆಗೆದುಕೊಳ್ಳುವುದು. ಅಂದರೆ ಊರಲ್ಲೇ ಬೇರೂಬ್ಬ ರೈತನ ಬಳಿ ಹೆಚ್ಚು ಬೀಜವಿದ್ದರೆ ಅದನ್ನು ಕಡ ತೆಗೆದುಕೊಂಡು, ಅದನ್ನು ಬಿತ್ತಿ ಬೆಳೆ ಬಂದ ನಂತರ ಕಡ ತಂದ ಬೀಜವನ್ನು ಆ ರೈತನಿಗೆ ಹಿಂದಿರುಗಿಸುವುದು. ಈ ಕಡ, ಮುಯ್ಯಗಳೇ ಸಹಕಾರದ ಮೂಲಭೂತ ತತ್ವಗಳು.

ಮಳೆ ಆಶ್ರಯದಲ್ಲಿ ಬೆಳೆ ಕ್ಷೇತ್ರಗಳಲ್ಲಿ ರೈತರು ಬಿತ್ತನೆ ಆಗುವ ಅಂದರೆ ಹದ ಮಳೆ ಬಂದತಕ್ಷಣ ತಾವು ಮುಂಚಿತವಾಗಿಯೇ ಕೂಡಿಸಿಟ್ಟುಕೊಂಡು ಬೀಜ, ಗೊಬ್ಬರಗಳನ್ನು ಹಾಕಿ ಹದ ಕಳೆದುಕೊಳ್ಳದಂತೆ ಬಿತ್ತನೆ ಮಾಡುತ್ತಿದ್ದರು. ಇದೊಂದು ಸುಲಭೋಪಾಯ. ಮಳೆ ಆಶ್ರಿತ ಬೇಸಾಯದಲ್ಲಿ ಹದ ಸಿಗುವುದು 8–10 ದಿನಗಳು ಮಾತ್ರ ಆದೂ ಕೂಡ ಅನಿಶ್ಚಿತ. ಆದ್ದರಿಂದ ಹದ ಸಿಕ್ಕಾಗ ಬಿತ್ತನೆ ಮಾಡುವುದಕ್ಕೆ ಎಲ್ಲಾ ಪೂರ್ವ ಸಿದ್ಧತೆ ಮಾಡಿಕೊಂಡಿರುತ್ತಿದ್ದರು. ನನಗೀಗ 90 ವರ್ಷ 10 ವರ್ಷದವನಾಗಿದ್ದನಿಂದ ಅಂದರೆ 80 ವರ್ಷಗಳ ಹಿಂದೆ ನಾನು ಮೇಲೆ ಹೇಳಿದ ಎಲ್ಲವನ್ನು ವೀಕ್ಷಿಸಿದ್ದೇನೆ , ನೋಡಿದ್ದೇನೆ ಮತ್ತು ತಿಳಿದುಕೊಂಡಿದ್ದೇನೆ. ಆದುದರಿಂದ ರೈತರು ತೊಂದರೆಗೆ ಬೀಳುತ್ತಿರಲಿಲ್ಲ . ಅವರು ಬೀಜದ ಗೋಬರಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗವು ಬರುತ್ತಿರಲಿಲ್ಲ. ಈಗಿನ ಕಾಲದ ರೈತರು ಮೇಲೆ ಹೇಳಿದ ವಿಷಯಗಳ ಮರ್ಮ ತಿಳಿದು, ಮೊದಲೇ ಸಿದ್ಧತೆಯಲ್ಲಿರಬೇಕು. ಮಳೆ ಬಿದ್ದು ಹದ ಸಿಕ್ಕಾಗ ಬೀಜ ಗೊಬ್ಬರವಿಲ್ಲವೆಂದು ಯೋಚಿಸಿದರೆ ಬಿತ್ತುವ ಹದ ಮುಗಿದು ಹೋಗುತ್ತದೆ. ಅದಕ್ಕಾಗಿಯೇ ಈ ಗಾದೆಯ ಮಾತು "ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೆಗೆದಂತೆ" ಎಂದು. ಈಗಿನ ಕಾಲದಲ್ಲಿ ಇದು ಕೃಷಿ ಇಲಾಖೆ ಮತ್ತು ಬೀಜ ಗೊಬ್ಬರ ವ್ಯಾಪರಸ್ಥರಿಗೂ ಅನ್ವಯವಾಗುತ್ತದೆ.

ಕೃಷಿಕರೆಲ್ಲರೂ ಮುಂಗಾರು ಹಂಗಾಮು (ಖರೀಫ್) ಹಿಂಗಾರು ಹಂಗಾಮು (ರಬಿ) ಮತ್ತು ಬೇಸಿಗೆ ಹಂಗಾಮು ಹೀಗೆ ವರ್ಷದಲ್ಲಿ ಈ ಮೂರು ಕೃಷಿ ಹಂಗಾಮುಗಳನ್ನು ಚೆನ್ನಾಗಿ ತಿಳಿದವರಾಗಿದ್ದರು. ಈ ಮೂರು ಕೃಷಿ ಹಂಗಾಮುಗಳನ್ನು ಗುರುತಿಸಿಕೊಳ್ಳಲು ಮಳೆ ನಕ್ಷತ್ರಗಳನ್ನು ಆಧಾರವಾಗಿ ಇಟ್ಟುಕೊಳ್ಳುತ್ತಾರೆ. ಮೃಗ ಪಂಚಕ ಮಳೆಗಳಾದ, ಮೃಗಶೀರಾ, ಆರಿದ್ರಾ, ಪುನರ್ವಸು, ಪುಷ್ಯ ಮತ್ತು ಅಶ್ಲೇಷಾ ಈ ಐದು ಮಳೆಗಳ ಅವಧಿಗೆ ಮುಂಗಾರು ಹಂಗಾಮು ಎಂದು ಕರೆಯುತ್ತಾರೆ. ಮಘ ಪಂಚಕ ಮಳೆಗಳಾದ ಮಘಾ, ಉತ್ತರ, ಹಸ್ತ, ಚಿತ್ತ ಮತ್ತು ಸ್ವಾತಿ ಈ ಐದು ಮಳೆಗಳ ಅವಧಿಗೆ ಹಿಂಗಾರು ಹಂಗಾಮು ಎಂದು ಕರೆಯುತ್ತಾರೆ.

ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಬೆಳೆಗಳನ್ನು ಮಳೆ ಆಶ್ರಯ ಮತ್ತು ನೀರಾವರಿ ಆಶ್ರಯದಲ್ಲಿ ಬೆಳೆಯಬಹುದು. ಆದರೆ ಬೇಸಿಗೆ ಹಂಗಾಮಿನಲ್ಲಿ ನೀರಾವರಿ ಆಶ್ರಯದಲ್ಲಿ ಮಾತ್ರ ಬೆಳೆಗಳನ್ನು ಬೆಳೆಯಲು ಸಾಧ್ಯ.

ಸಂಪನ್ಮೂಲಗಳು :

ಸಂಪನ್ಮೂಲಗಳು :–

ಯಾವುದೇ ಪ್ರದೇಶದಲ್ಲಿರುವ ಸಂಪನ್ಮೂಲಗಳು ಆ ಪ್ರದೇಶದ ಅಭಿವೃದ್ಧಿಗೆ ಸಹಾಯಕ–ವಾಗಿರುತ್ತವೆ. ವೈಜ್ಞಾನಿಕ ತಂತ್ರವನ್ನು ಅಳವಡಿಸಿ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚಾಗಿ ಬಳಸುವುದು ಆಧುನಿಕ ಜಗತ್ತಿನಲ್ಲಿ ಹೊಸ ವಿಷಯವೇನಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಅದರಲ್ಲೂ ಜಪಾನಿನಂತಹ ಸಣ್ಣ ದೇಶದಲ್ಲಿ ಸಂಪನ್ಮೂಲಗಳನ್ನು ಬಳಸುವುದು ಒಂದು ವಿಶಿಷ್ಟ ಕಲೆಯಾಗಿದೆ. ಸಂಪನ್ಮೂಲಗಳು ಎಷ್ಟೇ ಇರಬಹುದು. ಆದರೆ ಅದನ್ನು ವ್ಯವಸ್ಥಿತವಾಗಿ ಬಳಸದೆ. ಇದ್ದಾಗ ಆ ಪ್ರದೇಶ ಆರ್ಥಿಕವಾಗಿ ಹಿಂದುಳಿದ ಪ್ರದೇಶ ಎನಿಸಿಕೊಳ್ಳುತ್ತದೆ. ಕೆಲವೊಮ್ಮೆ ಒಂದು ವಸ್ತುವಿನ ಉತ್ಪಾದನೆಗೆ ಅಗತ್ಯವಾದ ಕಚ್ಚಾವಸ್ತುಗಳಲ್ಲಿ ಕೆಲವು ಮಾತ್ರ ಲಭ್ಯವಿರಬಹುದು. ಇಂತಹ ಸನ್ನಿವೇಶದಲ್ಲಿ ಉಳಿದ ಬೇಕಾದ ಕಚ್ಚಾವಸ್ತುಗಳನ್ನು ಅವು ದೊರೆಯುವ ಪ್ರದೇಶಗಳಿಂದ ತರಿಸಿಕೊಂಡು ಕೈಗಾರಿಕೆಗಳನ್ನು ಸ್ಥಾಪಿಸುವುದು ಉಚಿತವಾಗುತ್ತದೆ. ಇದರ ಜೊತೆಗೆ ಕುಲಕಸಬುಗಳಲಿ ಪ್ರಾವೀಣ್ಯತೆ ಪಡೆದಿರುವ ಮಾನವ ಶಕ್ತಿಯನ್ನು ಒಂದು ಸಂಪನ್ಮೂಲವೆಂದು ಪರಿಗಣಿಸಿ ಅಂಥವರನ್ನು ಉತ್ತೇಜಿಸುವ ಅಗತ್ಯವೂ ಇರುತ್ತದೆ. ಈ ದೃಷ್ಟಿಯಿಂದ ಎಲ್ಲ ರೀತಿಯ ಸಂಪನ್ಮೂಲಗಳು ನಾಡಿನ ಆರ್ಥಿಕ ಪ್ರಗತಿಗೆ ನೆರವಾಗುವ ಮೂಲಗಳೆಂದು ಪರಿಗಣಿಸಬೇಕಾಗುತ್ತದೆ. ನದಿ ನೀರು ಹರಿಯುತ್ತಿರಬಹುದು. ಆದರೆ ಅದು ವ್ಯವಸಾಯಕ್ಕೆ ನೆರವಾಗುವಂತೆ ಮಾಡಿಕೊಳ್ಳುವುದು ಮುಖ್ಯವಲ್ಲವೇ ? ಸಂಪನ್ಮೂಲಗಳನ್ನು ಮುಖ್ಯವಾಗಿ ಭೂಮಿ, ಜಲ, ಖನಿಜ, ಪಶು, ಮಾನವ ಸಂಪನ್ಮೂಲಗಳೆಂಬುದಾಗಿ ಸ್ಥೂಲವಾಗಿ ವಿಂಗಡಿಸಿಕೊಳ್ಳಬಹುದು. ಬೀದರ ಜಿಲ್ಲೆಯಲ್ಲಿ ಇವುಗಳು ಇರುವಿಕೆಯನ್ನು ತಿಳಿಯೋಣ.

ಭೂಮಿ, ಮಣ್ಣು :–

ಬೀದರ ಜಿಲ್ಲೆ ಸಮುದ್ರಮಟ್ಟದಿಂದ ಸುಮಾರು 914 ಮಿಟರ್ ಎತ್ತರದಲ್ಲಿದೆ. ಇಲ್ಲಿನ ಹವೆ ಆರೋಗ್ಯಕರ ಹಾಗೂ ಹಿತವಾಗಿರುತ್ತದೆ. ಸಾಮಾನ್ಯವಾಗಿ ಬೇಸಗೆಯಲ್ಲಿ ಉಷ್ಣತೆ ಹೆಚ್ಚಾಗಿರುತ್ತದೆ. ಮುಂಗಾರು ಮಳೆಗಾಲ ಬಿಟ್ಟರೆ ಉಳಿದ ದಿನಗಳಲ್ಲಿ ಶುಷ್ಕ ವಾತಾವರಣವಿರುತ್ತದೆ, ಡಿಸೆಂಬರ್‌ನಲ್ಲಿ ಚಳಿ ಹೆಚ್ಚು, ಸೆಪ್ಟೆಂಬರ್‌ನಲ್ಲಿ ಮಳೆ ಅತಿಯಾಗಿರುತ್ತದೆ. ಒಟ್ಟಾರೆ ಜಿಲ್ಲೆಯಲ್ಲಿ ಮಳೆ ಅಷ್ಟೇನೂ ಹೆಚ್ಚಾಗಿ ಬೀಳುವುದಿಲ್ಲ.

ಬೀದರ ಜಿಲ್ಲೆಯ ಮಣ್ಣು ಎರಡು ತೆರನಾದುದು. ಕಪ್ಪು ಮಣ್ಣು ಹಾಗೂ ಜಂಬುಕಲ್ಲಿನ ಮಿಶ್ರಣವಿರುವ ಮಣ್ಣು ಪ್ರದೇಶ ಎಮದು ಗುರುತಿಸಲಾಗುತ್ತದೆ. ಔರಾದ ಹಾಗೂ ಭಾಲ್ಕಿ ತಾಲ್ಲೂಕುಗಳು ದಟ್ಟವಾದ ಕಪ್ಪು ಮಣ್ಣಿನ ಪ್ರದೇಶಗಳಾಗಿವೆ. ಇಲ್ಲಿ ದೊರೆಯುವ ಮಣ್ಣು ಜೇಡಿ ಹಾಗೂ ಮರಳು ಬೆರೆತ ಜೇಡಿಮಣ್ಣು, ಇವುಗಳ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಬಹು ಕಡಿಮೆ. ಬಸವಕಲ್ಯಾಣ ತಾಲ್ಲೂಕಿನ ಅರ್ಧದಷ್ಟು ಭಾಗ ಕಪ್ಪು ಮಣ್ಣಿನ ಪ್ರದೇಶವಾಗಿದೆ. ಉಳಿದ ಭಾಗವೆಲ್ಲ ಜಂಬುಮಣ್ಣಿನ ಭೂಮಿ, ಜಂಬುಮಣ್ಣಿನ ಭೂಮಿಯನ ನು ಬೀದರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಾಣುತ್ತೇವೆ. ಹುಮನಾಬಾದ ತಾಲ್ಲೂಕಿನ ಬಹಳಷ್ಟು ಪ್ರದೇಶ ಜಂಬಿಟ್ಟಿಗೆಯದು. ಉಳಿದ ಭಾಗವೆಲ್ಲ ಮಧ್ಯಮ ದರ್ಜೆಯ ಕಪ್ಪು ಮಣ್ಣಿನಿಂದಾವೃತವಾಗಿರುತ್ತದೆ. ಈ ತಾಲ್ಲೂಕಿನ ಭೂಮಿ ಕೆಂಪುಮಿಶ್ರಿತ ಕಪ್ಪು ಮಣ್ಣಿನ ಭೂಮಿ ಕೆಲವೆಡೆ ಇದೆ. ಬಸವಕಲ್ಯಾಣ ತಾಲ್ಲೂಕಿನ ಭೂಮಿ ವ್ಯವಸಾಯಯೋಗ್ಯವಾಗಿದೆ. ಬಿತ್ತಿದುದನ್ನು ಬೆಳೆದುಕೊಡುವ ಹುಲುಸಾದ ನೆಲ ಬೀದರ ಜಿಲ್ಲೆಯ ದೊಡ್ಡ ಸಂಪತ್ತು.

ಬೀದರ ಜಿಲ್ಲೆಯ ನದಿ, ಕೆರೆಗಳು :–

ನದಿ, ಕೆರೆಗಳು ಮುಖ್ಯವಾಗಿ ಜಲಸಂಪನ್ಮೂಲಗಳು. ಯಾವುದೇ ಕೆಲಸಕ್ಕೆ ನೀರು ಬಹುಮಟ್ಟಿಗೆ ಅಗತ್ಯವಾದ ವಸ್ತು, ಅದರಲ್ಲೂ ವ್ಯವಸಾಯಕ್ಕೆ ನೀರೆ ಆಧಾರ. ಆಲಸಂಪತ್ತಿನ ಮೂಳಾಧಾರ ನೈರುತ್ಯ ಮತ್ತು ಈಶಾನ್ಯ ಮಾರುತಗಳಿಂದ ಒದಗುವ ಮಳೆ.

ಬೀದರ ಜಿಲ್ಲೆಯಲ್ಲಿ ಎರಡು ಮುಖ್ಯ ನದೀ ಜಲಾನಯನ ಭೂಮಿಗಳನ್ನು ಕಾಣಬಹುದು. ಗೋದಾವರಿ ಹಾಗೂ ಕೃಷ್ಣಾ ನದಿಗಳ ಉಪ ನದಿಗಳು ಜಿಲ್ಲೆಯಲ್ಲಿ ಹರಿಯುತ್ತವೆ. ಈಲ್ಲೆಯ ಮುಖ್ಯ ನದಿ ಮಾಂಜರಾ. ಇದು ಗೋದಾರಿಯ ಉಪನದಿ, ಕಾರಂಜಾ ನದಿ ಮಾಂಜರಾ ನದಿಯ ಉಪನದಿಯಾಗಿದ್ದು ಜಿಲ್ಲೆಯ ಇನ್ನೊಂದು ಅತಿ ಮುಖ್ಯ ನದಿಯಾಗಿದೆ. ಮುಲ್ಲಾಮಾರಿ ನದಿ ಭೀಮಾನದಿಯ ಮುಖ್ಯ ಉಪನದಿಯಾದ ಕಾಗಿಣಾ ನದಿಯ ಉಪ ನದಿಯಾಗಿದೆ. ಹೀಗಾಗಿ ಮುಲ್ಲಾಮಾರಿ ಕೃಷ್ಣಾನದಿ ಜಾಲದ ಒಂದು ನದಿಯಾಗಿದೆ. ಈ ಮೂರು ನದಿಗಳು ಮತ್ತು ಅವುಗಳಿಗೆ ಸಿದ್ಧವಾಗಿರುವ

ಯೋಜನೆಗಳು ಬೀದರ ಜಿಲ್ಲೆಯ ಭಾಗ್ಯವನ್ನು ಹೆಚ್ಚಿಸುತ್ತವೆ. ಈ ನದಿಗಳು ಹಾಗೂ ಮತ್ತಿತರ ಹೊಳೆಗಳು ಯಾವುವೂ ಪ್ರವಾಹಭೀತಿಯನ್ನು ಹುಟ್ಟಿಸುವ ನದಿಗಳಾಗಿರುವುದಿಲ್ಲ.

ಪಶುಸಂಪತ್ತು :–

ಮಾನವ ಹಸು, ಎಮ್ಮೆ, ಕುರಿ, ಮೇಕೆ, ಕೋಳಿ ಮೊದಲಾದ ಪ್ರಾಣಿ ಪಕ್ಷಿಗಳನ್ನು ಪಳಗಿಸಿ ತನ್ನ ಅನುಕೂಳಕ್ಕಾಗಿ ಬಳಸಿ ಕೊಂಡಿದ್ದಾನೆ. ಅದೊಂದು ನಿರಂತರವಾದ ಕಾರ್ಯ. ಹಸುಗಳಿಲ್ಲದೆ ಹಾಲಿನ ಉತ್ಪಾದನೆ ಇಲ್ಲ. ಹಾಲನ್ನು ಮೂಲ ವಸ್ತು ವಾಗಿಟ್ಟುಕೊಂಡ ಕೈಗಾರಿಕೆಗಳೇ ಇವೆ. ಸಾಧುವಾದ ಹಾಗೂ ಉಪಯುಕ್ತವಾದ ಪ್ರಾಣಿಗಳನ್ನು ಸಾಕುಪ್ರಾಣಿಗಳೆನ್ನುತ್ತಾರೆ. ಇವು ಒಂದು ಪ್ರದೇಶದ ಸಂಪತ್ತೂ ಹೌದು. ಮನುಷ್ಯ ತನ್ನ ಆಹಾರ, ಬಟ್ಟೆ ಹಾಗೂ ಕೆಲವು ದಿನಬಳಕೆಯ ಸಾಮಾನುಗಳ ತಯಾರಿಕೆಗೆ ಸಾಕುಪ್ರಾಣಿಗಳನ್ನು ಅವಲಂಬಿಸುತ್ತಾನೆ. ಪಶುಸಂಪತ್ತನ್ನು ಕುರಿತು ಹೇಳುವಾಗ ಮುಖ್ಯವಾಗಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಹಂದಿ, ಒಂಟೆ, ಕುದುರೆ, ಕೋಳಿ ಇವುಗಳನ್ನು ಪರಿಗಣಿಸಲಾಗುತ್ತದೆ.

ಬೀದರ ಜಿಲ್ಲೆಯಲ್ಲಿನ ಸಾಕುಪ್ರಾಣಿಗಳು ಮುಖ್ಯವಾಗಿ ಹಸು, ಎಮ್ಮೆ, ಕುರಿ, ಮೇಕೆ, ಒಂಟೆ, ಇವು ಕೋಳಿಗಳನ್ನು ಸಾಕಲಾಗುತ್ತದೆ.

ಬೀದರ ಜಿಲ್ಲೆಯಲ್ಲಿ ಕಂಡುಬರುವ ದನಗಳ ತಳಿ ದೇವನಿತಳಿ. ಈ ತಳಿಯ ದನಗಳು ಎತ್ತರವಾಗಿದ್ದು, ಮೈಮೇಲೆ ಕಪ್ಪು ಕಲೆಗಳನ್ನು ಹೊಂದಿರುತ್ತದೆ. ಎದೆ ಆಳವಾಗಿದ್ದು, ಸ್ನಾಯುಗಳು ಬಲವಾಗಿರುತ್ತವೆ. ದೇವನಿ ತಳಿಯ ಎತ್ತುಗಳು ವ್ಯವಸಾಯದ ಕೆಲಸಗಳಿಗೆ ಒದಗುತ್ತವೆ. ಔರಾದ ತಾಲ್ಲೂಕಿನ ದೇವನಿ ಎತ್ತುಗಳು ಪ್ರಸಿದ್ಧವಾದವು. ಹಸುಗಳು ಉಳಿದ ತಳಿಗಳಿಗಿಂತ ಹೆಚ್ಚು ಹಾಲನ್ನು ಕೊಡುತ್ತವೆ. ಹಾಲಿಗೆ ಪೆಡಸೂ ಹೆಚ್ಚು. ಬೀದರ ಜಿಲ್ಲೆಯ ಕೆಲವು ಭಾಗಗಳಲ್ಲಿ ಒಂಟೆಗಳನ್ನು ಸರಕುಗಳ ಸಾಗಾಣಿಕೆಗೆ ಬಳಸಲಾಗುತ್ತಿದೆ. ಇಡೀ ರಾಜ್ಯದಲ್ಲಿ ಒಂಟೆಗಳ ಸಂಖ್ಯೆ ಹೆಚ್ಚು ಇರುವುದು ಬೀದರ ಜಿಲ್ಲೆಯಲ್ಲಿ. ದೇಶಿ ತಳಿಗಳ ಕೋಳಿಗಳು ಜಿಲ್ಲೆಯಲ್ಲಿ ಹೆಚ್ಚಾಗಿವೆ. ವೈಟಲೆಗ್ ಹಾರ್ನ್ ಮತ್ತು ರೋಡ್ ಐಲೆಂಡರೆಡ್ ತಳಿಗಳ ಕೋಳಿಗಳ ಅಭಿವೃದ್ಧಿಗೆ ಯತ್ನಿಸಲಾಗಿವೆ.

ಔರಾದ ಮತ್ತು ಹುಮಾಬಾದ್ ತಾಲ್ಲೂಕುಗಳ ಗುಡ್ಡ ಗಾಡು ಪ್ರದೇಶ ಮತ್ತು ಬೀದರ ತಾಲ್ಲೂಕಿನ ಪ್ರಸ್ಥಭೂಮಿ ಪ್ರದೇಶ ಕುರಿಸಾಕಾಣಿಕೆಗೆ ಸೂಕ್ತವಾಗಿದೆ. ಹಂದಿಗಳ ಸಂಖ್ಯೆ ಕಡಿಮೆ. ಜಿಲ್ಲೆಯಲ್ಲಿ ಪಶುವೈದ್ಯಾಲಯಗಳೂ ಪಶುವೈದ್ಯ ಸಂಸ್ಥೆಗಳೂ ಇವೆ. ಕೋಳೀಫಾರಂಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ ಕೋಳಿ ಸಾಕಾಣೆಯನನು ಅಭಿವೃದ್ಧಿ ಪಡಿಸಲು ಬೀದರದಲ್ಲಿ ಪ್ರಾದೇಶಿಕ ಕೋಳಿ ಫಾರಂ ಅನ್ನು ಸ್ಥಾಪಿಸಲಾಗಿದೆ. ಜಿಲ್ಲೆಯ

ಪಶು ಸಂಪತ್ತಿನ ವಿವರ ಹೀಗಿದೆ. ದನಗಳು 3,32,945 ಎಮ್ಮೆಗಳು 1,39,632 ಕುರಿಗಳು 76,339 ಮೇಕೆಗಳು 97,167 ಹಂದಿಗಳು 8,899, ಕುದುರೆಗಳು 1,978 ಒಂಟೆಗಳು 215 ಕೋಳಿಗಳು 1,11,458 ಇತರೆ ಪ್ರಾಣಿಗಳು 3,707.

ಖನಿಜ ಸಂಪನ್ಮೂಲಗಳು :–

ಬೀದರ ಜಿಲ್ಲೆಯ ಮೂರನೆಯ ಭೂಯುಗದ ದಖನ್ ಟ್ರ್ಯಾಪ್ ಶಿಲಾರಸದಿಂದಾವರಿಸಿದೆ. ದಖನ್ ಟ್ರ್ಯಾಪ್ ಶಿಲೆಗಳು ಅಗ್ನಿಶಿಲೆ ರಸಗಳಿಂದ ಕೂಡಿದವಾಗಿದೆ. ಇವು ಸಾಮಾನ್ಯವಾಗಿ ಚಪ್ಪಟೆಯಾಗಿರುವ ತುದಿಯ ಗುಡ್ಡಗಳನ್ನು ಸೃಷ್ಟಿಸುತ್ತವೆ. ಕೆಲವು ಗಟ್ಟಿ ಮತ್ತು ಘನಾಕೃತಿಯಾದರೆ ಕೆಲವು ಮೃದು ಹಾಗೂ ಪುಡಿ ಮಾಡಬಹುದಾದಂಥ ಟ್ರ್ಯಾಪ್‌ಗಳು. ಈ ಟ್ರ್ಯಾಪ್‌ಗಳು ಅಂದರೆ ಸ್ತಂಭರಚನೆಯ ಶಿಲೆಗಳು ಸಮುದ್ರಮಟ್ಟದಿಂದ 618 ಮಿಟರ್ ಎತ್ತರದಲ್ಲಿ ಕಾಣಿಸಿಕೊಳ್ಳುತ್ತವೆ. ಬೀದರ ಮತ್ತು ಹುಮನಾಬಾದ್ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ದಖನ್ ಟ್ರ್ಯಾಪ್‌ಗಳ ಮೇಲುಪದರಗಳು ಕೆಂಬಣ್ಣದ ಜಂಬಿಟ್ಟಿಗೆ ಮಣ್ಣಾಗಿ ಪರಿವರ್ತಿತಗೊಂಡು ಏರಿಳಿತಗಳ ಪ್ರಸ್ಥಭೂಮಿಯನ್ನುಂಟು ಮಾಡುತ್ತವೆ. ಈ ಜಂಬಿಟ್ಟಿಗೆ ಮಣ್ಣು ಗಾತ್ರದಲ್ಲಿ 18 ರಿಂದ 24 ಮಿಟರುಗಳಷ್ಟು ದಪ್ಪ ಇರುತ್ತದೆ. ಇವನ್ನು ಇಟ್ಟಿಗೆಗಳ ರೂಪಕ್ಕೆ ಕತ್ತರಿಸಿ ತೆಗೆಯಬಹುದು. ಇವು ಮೃದುವಾಗಿಯೂ ಸಣ್ಣ ರಂಧ್ರಗಳುಳ್ಳದ್ದಾಗಿಯೂ ಇರುತ್ತವೆ. ಬೀದರ, ಹುಮನಾಬಾದ್ ಮತ್ತು ಬಸವಕಲ್ಯಾಣ ತಾಲ್ಲೂಕುಗಳ ಎಷ್ಟೋ ಕಟ್ಟಡಗಳನ್ನು ಈ ಇಟ್ಟಿಗೆಗಳಿಂದಲೇ ಕಟ್ಟಲಾಗಿದೆ. ಜಂಬಿಟ್ಟಿಗೆ ಮಣ್ಣಿನ ಸಚ್ಛಿದ್ರತೆಯಿಂದಾಗಿ ಮಳೆ ನೀರು ಅವುಗಳ ಮೂಲಕ ನೆಲದೊಳಗಿಳಿದು ಅಂತರ್ಜಲದ ಸಂಪತ್ತನ್ನು ಹೆಚ್ಚಿಸುತ್ತದೆ. ಬಸವಕಲ್ಯಾಣ ತಾಲ್ಲೂಕು ಘನೀಭೂತ ಲಾವಾರಸದಿಂದ ಆದ ಟ್ರ್ಯಾಪ್ ಕಲ್ಲು ಮತ್ತು ಅದರಿಂದ ರೂಪಾಂತರವಾದ ಜಂಬುಕಲ್ಲು ಇರುವ ಪ್ರದೇಶವಾಗಿದೆ.

ಬೀದರ ಜಿಲ್ಲೆಯಲ್ಲಿ ಹೇಳಿಕೊಳ್ಳಬಹುದಾದಂತಹ ಆರ್ಥಿಕ ಪ್ರಗತಿಗೆ ನೆರವಾಗುವ ಖನಿಜ ನಿಕ್ಷೇಪಗಳಿಲ್ಲ. ಬಾಕ್ಸೈಟ್, ಕಯೋಲಿನ್ ಹಾಗೂ ಕಾವಿ ಮಣ್ಣು ಇವು ಮುಖ್ಯ ಖನಿಜಗಳು. ಕಟ್ಟಡ ನಿರ್ಮಾಣ ವಸ್ತುಗಳೂ ಈ ಜಿಲ್ಲೆಯಲ್ಲಿ ಸಿಗುತ್ತವೆ.

ಶೇಕಡಾ 35 ರಿಂದ 40ರಷ್ಟು ಅಲ್ಯೂಮಿನವನ್ನೊಳಗೊಂಡ ಮರಳುಮಿಶ್ರಿತ ಬಾಕ್ಸೈಟ್ ಜೇಡು ಬಸವಕಲ್ಯಾಣಕ್ಕೆ ಮೂರು ಕಿಲೋಮಿಟರುಗಳ ದೂರದಲ್ಲಿ ಸಿಗುತ್ತದೆಂದು ಸಂಶೋಧನೆಗಳಿಂದ ತಿಳಿದುಬಂದಿದೆ. ಇದೇ ಖನಿಜ ಬೀದರ ತಾಲ್ಲೂಕಿನ ಕಮಠಾಣಹಳ್ಳಿ ಹಾಗೂ ಚಟ್ನಳ್ಳಿಯ ಪಶ್ಚಿಮದಲ್ಲೂ ಮನಖೇಡದ ನೈಋತ್ಯದಲ್ಲೂ ಸಿಗುತ್ತದೆ.

ಕಯೋಲಿನ್ ಅಥವಾ ಬಿಳಿಜೇಡು ಶುದ್ಧ ಸ್ಥಿತಿಯಲ್ಲಿ ನುಣ್ಣಗೆ, ಪುಡಿಯಾಗಿಯೂ ಜಿಗುಟಾಗಿಯೂ ಇರುತ್ತದೆ. ಬೀದರ ತಾಲ್ಲೂಕಿನ ಕಮಠಾಣ ಹಳ್ಳಿಯ ಬಳಿ ಕಯೋಲಿನ್‌ನ ದೊಡ್ಡ ನಿಕ್ಷೇಪವಿದೆ. ಇದೇ ಖನಿಜ ರಾಜೇಶ್ವರ, ರಾಜೋಳ ಮತ್ತು

ಕನಕಟ್ಟಾ ಹಳ್ಳಿಗಳ ಬಳಿಯೂ ಸಿಗುತ್ತದೆ. ಬಿಳಿಜೇಡಿನ ಗಣಿಯ ಕೆಲಸ ಈ ಹಿಂದೆಯೇ ಆರಂಭವಾಗಿ ವರ್ಷಕ್ಕೆ 1000 ಟನ್ನು ಗಳಷ್ಟು ಬಿಳಿಜೇಡನ್ನು ಹೊರತೆಗೆಯಲಾಗುತ್ತಿದೆ. ಬಿಳಿಜೇಡಿನಿಂದ ಪಿಂಗಾಣಿ ಸಾಮಾನುಗಳನ್ನು ವಿದ್ಯುತ್ ಅವಾಹಕಗಳನು ಮತ್ತು ಇತರ ಅನೇಕ ವಸ್ತುಗಳನ್ನು ತಯಾರಿಸಬಹುದಾಗಿರುತ್ತದೆ. ಬೀದರ ಜಿಲ್ಲೆಯಲ್ಲಿ ದೊರೆಯುವ ಬಿಳಿಜೇಡಿಗೆ ಒಳ್ಳೆ ಮೆದುತ್ವವಿರುತ್ತದೆ.

ಬೀದರ ಪಟ್ಟಣಕ್ಕೆ ಪಶ್ಚಿಮದಲ್ಲಿ ಹದಿನೈದು ಕಿಲೋಮಿಟರುಗಳಷ್ಟು ದೂರದ ಸಿರಸಿ ಹಾಗೂ ಔರಾದ ಹಳ್ಳಿಗಳ ಬಳಿ ಕೆಂಪು ಕಾವಿಮಣ್ಣು ದೊರೆಯುತ್ತಿದೆ. ಉತ್ತಮ ದರ್ಜೆಯ ಈ ಕಾವಿ ಮಣ್ಣನ್ನು ನೆಲ ಮತ್ತು ಗೋಡೆಗಳಿಗೆ ಬಣ್ಣ ಹಾಕಲು ಹಳ್ಳಿ ಜನ ಬಳಸುತ್ತಾರೆ.

ನೀರಾವರಿ ಯೋಜನೆಗಳು :–

ನದಿಗಳಿಗೆ ಆಣೆಕಟ್ಟು ಕಟ್ಟಿ ನೀರಾವರಿಗೆ ಜಲಾಶಯದಲಿ ಸಂಗ್ರಹಗೊಂಡ ನೀರನ್ನು ಬಳಸಿಕೊಳ್ಳುವ ಸಲುವಾಗಿ ಬೀದರ ಜಿಲ್ಲೆಯಲ್ಲಿ ಹಲವು ನೀರಾವರಿ ಯೋಜನೆಗಳು ಈಗಾಗಲೇ ಸಿದ್ಧವಾಗಿವೆ. ಇವುಗಳಲ್ಲಿ ಮೇಲಿನ ಮುಲ್ಲಾಮಾರಿ ಯೋಜನೆ ಕಾರ್ಯಗತವಾಗುತ್ತಿದೆ. ಈ ನೀರಾವರಿ ಆಣೆಕಟ್ಟಿನಿಂದಾಗಿಬಸವಕಲ್ಯಾಣ ತಾಲ್ಲೂಕು ಹುಮನಾಬಾದ್ ತಾಲ್ಲೂಕು ಹಾಗೂ ಗುಲ್ಬರ್ಗದ ಚಿಂಚೊಳಿ ತಾಲ್ಲೂಕಿನಲ್ಲಿ ಒಟ್ಟು 8100 ಎಕರೆ ಭೂಮಿಗೆ ನೀರಿನ ಸೌಕರ್ಯವಿರುತ್ತದೆ. ಆಣೆಕಟ್ಟಿನ ಬಲದಂಡೆ ನಾಲೆಯ ಉದ್ದ 42 ಕಿಲೋಮಿಟರುಗಳು. ಎಡದಂಡೆ ನಾಲೆ ಉದ್ದ 34 ಕಿಲೋಮಿಟರುಗಳು. 1972ರಲ್ಲಿ ಆಣೆಕಟ್ಟು ಕಟ್ಟುವ ಕಾರ್ಯ ಪ್ರಾರಂಭವಾಗಿದೆ. ಆಣೆಕಟ್ಟಿನ ಜಲಾನಯನ ಪ್ರದೇಶ 207.20 ಚದರ ಕಿಲೋಮಿಟರುಗಳು. ಬಸವಕಲ್ಯಾಣ ತಾಲ್ಲೂಕಿನ ಖೆರ್ಡಾ ಹಳ್ಳಿ ಬಳಿ ಆಣೆಕಟ್ಟನ್ನು ಕಟ್ಟಲಾಗುತ್ತಿದೆ. ಇದೊಂದು ಮಧ್ಯಮ ಪ್ರಮಾಣದ ನೀರಾವರಿ ಯೋಜನೆ.

ಬೀದರ ವಸ್ತುಗಳು ಕೈಗಾರಿಕೆ :–

ಬೀದರದಲ್ಲಿ ಪ್ರಚಲಿತರವಾಗಿರುವ ಲೋಹದ ಕುಶಲ ಕೆಲಸ ಬೀದರ ಅಥವಾ ಬಿದ್ರಿ ಕೆಲಸ. ಇಂದು ಲಕ್ನೋ, ಮುಷಿರಾಬಾದುಗಳ್ಲಿ ಬಿದ್ರಿ ಕೆಲಸವನ್ನು ಕಾಣಬಹುದಾಗಿದೆ. ಬಿದ್ರಿ ಕೆಲಸ ತನ್ನದೇ ಆದ ವೈಶಿಷ್ಟ್ಯಗಳಿಂದ ಕೂಡಿದ ಸ್ಥಳೀಯ ಕೈಗಾರಿಕೆ, ಗೃಹ ಕೈಗಾರಿಕೆಯೂ ಹೌದು. ಬೀದರ ಜನರ ಚಟುವಟಿಕೆ ಹಾಗೂ ವಿಶೇಷ ಜ್ಞಾನದ ಕುರುಹು; ಬಿದ್ರಿ ಕೆಲಸದ ಉತ್ಪನ್ನಗಳಿಗೆ ಭಾರತದಲ್ಲೇ ಅಲ್ಲದೇ ವಿದೇಶಗಳಲಿ ಮಾರುಕಟ್ಟೆ ಇದೆ. ಇದೊಂದು ಪ್ರಾದೇಶಿಕ ಕಲೆ. ಬಿದ್ರಿ ಸಾಮಾನುಗಳು ಕೈಗಾರಿಕೆಯ ತೌರುಮನೆ ಬೀದರ ಜಿಲ್ಲೆ.

ಬಿದ್ರಿ ಕಲೆ ಕೈಕಸಬು, ಇದನ್ನು ಬೀದರದಲ್ಲಿ ಮೊಟ್ಟಮೊದಲಿಗೆ ಪರಿಚಯಿಸಿದ್ದು ಕೆಲವು ಶತಮಾನಗಳ ಹಿಂದೆ. ಅದೂ ಬಹಮನಿ ಸುಲ್ತಾನರ ಆಳ್ವಿಕೆಯ ಕಾಲದಲಿ.

ದೊರೆ ಅಹಮದ್‌ಷಹವಾಲಿ ಬಹಮನಿ ರಂಗೀನ್ ಮಹಲ್ ಮತ್ತು ಇತರ ಸುಂದರ ಕಲಾತ್ಮಕ ಕಟ್ಟಡಗಳನ್ನು ಕಟ್ಟಿಸಲು ಇರಾನ್‌ನಿಂದ ಕುಶಲ ಕೆಲಸಗಾರರನ್ನು ಕರೆಸಿದ. ಈ ಕುಶಲಕರ್ಮಿಗಳಲ್ಲಿ ಕೆಲವರು ಚಿನ್ನ ಮತ್ತು ಬೆಳ್ಳಿಯ ಕುಸುರಿ ಕೆಲಸವನ್ನು ಮಾಡಬಲ್ಲವರಾಗಿದ್ದರು. ಇವರಲ್ಲಿ ಅಬ್ದುಲ್ಲಾ ಬಿನ್ ಕೈಸರ್ ಎಂಬಾತ ಸತುವಿನ ಮಿಶ್ರ ಲೋಹದ ಮೇಲೆ ಚಿನ್ನ ಮತ್ತು ಬೆಳ್ಳಿ ಕುಸುರಿ ಕೆಲಸವನ್ನು ಮಾಡಿ ಸುಂದರ ಕಲಾತ್ಮಕ ವಸ್ತುಗಳನ್ನು ತಯಾರಿಸಬಲ್ಲವನಾಗಿದ್ದ. ಇವನೇ ಬಿದರ ಮಹಮೂದ ಗವಾನನ ಮದರಸಾ ಶಿಕ್ಷಣಾಲಯದಲ್ಲಿ ಈ ಕಲೆಯನ್ನು ಮುಂದುವರಿಸುವ ಸಲುವಾಗಿ ಹೊಸ ಶಿಷ್ಯರನ್ನು ತಯಾರು ಮಾಡಿದ. ಹೀಗೆ ಆರಂಭಗೊಂಡ ಬಿದ್ರಿ ಕುಶಲಕಲೆ ಜನಪ್ರೀಯತೆಯನ್ನು ಪಡೆಯಿತು. ಇಂದು ಬಿದರ ಪಟ್ಟಣದಲ್ಲಿ ಹಾಗೂ ಬೀದರ ಹಳ್ಳಿಯ ಬಳಿ ಸುಮಾರು ಇಪ್ಪತ್ತೈದು ಬಿದ್ರಿ ಸಾಮಾನುಗಳನ್ನು ತಯಾರಿಸುವ ಘಟಕಗಳಿವೆ. ಕೆಲವು ಮನೆಗಳಲ್ಲಿ ಸಹ ಬಿದ್ರಿ ವಸ್ತುಗಳನ್ನು ತಯಾರು ಮಾಡುವ ರೂಡಿ ಇತ್ತು. ಬಿದ್ರಿ ವಸ್ತುಗಳ ತಯಾರಿಕಾ ಘಟಕಗಳಲಿ ಕೆಲಸ ಮಾಡುವವರ ಸಂಖ್ಯೆ ಹತ್ತಕ್ಕಿಂತ ಹೆಚ್ಚೇನಿಲ್ಲ.

ಕೃಷಿ ವಿವರಗಳು:

1) ನೀರಾವರಿ ಸೌಲಭ್ಯ

ಕೃಷಿಗೂ ಸಂಸ್ಕೃತಿಗೂ ಅನೂನ್ಯವಾದ ಸಂಬಂಧ ವಿದೆ. ಕೃಷಿ ಸಂಬಂಧಿತ ಎಲ್ಲಾ ಚಟುವಟಿಕೆಗಳು ಸಂಸ್ಕೃತಿಯ ಭಾಗಗಳೇ ಎಂಬುದು ಗಮನಾರ್ಹ, ಮುಖ್ಯವಾಗಿ ಭಾರತ ಕೃಷಿ ಪ್ರಧಾನವಾಗಿರುವ ದೇಶವಾಗಿರುವಂತೆ. ಬೀದರ ಕೃಷಿ ಅವಲಂಬಿತ ಜಿಲ್ಲೆಯಾಗಿದೆ. ಕೃಷಿ ಇಲ್ಲಿನ ಜನಜೀವನದ ಬೆನ್ನೆಲು ವಾಗಿದೆ. ಆದರೆ ಶೆ್, ೯ 7 ೯ % ರಷ್ಟು ಭಾಗ ಮಾತ್ರ ನೀರಾವರಿ ಸೌಲಭ್ಯ ಪಡೆದಿದೆ. ಉಳಿದದ್ದು. ಒಣಭೂಮಿ ಬಹುಮುಖ್ಯವಾಗಿ ಕೃಷಿಗೆ ಎರಡು ನೆಲೆಗಳಿವೆ.

ಒಂದು ಸಾಂಸ್ಕೃತಿಕ ನೆಲೆಯಾದರೆ. ಇನ್ನೊಂದು ಆರ್ಥಿಕ ನೆಲೆ. 1970ರಲ್ಲಿ ರಾಷ್ಟ್ರೀಯ ಕೃಷಿ ಉತ್ಪನ್ನ ಶೇ. 42 8% ರಷ್ಟಿದ್ದುದು. 2003–04ರಲ್ಲಿ 22.1ಕ್ಕೆ ಇಳಿದಿದೆ. ಹೀಗೆ ಜಾಗತೀಕರಣದ ಪ್ರಭಾವದ ಫಲವಾಗಿ ಒಟ್ಟಾರೆ ಕೃಷಿವಲಯದಲ್ಲಾದ ಬದಲಾವಣೆಗಳು. ಸಾಂಸ್ಕೃತಿಕ ಬದಲಾವಣೆಗೆ ಕಾರಣವೆನ್ನಬೇಕು.

ಆಧುನಿಕ ಔದ್ಯೋಗಿಕರಣದ ಕ್ರಾಂತಿಯಿಂದಾಗಿ ಹೊಸ ಹೊಸ ಯಂತ್ರಗಳು ಹಳ್ಳಿ – ಹಳ್ಳಿಗೂ ಕಾಲಿರಿಸಿರುವುದರಿಂದ. ಕೃಷಿ ಸಂಬಂಧಿತ ಸಾಂಸ್ಕೃತಿಕ ಆಯಾಮಗಳು ಇಲ್ಲವಾಗುತ್ತಿದೆ.

ಉದಾಃ– ಜೋಳದ ರಾಶಿ (ಕಣ) ಇದ್ದಾಗ ಹಬ್ಬದ ರೂಪದಲ್ಲಿ ಢವಾರಿಯೆಂಬುದು. ಬೀದರ ಜಿಲ್ಲೆಯ ಒಂದು ವಿಶೇಷತೆ ಬೇರೆ ಕಡೆ ಇದನ್ನು ಭೂಮಿ.

ಹಬ್ಬ ಹುತ್ತರಿ ಹಬ್ಬ, ಸುಗ್ಗಿ ಹಬ್ಬವೆಂದು ಕರೆಯುತ್ತಾರೆ. ಆದೊಂದು ಗೂಡು ಕಟ್ಟುವುದು, ಗೂಡು (ತೆನೆ) ಮುರಿಯುವುದು ಆ ಸಂದರ್ಭಕ್ಕೆ ಗುಗ್ಗರಿ ಹಾಕುವುದು, ಹಂತಿ ಹೊಡೆಯುವುದು, ತೋರುವುದು ಹೀಗೆ ಹಲವು ಬಗೆಯ ಸಾಂಸ್ಕೃತಿಕ ಸಂದರ್ಭಗಳು "ರಾಶಿ ಮಾಡುವ ಯಂತ್ರ"ವೊಂದರಿಂದಲೇ ಮಾಯವಾಗಿವೆ. ಜನಗಳಿಗೆ ಸಂಬಂಧಿಸಿದ ಹಬ್ಬಗಳೂ ಇಲ್ಲವಾಗುತ್ತಿವೆ. ಘುಂಡಿ (ಸೆಣಬು)ಯಿಂದ ತಯಾರಿಸಲಾಗುತ್ತಿದ್ದ ಕೃಷಿ ಉಪಕರಣಗಳ ಬದಲಾಗಿ ನೈಲಾನ್ ಹಾಗೂ ಪ್ಲಾಸ್ಟಿಕ್ ರೆಡಿಮೆಡ್ ವಸ್ತುಗಳು ಬಂದಿವೆ. ನೇಗಿಲಿನ ಬದಲಾಗಿ ಟ್ರಾಕ್ಟರ್ ಬಂದಿದ್ದು, ಹೀಗೆ ಕೃಷಿಯಲ್ಲಿ ಹಲವಾರು ಬದಲಾವಣೆಗಳು ಉಂಟಾಗಿವೆ. ಎಳ್ಳಮವಾಸೆಯಂತಹ ಮಹತ್ವದ ಕೃಷಿ ಹಬ್ಬಗಳು ಇಂದು ಅಪರೂಪವಾಗುತ್ತಿವೆ. ಹೀಗೆ ಕೃಷಿ ಸಂಬಂಧಿತ ಸಾಂಸ್ಕೃತಿಕ ನೆಲೆಗಳು ಕಳಚುತ್ತಿರುವುದು ಒಂದೆಡೆಯಾದರೆ, ಕೃಷಿ ಸಂಸ್ಕೃತಿಯ ಭಾಗವಾಗಿರುವ ಹಕ್ಕಿ ಪಕ್ಷಿಗಳು ಮಾಯವಾಗುತ್ತಿವೆ. ವೈಜ್ಞಾನಿಕ ಸಮೀಕ್ಷೆಯ ಪ್ರಕಾರ ಮೊಬೈಲ್ ತರಂಗಗಳಿಂದ ಇಂದು ಗುಬ್ಬಿಗಳಂತಹ ಹಲವಾರು ಪಕ್ಷಿಗಳು ವಿನಾಶದ ಅಂಚಿನಲ್ಲಿವೆ. ಕೀಟ ತಿಂದು ಕಾಳು ಸಂರಕ್ಷಿಸುವ ಈ ಹಕ್ಕಿಗಳು ಒಂದರ್ಥದಲ್ಲಿ ರೈತನ ಮಿತ್ರವಾಗಿದ್ದವು. ಆದರೆ, ಜಾಗತೀಕರಣದ ತರಂಗಗಳಿಂದ ಇಡೀ ಪಕ್ಷಿ ಸಂಕುಲದ ಮೇಲೆ ಮಹತ್ತರ ಪರಿಣಾಮ ಬೀರಿದೆ.

ಜಾಗತೀಕರಣದ ಮುಕ್ತ ಮಾರುಕಟ್ಟೆಯಿಂದಾಗಿ ಜಿಲ್ಲೆಯ ರೈತರ ಬೆಳೆಗೆ ಬೆಲೆ ಇಲ್ಲ. ಇದರಿಂದ ಕೃಷಿಕರು ಕಷ್ಟ ಅನುಭವಿಸಬೇಕಾಗಿದೆ. ಕೈಗಾರಿಕೆ, ಮಾರುಕಟ್ಟೆ ವಿಷಯಕ್ಕೆ ಬಂದರೆ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸುವಂತೆ ನಮ್ಮ ಉತ್ಪಾದನೆಗಳಿಲ್ಲ. ಜಾಗತೀಕ ಪೈಪೋಟಿಯಿಂದ ಹಲವಾರು ದೇಶಿ ಕೈಗಾರಿಕೆಗಳು ಅಸ್ವಸ್ಥವಾದರೆ, ಇನ್ನೂ ಹಲವು ಮುಚ್ಚಿ ಹೋಗಿವೆ. ಇದರಿಂದಾಗಿ ಕೃಷಿ ಸಂಸ್ಕೃತಿ ಅಭದ್ರವಾಗುತ್ತಿದೆ. ಹೈಬ್ರಿಡ್ ತಳಿಗಳಿಂದಾಗಿ ಸ್ಥಳೀಯ ತಳಿಗಳು ಇಲ್ಲವಾಗುವುದರೊಂದಿಗೆ ನಿರ್ಬೀಜೀಕರಣವುಂಟಾಗಿದೆ. ಆದ್ದರಿಂದ ಪೌಷ್ಠಿಕ ಆಹಾರವು ಗಣನೀಯ ಪ್ರಮಾಣದಕೊರತೆಯನ್ನು ಅನುಭವಿಸಬೇಕಾಗಿದೆ. ಹಾಗೆಯೇ ಕೃಷಿ ಸಾಗುವಳಿಯು ಪರಿಸರದ ಇಕ್ಕಟ್ಟು ಎದುರಿಸುತ್ತಿದ್ದು, ಭೂಮಿ ತುಂಬ ಕಲುಷಿತಗೊಳ್ಳುತ್ತಿದೆ. ಇಲ್ಲಿಯ ಮುಖ್ಯ ಬೆಳಗಳಾದ ಬಿಳಿ ಜೋಳ, ತೊಗರಿ, ಕಬ್ಬು, ಬೇಳೆ ಕಾಳುಗಳು, ಎಣ್ಣೆ ಬೀಜಗಳಲು ಹತ್ತಿ, ಕಡಲೆ, ಸಜ್ಜೆ, ಸೇಂಗಾ ಹಾಗೂ ತರಕಾರಿಗಳು ಗ್ರಾಹಕರಿಲ್ಲದೆ ಬೆಲೆ ಇಲ್ಲದ್ದಕ್ಕಾಗಿ ಬೀದಿಗೆಸೆವ ಪರಿಸ್ಥಿತಿ ಬಂದಿದೆ. ಅದೇ ಸಂದರ್ಭಕ್ಕೆ ಅವೇ ವಸ್ತುಗಳಿಗೆ ಮತ್ತೊಂದು ಕಡೆ ಅಘಾದವಾದ ಬೆಲೆ ಇರುತ್ತದೆ. ಇಂತಹ ದೋಷಪೂರಿತ ವ್ಯವಸ್ಥೆ ಜಿಲ್ಲೆಯ ಕೃಷಿಕರನ್ನು ಕಂಗಾಲು ಮಾಡಿದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಬೀದರ ಕೃಷಿ ಉತ್ಪಾದನೆಗಳಿಗೆ ನಿಗದಿತ ಬೆಲೆಯಿಲ್ಲ. (ಬೇರೆಡೆ ಕಾಫಿ, ಟೀ, ಅಡಿಕೆ ಮೊದಲಾದವುಗಳಿಗೆ

ನಿಗದಿತ ಬೆಲೆಯಿದೆ) ಅಗ್ಗದ ಚಪ್ಪಲಿಗೆ ಬೆಲೆ ನಿಗದಿಯಾಗಿರುತ್ತದೆ. ಆದರೆ ಜಿಲ್ಲೆಯ ಬೆಳೆಗೆ ನಿಗದಿತ ಬೆಲೆಯಿಲ್ಲ.

ಅದಕ್ಕಾಗಿಯೇ 1997ರಲ್ಲಿ ಜಿಲ್ಲೆಯ ರೈತರು ಸಾಲದ ಹೊರೆ ತಾಳದೇ "ಸಮೂಹ ಸನ್ನಿ" ಯಂತೆ ಸುಮಾರು 23ರೈತರು ಆತ್ಮಹತ್ಯೆ ಮಾಡಿಕೊಂಡರು. ಅದು ಇಂದಿಗೂ ನಿರಂತರವಾಗಿದೆ. ಸ್ವಾತಂತ್ರ್ಯೋತ್ತರದ 50 ವರ್ಷಗಳ ನಂತರವೂ ರೈತರ ಸಮಸ್ಯೆಗಳಿಗೆ ಪರಿಹಾರ ಹುಡುಕುವುದು ಸಾಧ್ಯವಾಗಿಲ್ಲ. ಅದಕ್ಕಾಗಿ ರೈತರು ಆತ್ಮಹತ್ಯೆಗೆ ಮೊರೆಹೋದರು. ರೈತರ ಆತ್ಮಹತ್ಯೆಯೆಂದರೆ ಒಂದರ್ಥದಲ್ಲಿ ಕೃಷಿಯ ಆತ್ಮಹತ್ಯೆಯೂ ಹೌದು.)

2) ಬಯಲು ಪ್ರದೇಶ

ಬೀದರ ಜಿಲ್ಲೆಯ ಬೆಳೆಗಳು :_

ಉತ್ತರ ಕರ್ನಾಟಕದ ಬಹಳಷ್ಟು ಜಿಲ್ಲೆಗಳು ವ್ಯವಸಾಯ ಪ್ರಧಾನವಾದ ಜಿಲ್ಲೆಗಳು, ಬೆಟ್ಟಗುಡಗಳಿಲ್ಲದ ಮೈದಾನ ಪ್ರದೇಶವನ್ನು ಹೊಂದಿರುವ ಬೀದರ ಜಿಲ್ಲೆಯಲ್ಲಿ ಮುಖ್ಯವಾದ ಆಹಾರದ ಬೆಳೆ ಜೋಳ. ಸುಮಾರು ಒಂದು ಲಕ್ಷದ ಹತ್ತು ಸಾವಿರಗಳಷ್ಟು ಎಕರೆ ಭೂಮಿಯಲ್ಲಿ ಜೋಳವನ್ನು ಬೆಳೆಯಲಾಗುತ್ತದೆ. ಹೆಸರು, ಕಡಲೆ, ತೊಗರಿ, ಬತ್ತ, ಸೇಂಗ, ಎಳ್ಳು, ಹೈಬ್ರಿಡ್ ಜೋಳ ಹಾಗೂ ಸಜ್ಜೆ, ಹೈಬ್ರಿಡ್ ಮೆಕ್ಕೆ ಜೋಳ, ಸೂರ್ಯ ಕಾಂತಿ, ಕೊತ್ತಂಬರಿ, ಹತ್ತಿ, ಕಬ್ಬು. ಉದ್ದು, ಗೋದಿ, ಮೆಣಸಿನ ಕಾಯಿ ಇವು ಇತರ ಬೆಳೆಗಳು, ಎಣ್ಣೆ ಬೀಜಗಳು ಹಾಗೂ ಹೊಗೆ ಸೊಪ್ಪು ಬೆಳೆಯಲಾಗುತ್ತಿದೆ. ಔರಾದ ಹಾಗೂ ಭಾಲ್ಕಿ ತಾಲ್ಲೂಕಿನ ಕಪ್ಪು ಮಣ್ಣಿನ ಭೂಮಿ ಹತ್ತಿ ಬೆಳೆಗೆ ಅನುಕೂಲವಾಗಿದೆ. ಬೀದರ ಬಸವಕಲ್ಯಾಣ ಹಾಗೂ ಹುಮನಾಬಾದ್ ತಾಲ್ಲೂಕುಗಳಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಈ ಬೆಳೆಗೆ ನೀರಾವರಿ ಸಹಾಯ ಪಡೆಯಲಾಗುತ್ತಿದೆ. ಜೋಳವನ್ನು ಎಲ್ಲ ತಾಲ್ಲೂಕುಗಳಲೂ ಬೆಳೆಯಲಾಗುತ್ತದೆ. ಅಪ್ಸೆಣಬನ್ನು ಹಸುರು ಗೊಬ್ಬರದ ಸಲುವಾಗಿ ಬೆಳೆಯುತ್ತಾರೆ.

ವ್ಯವಸಾಯಕ್ಕಿರುವ ಭೂಮಿಯ ಶೇಕಡಾ 79 ಭಾಗದಲ್ಲಿ ಆಹಾರದ ಬೆಳೆಗಳನ್ನು ಉಳಿದ ಭಾಗದಲ್ಲಿ ಆಹಾರೇತರ ಬೆಳೆಗಳನ್ನು ಬೆಳೆಯಲಾಗುತ್ತಿದೆ. ವರ್ಷಕ್ಕೆ ಎರಡು ಬೆಳೆಗಳನ್ನು ತೆಗೆಯಲಾಗುತ್ತಿದೆ. ಬೀದರ ಜಿಲ್ಲೆಯ ಐದು ತಾಲ್ಲೂಕುಗಳ ಮುಖ್ಯ ಬೆಳೆಗಳನ್ನು ಕೋಷ್ಟಕ ಒಂದರಲ್ಲಿ ಕೊಡಲಾಗಿದೆ.

ಸೂಕ್ತವಾದ ವಾಯುಗುಣ ಹಾಗೂ ಮಣ್ಣು ಇರುವುದರಿಂದ ಬೀದರ ಜಿಲ್ಲೆ ತರಕಾರಿ ಮತ್ತು ಹಣ್ಣಿನ ಬೆಳೆಗಳಿಗೆ ಹಾಗೂ ಅವುಗಳ ಅಭಿವೃಧಿಗೆ ಯೋಗ್ಯ ಎನ್ನಲಾಗಿದೆ. ಬೀದರ ಮತ್ತು ಇತರ ತಾಲ್ಲೂಕುಗಳಲಿ ಕೆಂಪುಮಿಶ್ರಿತ ಜಂಬುಮಣ್ಣು ದೊರೆಯುವುದರಿಂದ ದ್ರಾಕ್ಷಿ, ಮಾವು, ಸಪೋಟ, ಸೀಬೆ, ನಿಮಬೆ ಮೂಸಂಬಿ, ಆಲೂಗಡ್ಡೆ, ಕೋಸು, ಬದನೆ, ಟೋಮ್ಯಾಟೊ ಈ ಬೆಳೆಗಳಿಗೆ ಅಲ್ಲಿ ಅನುಕೂಲವಿದೆ.

ಮಧ್ಯಮದರ್ಜೆಯ ಹಾಗೂ ದಡ್ಡವಾದ ಕಪ್ಪು ಮಣ್ಣು ಹೊಂದಿರುವ ಭಾಲ್ಕಿ ತಾಲ್ಲೂಕು ಹಾಗೂ ಔರಾದ್ ತಾಲ್ಲೂಕಿನ ಕೆಲಭಾಗಗಳು ಮಾವು, ಹುಣಸೆ, ಬಾಳೆ, ನಿಂಬೆ, ಮೆಣಸಿನಕಾಯಿ, ಬದನೆ, ಸೊಪ್ಪುಗಳು ಇವುಗಳ ವ್ಯವಸಾಯಕ್ಕೆ ಯೋಗ್ಯವೆನಿಸಿವೆ. ಬಂಗಾರ ಬದನೆ ಹಾಗೂ ಮೋಲೆಕಾಯಿ ಗಿಡ ಬೀದರ ಜಿಲ್ಲೆಯ ವಿಶೇಷ ಸಸ್ಯಗಳು. ಮೋಲೆಕಾಯಿ ಗಿಡದ ಹಣ್ಣಿನ ಸಿಹಿ ಬೀಜಗಳು ಅನೇಕ ಸಿಹಿ ತಿಂಡಿಗಳ ತಯಾರಿಕೆಗೆ ಒದಗುತ್ತದೆ. ಔರಾದ್.ಬೀದರ ಮತ್ತು ಹುಮನಬಾದ್ ತಾಲ್ಲೂಕುಗಳ ಅರಣ್ಯಗಳಲ್ಲಿ ಮೋಲೆಕಾಯಿ ಗಿಡ ಅಥವಾ ಚಿರಂಜಿ ಗಿಡ ಬೆಳೆಯುತ್ತದೆ. ಅನಾಕಾರ್ಡಿಯೇಸಿ ಕುಟುಂಬಕ್ಕೆ ಸೇರಿದ ಈ ಗಿಡ ಗೋಡಂಬಿ, ಬಾದಾಮಿ ಮತ್ತು ತೇಗದ ಗಿಡಗಳನ್ನು ಹೋಲುತ್ತದೆ. ರಸ್ತೆ ಹಾಗೂ ಯರ್ಥವೆನಿಸಿದ ಭೂಮಿಗಳಲ್ಲಿ ಮಾವು ಒಂದು ಮುಖ್ಯ ಹಣ್ಣಿನ ಬೆಳೆಯಾಗಿದೆ. ಬೀದರ ಜಿಲ್ಲೆಯಲ್ಲಿ ಬೆಳೆಯುವ ಸೀಬೆ ಹಣ್ಣು ಪ್ರಸಿದ್ಧಿಯಾಗಿದೆ. ಇತ್ತೀಚೆಗೆ ಆಲೂಗಡ್ಡೆ, ಶುಂಠಿ ಮತ್ತು ಆರಿಸಿನದ ಬೆಳೆ ಜಿಲ್ಲೆಯಲ್ಲಿ ಪ್ರಾಮುಖ್ಯತೆ ಪಡೆಯುತ್ತಿದೆ.

ಕೋಷ್ಟಕ 1 : ಬೀದರ ಜಿಲ್ಲೆಯ ತಾಲ್ಲೂಕುಗಳ ಮುಖ್ಯ ಬೆಳೆಗಳು

ತಾಲ್ಲೂಕು	ಬೆಳೆಗಳು
ಔರಾದ್	ಜೋಳ್, ಹತ್ತಿ, ಕಡಲೆ, ಗೋಧಿ, ಸೇಂಗ, ತೊಗರಿ, ಉದ್ದು,
ಬಸವಕಲ್ಯಾಣ	ಜೋಳ, ಸಜ್ಜೆ, ಸೇಂಗ, ಬತ್ತ, ಕಬ್ಬು, ತೊಗರಿ, ಹತ್ತಿ, ತೈಲ ಬೀಜಗಳು
ಭಾಲ್ಕಿ	ಜೋಳ, ಸೇಂಗಾ, ಕಡಲೆ, ತೊಗರಿ, ಬತ್ತ, ಹತ್ತಿ.
ಹುಮನಾಬಾದ್	ಸೇಂಗ, ಜೋಳ, ಸಜ್ಜೆ, ಗೋಧಿ, ಕಡಲೆ, ಕಬ್ಬು ತೊಗರಿ
ಬೀದರ	ಜೋಳ, ಕಡಲೆ, ಕಬ್ಬು, ತೊಗರಿ, ಸೇಂಗ.

3) ಜಿಲ್ಲೆಯ ತೋಟಗಾರಿಕೆ ಇಲಾಖೆ ಫಾರಂ ಮತ್ತು ನರ್ಸರಿ ಗಳನ್ನು ಅಭಿವೃದ್ಧಿಪಡಿಸುತ್ತಿದೆ. ಬೀದರ ತಾಲ್ಲೂಕಿನ ರೇಕುಳಗಿಯಲ್ಲಿ ಗೋಡಂಬಿ ಫಾರಂ ಅನ್ನು 1965ರಲ್ಲಿ ರೂಪಿಸಲಾಯಿತು. ಹೂವಿನ ಗಿಡಗಳ ಕೃಷಿಗೆ ಪ್ರಾಮುಖ್ಯತೆ ನೀಡಲಾಗಿದೆ. ಬೀದರರಿನ ಜಿಲ್ಲಾ ತೋಟಗಾರಿಕೆ ಅಧಿಕಾರಿಗಳ ಕಛೇರಿಯ ಸಮೂಪದಲ್ಲಿ ಗುಲಾಬಿ ಮತ್ತು ಬೊಗೇನ್‌ವಿಲ್ಲ ಹೂವಿನ ಗಿಡಗಳ ತೋಟವಿದೆ. ಬಸವಕಲ್ಯಾಣದಲ್ಲಿ ಬಸವೇಶ್ವರರ ಎಂಟನೆ ಶತಮಾನೋತ್ಸವ ಸಂದರ್ಭದಲ್ಲಿ 'ಬಸವನ ವನ' ಎಂಬ ಉದ್ಯಾನವನ್ನು ಸ್ಥಾಪಿಸಲಾಯಿತು. ಇಲ್ಲಿ ಅಲಂಕಾರ ಹಾಗೂ ಔಷಧ ಸಸ್ಯಗಳನ್ನು ಬೆಳೆಸಲಾಗಿದೆ. ಸುಮಾರು 770

ವಿವಿಧ ಔಷಧ ಸಸ್ಯಗಳನ್ನು ಇಲ್ಲಿ ಬೆಳೆಸಾಗಿದೆ. ತೋಟಗಾರಿಕೆ ಶಿಕ್ಷಣದ ಕೋರ್ಸೊಂದನ್ನು ಬೀದರ ತಾಲ್ಲೂಕಿನ ಹಳದಕೇರಿ ಎಂಬ ಫಾರಂನಲ್ಲಿ ಆರಂಭಿಸಲಾಗಿದೆ.

ಬೀದರ ಜಿಲ್ಲೆ ಮತ್ತು ಅರಣ್ಯಗಳು :-

ಒಂದು ಕಾಲಕ್ಕೆ ಬೀದರ ಜಿಲ್ಲೆಯಲ್ಲಿ ಸ್ವಾಭಾವಿಕ ಅರಣ್ಯಗಳಿದ್ದವು. ಕಾಲಕ್ರಮದಲ್ಲಿ ಹಲವು ಯುದ್ಧಗಳು ಹಾಗೂ ಮನುಷ್ಯರ ಪ್ರಭಾವದಿಂದಾಗಿ ಅರಣ್ಯಗಳು ಇಲ್ಲವಾಗುತ್ತ ಹೋದವು. ಈಗ ಜಿಲ್ಲೆಯಲ್ಲಿರುವ ಅರಣ್ಯಗಳು ಎಲ್ಲವೂ ಮಾನವ ನಿರ್ಮಿತವಾದವು. ಬೀದರ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದ ಶೇಕಡಾ 4.3ರಷ್ಟು ಮಾತ್ರ ಅರಣ್ಯವಿದೆ. ಜಿಲ್ಲೆಯಲ್ಲಿ ಶುಷ್ಕ ವಾತಾವರಣದ ಉಷ್ಣವಲಯದ ವಾಯುಗುಣವಿರುತ್ತದೆ. ಜೊತೆಗೆ ಕೆಲವು ವರ್ಷಗಳ ಕಾಲ ಜಿಲ್ಲೆಯು ಕ್ಷಾಮದ ಪರಿಸ್ಥಿತಿಯನ್ನು ಎದುರಿಸಿತು. ಹೀಗಾಗಿ ಅರಣ್ಯಗಳು ತಲೆ ಎತ್ತಲು ಬಹಳ ಕಷ್ಟವೇ ಆಯಿತು. ಬೇಸಿಗೆಯ ಹೆಚ್ಚು ಬಿಸಿಲೂ ಇದಕ್ಕೆ ಪೋಷಕವಾಯಿತು.

ಬೀದರ ಜಿಲ್ಲೆಯ ಹುಮನಾಬಾದ್ ತಾಲ್ಲೂಕು ಹೆಚ್ಚು ವಿಸ್ತೀರ್ಣದ ಅರಣ್ಯಗಳನ್ನು ಹೊಂದಿದೆ. ಅತಿ ಕಡಿಮೆ ಅರಣ್ಯ ಪ್ರದೇಶವಿರುವುದು ಔರಾದ ತಾಲ್ಲೂಕಿನಲ್ಲಿ. ಜಿಲ್ಲೆಯ ಕಾಡುಗಳು ಶುಷ್ಕ, ಎಲೆ ಉದುರುವ ಗಿಡಮರಗಳ ಮಿಶ್ರ ಜಾತಿಯದು. ತೆರೆದ, ಉದ್ದಕ್ಕೆ ವಿಸ್ತರಿಸಿದ ಕುರುಚಲು ಗಿಡಗಳ ಕಾಡುಗಳೂ ಇವೆ. ಅರಣ್ಯಗಳ್ಲಿ ಬೆಳೆಯುವ ವಿವಿಧ ಬಗೆ ಹುಲ್ಲುಗಳು ದನಗಳಿಗೆ ಒಳ್ಳೆಯ ಮೇವಾಗಿಲ್ಲ. ಕೇವಲ ಮನೆ., ಗುಡಿಸಿಲುಗಳಿಗೆ ಛಾವಣಿಯಾಗಿ ಬಳಸಲು ಅವು ಒದಗಿವೆ.

ಜಿಲ್ಲೆಯ ಅರಣ್ಯಗಳಲ್ಲಿ ಜಾಲಿ, ದಿಂಡಿಗ, ಸೀತಾಫಲ, ಮುತ್ತುಗ, ಹುರಗಲು, ತುಪ್ರ, ಆಲ, ಅತ್ತಿ, ಅರಳಿ, ಬಿಕ್ಕೆ, ಮಾವು, ಹುಣಸೆ, ಕಮರ ಹಾಗೂ ಚಳ್ಳೆ ವೃಕ್ಷಗಳು ಕಂಡುಬರುತ್ತವೆ. ಬೀಡಿ ಎಲೆಗಳು, ರೋಸಾಹುಲ್ಲು, ಸೀತಾಫಲ, ಜೇನು ಜೇನಮೇಣ, ಹುಣಸೆ, ಮಾವಿನಹಣ್ಣು ಇವುಗಳು ಅರಣ್ಯ ಉತ್ಪನ್ನಗಳೆನಿಸಿವೆ. ಜಾಲಿ ಮರವನ್ನು ನೀರಿನಲ್ಲಿ ಹದಗೊಳಿಸಿ ದರೆ ಒಳ್ಳೆ ಬಾಳಿಕೆ ಬರುವ ಮರವೆನಿಸುತ್ತದೆ. ಗಾಡಿ ಚಕ್ರಗಳಿಗೆ, ಒನಕೆ ಮತ್ತು ನೇಗಿಲು ತಯಾರಿಕೆಗೆ ಈ ಮರ ಒದಗುತ್ತದೆ. ಹುಣಸೆ ಮರ ಬಹೂಪಯೋಗಿ ಮರ. ಇದರ ಚೇಗು ಗಟ್ಟಿ, ಬಾಳ್ವಿಕೆ ಬರುತ್ತದೆ. ಹುಣಸೆ ಗಿಡದ ಬೀಜಗಳನ್ನು ಕೆಲವು ಕೈಗಾರಿಕೆಗಳಲ್ಲಿ ಬಳಸಲಾಗುತದೆ. ದಿಂಡಿಗ ಸೌದೆ ಹಾಗೂ ಇದ್ದಿಲು ಮರ ಎನಿಸಿದೆ.

ಜಿಲ್ಲೆಯ ಪ್ರಾಣಿ ಹಾಗೂ ಪಕ್ಷಿಗಳು ಸಂಖ್ಯೆಯೂ ಕಡಿಮೆ. ಇಲ್ಲಿ ಯಾವುದೇ ರೀತಿಯ ಮೃಗಧಾಮಗಳಿಲ್ಲ. ಖಾನಾಪುರ (ಭಾಲ್ಕಿ ತಾಲ್ಲೂಕು)ದ ಕಾಡಿನಲ್ಲಿ ಅಪರೂಪಕ್ಕೆ ಚಿರತೆ ಕಾಣಸಿಗುತ್ತದೆ. ಜಿಲ್ಲೆಯಲ್ಲಿ ಮೂವತ್ತು ಬಗೆ ಬಾವಲಿಗಳಿವೆ. ಚಳಿಗಾಲದಲ್ಲಿ ಜಿಂಕೆ

ಹಿಂಡುಗಳು ಗೋಚರಿಸುತ್ತವೆ. ನದಿ ತೀರ, ಹೊಳೆ ಪಕ್ಕಗಳಲ್ಲಿ ಕಾಡು ಪಾರಿವಾಳಗಳು, ಇತರ ಜಲಪಕ್ಷಿಗಳು ಕಂಡು ಬರುತ್ತವೆ. ನವಿಲುಗಳು ಕಎಲಭಾಗಗಳಲ್ಲಿ ಹೆಚ್ಚಾಗಿರುತ್ತವೆ.

ಹೇಳಿಕೊಳ್ಳುವಂಥ ಅರಣ್ಯ ಸಂಪತ್ತು ಬೀದರ ಜಿಲ್ಲೆಯಲ್ಲಿಲ್ಲ. ಬೀದರ ತಾಲ್ಲೂಕಿನ ಹೊನ್ನಿಕೇರಿ ಮತ್ತು ಹುಮನಾಬಾದ್ ತಾಲ್ಲೂಕಿನ ಚಿಟಗುಪ್ಪದಲ್ಲಿ ಅರಣ್ಯ ಅಭಿವೃದ್ಧಿಪಡಿಸುವ ಯೋಜನೆಗಳು ಕಾರ್ಯಗತವಾಗಿವೆ. ಜಿಲ್ಲೆಯ ಅರನ್ಯ ಸಂಪತ್ತನ್ನು ಹೆಚ್ಚಿಸುವ ಸಾಧ್ಯತೆಗಳ ಬಗ್ಗೆ ಪರಿಶಿಲಿಸಿ ಅರಣ್ಯಗಳನ್ನು ವೃದ್ಧಿಸುವ ಕೆಲಸವನ್ನು ಹಮ್ಮಿಕೊಳ್ಳಲಾಗಿದೆ. ಬೀದರದಲ್ಲಿ ಅರಣ್ಯ ಸಂರಕ್ಷಣೆ ಬಗ್ಗೆ ಶಿಕ್ಷಣ ನೀಡಲಾಗುತ್ತಿರುವ ತರಬೇತಿ ಶಾಲೆ ಇದೆ.

3) ಬೆಳೆಯುವ ಬೆಳೆಗಳು

ಭಾರತ ಕೃಷಿ ಪ್ರಧಾನವಾಗಿರುವ ದೇಶವಾಗಿರುವಂತೆ ಬೀದರ ಸಹ ಕೃಷಿ ಅವಲಂಬಿತ ಜಿಲ್ಲೆಯಾಗಿದೆ.

ಬೀದರ ಜಿಲ್ಲೆಯಲ್ಲಿ ಮುಖ್ಯವಾದ ಆಹಾರದ ಬೆಳೆ ಜೋಳ ಸುಮಾರು ಒಂದು ಲಕ್ಷದ ಹತ್ತು ಸಾವಿರಗಳಷ್ಟು ಎಕರೆ ಭೂಮಿಯಲ್ಲಿ ಜೋಳವನ್ನು ಬೆಳೆಯಾಗುತ್ತದೆ. ಹೆಸರು, ಕಡಲೆ, ತೊಗರಿ, ಭತ್ತ, ಸೆಂಗ್, ಎಳ್ಳು, ಹೈಬ್ರೀಡ್‌ಜೋಳ, ಹಾಗೂ ಸಜ್ಜೆ, ಹೈಬ್ರೀಡ್ ಮೆಕ್ಕೆಜೋಳ, ಸೂರ್ಯಕಾಂತಿ, ಕೊತ್ತಂಬರಿ, ಹತ್ತಿ, ಕಬ್ಬು, ಉದ್ದು, ಗೋದಿ, ಮೆಣಸಿನಕಾಯಿ ಇವು ಇತರ ಬೆಳೆಗಳು.

ವ್ಯವಸಾಯಕ್ಕಿರುವ ಭೂಮಿಯ ಶೇಕಡಾ 79 ಭಾಗದಲ್ಲಿ ಆಹಾರದ ಬೆಳೆಗಳನ್ನು ಉಳಿದ ಭಾಗದಲ್ಲಿ ಆಹಾರೇತರ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಅಧ್ಯಾಯ – 2

ಬೀದರ ಜಿಲ್ಲೆಯ ಸಂಕ್ಷಿಪ್ತ ಪರಿಚಯ

ಅಧ್ಯಾಯ – 2
ಬೀದರ ಜಿಲ್ಲೆಯ ಸಂಕ್ಷಿಪ್ತ ಪರಿಚಯ

ಬೀದರ ಜಿಲ್ಲೆ ಪ್ರಾಚೀನ ಇತಿಹಾಸ ಹೊಂದಿದೆ. ಇತಿಹಾಸ ಪೂರ್ವದಲ್ಲಿಯೇ ಜಿಲ್ಲೆಯ ಮಾಂಜರಾ ಮತ್ತು ಕಾರಂಜಾ ನದಿಗಳ ತೀರದಲ್ಲಿರುವ: ರೇಕುಳಗಿ, ಮರಕುಂದ, ಖೇಣಿ, ರಂಜೋಳ, ಬಗದಲ್ ಅಂಬೆಸಂಗಾವಿ, ನಾರದಸಂಗಂ, ವನಮಾರಪಲ್ಲಿ, ಹಾಲಹಳ್ಳಿ ಅಲಿಯಂಬರ, ಸಂಗನಾಳೆ, ಔರಾದ, ಮಾಸಿಮಾಡು, ಭಾಲ್ಕಿ, ಭಾತಂಬ್ರಾ ಮುಂತಾದ ಊರುಗಳಲ್ಲಿ ಶಿಲಾಯುಗ, ನವಶಿಲಾಯುಗದ ಜನವಸತಿಯ ನೆಲೆಗಳಾಗಿದ್ದವೆಂದು ಸಂಶೋಧಕರು ಗುರುತಿಸಿದ್ದಾರೆ.

'ಬೀದರ' ಹಿಂದೆ 'ವಿದುರ ನಗರ'ವೆಂದು ಕರೆಯಲಾಗಿದೆ. ವಿದುರ ನಗರ' ಮಹಾಭಾರತದಲ್ಲಿ ಪ್ರಸಿದ್ಧವಿದೆ. ಆದರೆ ಪ್ರಾಕೃತಿಕವಾಗಿ 'ಬಿದಿರು' ಹೆಚ್ಚು ಬೆಳೆಯುವ ಪ್ರದೇಶವಾದ್ದರಿಂದ ಬೀದರೆ – ಬಿದಿರುಪುರ – ಬಿದಿರೂರ – ಬಿದರೆ ಆಗಿದೆಯೆಂದ ಹೇಳುವರು.

ಬೀದರ ಜಿಲ್ಲೆಯನ್ನು ಹಿಂದೆ ಅನೇಕ ಪ್ರಮುಖ ಅರಸು ಮನೆತನಗಳು, ಮಾಂಡಲಿಕ ಅರಸರು ವೈಭವಯುತವಾಗಿ ಆಳಿರುವರು. ಅದರಲ್ಲೂ 'ಅಟ್ಟಳೆನಾಡನು' ಆಳಿದ ಸಿಂದರ ಚರಿತ್ರೆ ಪ್ರಮುಖವಾದುದು.

ಹೈದರಾಬಾದ್ ಕರ್ನಾಟಕ ಪ್ರಧೇಶದ ಹಳ್ಳಿಹಳ್ಳಿಗಳ ಜನಮನದಲ್ಲಿ 'ಕ್ವಾಟಿ' ಎಂದೇ ಹೆಸರಾಗಿರುವ ಹೆಸರಾಂತ ಜಿಲ್ಲೆ ಬೀದರ. ಕರ್ನಾಟಕದ ಉತ್ತರ ತುದಿಯಲ್ಲಿರುವ ಬೀದರ ಜಿಲ್ಲೆಯ ಪೂರ್ವಕ್ಕೆ ಆಂಧ್ರಪ್ರದೇಶದ, ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರದ ಜಿಲ್ಲೆಗಳು ಸುತ್ತುವರೆದಿವೆ. ಫಲವತ್ತಾದ ಕೆಂಪು ಮಸಾರಿ ಹಾಗೂ ಕಪ್ಪು ಎರೆಮಣ್ಣಿನ

ನೆಲ; ಜಿಲ್ಲೆಯುದ್ದಕ್ಕೂ ಉಕ್ಕಿ ಹರಿಯುವ ಝರಿ – ಜಲ; ಹಿತವಾಗಿ ತಂಪಾಗಿ ಸೂಸುವ ಹವೆ – ಬೀದರ ಜಿಲ್ಲೆಯಲ್ಲಿ ಆರೋಗ್ಯಕರ ವಾತಾವರಣ ನಿರ್ಮಾಣಕ್ಕೆ ಕಾರಣವಾಗಿದೆ.

ಬೀದರ ಪದವನ್ನು ಪಂಡಿತರು ವಿದರ್ಭ, ವಿದುರ, ಬಿದರಿ ಮುಂತಾದ ರೂಪಗಳಿಂದ ನಿಷ್ಪತ್ತಿ ಮಾಡುವುದುಂಟು. ಮಹಾಭಾರತದ ವಿದರ್ಭ, ವಿದುರ ನಗರಗಳಿಂದ ಬೀದರ ನಗರವಾಯಿತೆಂದೂ ನಳದಮಯಂತಿಯರ ಪ್ರಣಯೋದ್ಯಾನವಿದೆಂದೂ, ಅನೇಕರು ಊಹಿಸಿದ್ದಾರೆ. ಬಿದಿರು ಬೆಳೆಯುವ ಪ್ರದೇಶ ವಿದಾಗಿತ್ತೆಂದು ಅದರಿಂದ ಬೀದರ ಬಂದಿದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ಪ್ರದೇಶದಲ್ಲಿ ದೊರೆತಿರುವ ಪ್ರಾಗೈತಿಹಾಸಿಕ ಪಳೆಯುಳಿಕೆಗಳಲ್ಲಿ (ಮಡಿಕೆ ಇತ್ಯಾದಿ) ಕಲಾಕೌಶಲ್ಯತೆ ಕಂಡಬರುತ್ತದೆ. ಹೀಗಾಗಿ 'ಬೀದರಿ' ಯಿಂದಲೇ 'ಬೀದರ' ಶಬ್ದದ ರೂಪರಚನೆಯಾಗಿರುವ ಸಾಧ್ಯತೆ ಇದೆ.

ಬಹಮನಿ ಮತ್ತು ಬರೀದ್ ಶಾಹಿ ಅರಸರ ರಾಜಧಾನಿಯಾಗಿ ಮೆರೆದ, ಇಂದು ಜಿಲ್ಲಾ ಆಡಳಿತದ ಕೇಂದ್ರವಾಗಿರುವ ಬೀದರಿನಲ್ಲಿ ಕೋಟೆ ಅಲ್ಲದೆ ಅನೇಕ ಐತಿಹಾಸಿಕ ಮಹತ್ವದ ಸ್ಥಳಗಳಿವೆ. ಮಹ್ಮದ್ ಶಾಹ್ ಬಹಮನಿ ಮತ್ತು ಅಲಿ ಬರೀದ್ ಅವರಿಂದ ನಿರ್ಮಿಸಲ್ಪಟ್ಟ ಬೀದರ ಕೋಟೆ ವೈಶಿಷ್ಟ್ಯಗಳಿಂದ ಕೂಡಿದೆ. ರಕ್ಷಣೆಯ ದೃಷ್ಟಿಯಿಂದ ಎತ್ತರ ಧರಿಯ ಮೇಲೆ ಇದನ್ನು ಕಟ್ಟಲಾಗಿದೆ. ಇಳಿಜಾರು ಇಲ್ಲದ ಕಡೆ ರಕ್ಷಣೆಗಾಗಿ ನಿರ್ಮಿಸಲಾಗಿರುವ ಕಂದಕಗಳಿಗೆ ಮೂರು ಕಂದಕಗಳು ಸಾಲು ಈ ಕೋಟೆಯ ವೈಶಿಷ್ಟ್ಯ. ಕೋಟೆಯ ಸುತ್ತುವರಿದಿರುವ ರಕ್ಷಣಾಗೋಡೆಯ ಎರಡು ಮೈಲು, ಒಂದು ಫರ್ಲಾಂಗ್ ಮತ್ತು ಹದಿನೆಂಟು ಗಜದಷ್ಟು ಸುತ್ತವರಿದಿದ್ದು, ರಕ್ಷಣೆಗಾಗಿ ಸುತ್ತಲು – 37 ಬುರುಜುಗಳಿವೆ. ಏಳು ದ್ವಾರಗಳಿವೆ. ಮುಖ್ಯ ದ್ವಾರ ಗುಂಬದ್ ದರವಾಜಾ ಆಗಿದ್ದು, ಅದಕ್ಕೆ ತಲುಪಲು ಎರಡು ಚಿಕ್ಕ ದ್ವಾರಗಳನ್ನು ದಾಟಿಹೋಗ ಬೇಕಾಗುತ್ತದೆ. ಎರಡನೇ

ದ್ವಾರದ ಮೇಲೆ ಎಡ ಬಲಕ್ಕೆ ಶಾರ್ದೂಲಗಳ ಕಲ್ಲಿನಲ್ಲಿ ಕೆತ್ತನೆ ಮಾಡಿದ ಚಿತ್ರಗಳಿದ್ದು, ಅದಕ್ಕೆ ಶಾರ್ಜಾ ದರವಾಜಾ ಎನ್ನುತ್ತಾರೆ. ಅದರ ಮೇಲಿನ ಕೋಣೆಗಳನ್ನು ಸಂಗೀತ ವಾದ್ಯ ನುಡಿಸಲು ಬಳಸುತ್ತಿದ್ದರಿಂದ ಅದಕ್ಕೆ ನಕಾರಖಾನಾ ಕೂಡ ಎಂದು ಕರೆಯುತ್ತಿದ್ದರು. ದರವಾಜಾ ಬಣ್ಣದ ಹೆಂಚುಗಳಿಂದ ಅಲಂಕೃತವಾಗಿತ್ತು.

ಕೋಟೆಯ ಒಳಗೆ ಸೋಲಹ ಖಂಬಾ ಮಸೀದಿ ಭವ್ಯವಾಗಿ ನಿಂತಿದೆ. ಪ್ರತಿ ಸಾಲಿನಲ್ಲಿ ಹದಿನಾರು ಕಂಬಗಳನ್ನು ಅದು ಹೊಂದಿದೆ. ಗಾಳಿ – ಬೆಳಕಿನ ಸಹಜ ಸಂಚಾರ ಜರುಗುತ್ತಿರುವಂತೆ ವ್ಯವಸ್ಥೆ ಮಾಡಲಾಗಿದೆ. ಇದರ ಎದುರಿಗೆ ಒಂದು ಕಾಲಕ್ಕೆ ರೂಬಿ ಗಾರ್ಡನ್ ಇತ್ತು. ನೀರಿನ ಕಾರಂಜಿಗಳಿದ್ದವು. ಅವುಗಳ ಅವಶೇಷಗಳನ್ನು ಇಂದಿಗೂ ಕಾಣಬಹುದಾಗಿದೆ. ಅಲ್ಲಿಯೇ ಹಮಾಮಖಾನಾ ಕಟ್ಟಡದಲ್ಲಿ ಪುರಾತತ್ವ ಅವಶೇಷಗಳ ವಸ್ತು ಸಂಗ್ರಹಾಲಯವೊಂದಿದೆ.

ಮಸೀದಿಯ ಆವರಣಕ್ಕೆ ಹೊಂದಿಕೊಂಡಂತೆ ತರ್ಕಶ ಮಹಲ್, ಗಗನ ಮಹಲ್, ಹಾಮಾಮಖಾನಾ, ಗುಂಬದ್ ದರವಾಜಾ, ರಂಗೀನ ಮಹಲ್ ಇವೆ. ಉಂಗೀನ ಮಹಲ್ ಚಿಕ್ಕ ಗಾತ್ರದ ಕಟ್ಟಡ ಆಗಿದ್ದರೂ ಹೆಸರೇ ಸ್ರಚಿಸುವಂತೆ ಈ ಕಟ್ಟಡ ಬಣ್ಣ ಬಣ್ಣದ ಹಂಚುಗಳಿಂದ ಅಲಂಕೃತವಾಗಿದೆ. ಕಪ್ಪು ಕಲ್ಲುಗಳ ಮೇಲೆ ಕೆತ್ತನೆ ಮಾಡಿ ಚಿಪ್ಪುಗಳ ಹೊಳಪಿನ ಪದರಗಳನ್ನು ಅಳವಡಿಸಲಾಗಿದೆ. ಅದರ ಮೇಲೆ ಬೆಳಕು ಬಿದ್ದಾಗ ಬಣ್ಣ ಬಣ್ಣಗಳ ಹೊಳಪು ಕಾಣುತ್ತದೆ. ಅಲ್ಲಿನಿಂದ ಉತ್ತರಕ್ಕೆ ಸ್ವಲ್ಪದೂರ ಹೋದಲ್ಲಿ ದೊಡ್ಡ ತೋಫನ್ನು ಕಾಣಬಹುದು. ದಾರಿಯಲ್ಲಿ ಸಿಡಿಮದ್ದು ತಯಾರಿಸುವ ಕಾರ್ಖಾನೆಯ ಜೀರ್ಣವಾದ ಕಟ್ಟಡ ಕಾಣಬಹುದಾಗಿದೆ.

ಸೋಲಹ ಖಂಬಾ ಮಸೀದಿಯ ಹಿಂದಿನ ಭಾಗದಲ್ಲಿ ದಿವಾನ–ಇ–ಆಮ್ ಕಟ್ಟಡದ ಅವಶೇಷಗಳನ್ನು ಅದರ ಹಿಂದೆ ದಕ್ಷಿಣಕ್ಕೆ ಬಲಭಾಗದಲ್ಲಿ ತಖ್ತ್‌ಮಹಲ್

ಅಂದರೆ ಸಿಂಹಾಸನದ ಅರಮನೆಯನ್ನು ಕಳಣುತ್ತೇವೆ. ಆ ಕಾಲದಲ್ಲಿ ಅದೊಂದು ಭವ್ಯವಾದ ಅರಮನೆ ಆಗಿದ್ದಿತ್ತು. ತುಂಬೆಲ್ಲ ಬಣ್ಣದ ಹಂಚುಗಳಿಂದ ಅಲಂಕೃತವಾಗಿದ್ದಿತು. ಅದಕ್ಕೆ ಹೊಂದಿಕೊಂಡಂತೆ ರಾಣಿ ವಾಸ ಈಜುಕೊಳಗಳಿದ್ದವು. ಆ ಕಟ್ಟಡಕ್ಕೆ ಹೊಂದಿಕೊಂಡಂತೆ ದಕ್ಷಿಣಕ್ಕೆ ರಾಜ ಮಂಟಪವೊಂದರ ಅವಶೇಷಗಳಿವೆ. ಅದರ ಪಕ್ಕದಲ್ಲಿ ದಕ್ಷಿಣಕ್ಕೆ ಹಜಾರ ಕೊಠರಿ ಎಂಬ ನೆಲಮನೆ ಇದ್ದು, ಅದರಲ್ಲಿ ಗವಿಯೊಂದನ್ನು ಕೊರೆಯಲಾಗಿದೆ. ಅದನ್ನು ಆಪತ್ಕಾಲದಲ್ಲಿ ಕೋಟೆಯೊಳಗಿನಿಂದ ಹೊರಗೆ ಬರಲು ಬಳಸುತ್ತಿದ್ದರು. ಅರಮನೆಗಳ ಹಿಂದೆ ಬೊಮ್ಮಗೊಂಡನ ಹೆಸರಿನ ಕೆರೆಯೊಂದಿದ್ದು, ಅದರ ಸುತ್ತಣ ಪ್ರದೇಶಕ್ಕೆ ಒಳ ಕೋಟೆ ಎನ್ನುತ್ತಾರೆ. ಅಲ್ಲಿ ವೀರ ಸಂಗಯ್ಯನ ಸಮಾಧಿ ಇದ್ದು, ಅದರ ಪಕ್ಕದಲ್ಲಿ ಹಳೆ ಕೋಟೆಯ ಅವಶೇಷಗಳಿವೆ.

ಕೋಟೆಯ ಬಾಗಿಲಿನ ಹೊರವಲಯದಲ್ಲಿ ಅಧಿಕಾರಗಳು, ನಾಗರಿಕರು ವಾಸಿಸುತ್ತಿದ್ದರು. ಆ ವಲಯದ ಸುತ್ತಲೂ ಕೋಟೆ ಗೋಡೆ, ಕಂದಕ, ದ್ವಾರಗಳು ಇರುವುದು ವಿಶೇಷ. ಆ ಪುರದ ನಡು ಮಧ್ಯ ಭವ್ಯವಾಗಿ ನಿಂತಿರುವ ಅವಶೇಷಗಳಲ್ಲಿ ಪ್ರಮುಖವಾದದ್ದು ಮದರಸಾ (ವಿದ್ಯಾಕೇಂದ್ರ). ಅಂದಿನ ವಾಸ ಸಹಿತವಾದ ವಿಶ್ವವಿದ್ಯಾಲಯವಾಗಿದ್ದಿತು. ಅದನ್ನು ಮಂತ್ರಿಯಾಗಿದ್ದು ಮಹಮೂದ್ ಗವಾನನು ಕ್ರಿ.ಶ. 1472ರಲ್ಲಿ ನಿರ್ಮಿಸಿದನು. ಭಾರತದಲ್ಲಿಯೇ ಇದೊಂದು ವಿಶೇಷವಾದ ಕಟ್ಟಡ ಅವಶೇಷವಾಗಿದೆ. ಆ ಕಾಲದಲ್ಲಿ ಅದರ ಕೀರ್ತಿ ಮಧ್ಯ ಏಷ್ಯದವರೆವಿಗೂ ಹರಡಿತ್ತು. ಕಟ್ಟಡದ ಒಂದು ಭಾಗ ಸಿಡಿದು ಭಗ್ನಗೊಂಡಿದ್ದರೂ ಒಂದು ಮಿನಾರ್‌ದೊಂದಿಗೆ ಭವ್ಯವಾಗಿ ನಿಂತಿದೆ. ಅದರ ಭವ್ಯತೆ ಹಾಗೂ ಸೌಂದರ್ಯ ನೋಡಿಯೇ ಸವಿಯಬೇಕು.

ಇದು ಸಿಲಿಂಡರ್ ಆಕೃತಿಯ ಗೋಪುರ (ಟಾವರ) ಆಗಿದ್ದು, ಬೀದರ ನಗರದ ಮಧ್ಯೆ ನಾಲ್ಕು ರಸ್ತೆಗಳು ಕೂಡುವ ಸ್ಥಳದಲ್ಲಿ ಭವ್ಯವಾಗಿ ನಿಂತಿದೆ. ಇದರ ಎತ್ತರ 71

ಅಡಿ. ಇದರ ಒಳಗಡೆ ಸುತ್ತು ಮೆಟ್ಟಿಲುಗಳಿವೆ. ಮೇಲೇರಿ ನಿಂತಾಗ ಬಹುದೂರದವರೆಗೆ ದೃಷ್ಟಿಹಾಯುತ್ತದೆ. ಇದೊಂದು ಕಾವಲು ಗೋಪುರ ಆಗಿದ್ದಿತು. ಇತ್ತೀಚೆಗೆ ಇದರ ಮೇಲೆ ನಾಲ್ಕೂದಿಕ್ಕಿಗೆ ಗಡಿಯಾರಗಳನ್ನು ಅಳವಡಿಸಲಾಗಿದೆ.

ಬೀದರ ಪಟ್ಟಣದ ಸುತ್ತಲೂ ಹರಡಿರುವ ಪ್ರವಾಸಿ ಕೇಂದ್ರಗಳಲ್ಲಿ, ಅಷ್ಟೂರ ಗ್ರಾಮದ ಬಳಿಯ ಬಹಮನಿ ಅರಸರ ಗೋರಿಗಳು ಭಾವೈಕ್ಯದ ಸಂಕೇತವಾಗಿವೆ. ಇಸ್ಲಾಂ ವಾಸ್ತುಶಿಲ್ಪದ ಮಾದರಿಯಲ್ಲಿ ನಿರ್ಮಿಸಿದ ಈ ಕಟ್ಟಡಗಳ ಒಳನೋಟ ಅಲಂಕೃತವಾಗಿವೆ. ಇದಲ್ಲದೇ ಚೌಖಂಡಿ ಎನ್ನುವ ಕಟ್ಟಡ, ಉದಗೀರ ರಸ್ತೆಯಲ್ಲಿ ಇರುವ ಬರೀದಿ ಅರಸರ ಗೋರಿಗಳು ಮಹತ್ವವಾದವುಗಳು. ಅನೇಕ ಪ್ರಸಿದ್ಧ ದರ್ಗಾಗಳಿವೆ. ಅವುಗಳಲ್ಲಿ ಮುಲ್ತಾನಿ ಪಾಶಾದರ್ಗಾ, ಅಬುಲ್ ಫೈಜ ದರ್ಗಾಗಳು ಪ್ರಮುಖ.

ಬೀದರ ಪಟ್ಟಣದ ಸುತ್ತಲೂ ನೀರಿನ ಪವಿತ್ರ ಕುಮೆಡಗಳು, ಝುರಣಿಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪಾಪನಾಶಿ ತೀರ್ಥ, ನರಸಿಂಹ ಝಿರಾ ಮತ್ತು ಗುರುನಾನಕ ಝಿರಾ. ಪಾಪನಾಶಿ ಕ್ಷೇತ್ರ ದಕ್ಷಿಣಕಾಶಿ ಎಂದು ಪ್ರಕ್ಷಿ ಕ್ಷೇತ್ರ ಈಶ್ವರಲಿಂಗ, ನರಸಿಂಹ ಝಿರಾದಲ್ಲಿ ನರಸಿಂಹ ಗುಹಾಚಿತರ ದೇವಾಲಯ ಮತ್ತು ಗುರುನಾನಕ ಝಿರಾದಲ್ಲಿ ಗುರುದ್ವಾರಾ ಇವೆ. ದೇಶದ ನಾನಾ ಕಡೆಗಳಿಂದ ಇಲ್ಲಿಗೆ ಪ್ರವಾಸಿಗರು ಬರುತ್ತಾರೆ. ಬೀದರನ ಸಿದ್ಧಾರೂಢ ಮಹತ್ವದ ಕೇಂದ್ರವಾಗಿ ಬೆಳೆಯುತ್ತಿದೆ.

ಹುಮನಾಬಾದದಿಂದ ನಾಲ್ಕು ಮೈಲಿ ದೂರದಲ್ಲಿರುವ ಜಲಸಂಗಿ ಗ್ರಾಮದ ಶಿವಾಲಯ ಶಿಲ್ಪಕಲೆಯ ತಾಣವಾಗಿದೆ. ಈ ಶಿವಾಲಯದ ಒಳ ಮತ್ತು ಹೊರ ಭಾಗದ ಕೆತ್ತನೆ. ಪಟ್ಟದಕಲ್ಲು ವಾಸ್ತುಶಿಲ್ಪಕ್ಕೆ ಹೋಲುತ್ತದೆ. ಹೊರವಲಯದಲ್ಲಿರುವ ಶಿಲಾ ಬಾಲಿಕೆಯರ ವಿವಿಧ ಆಕರ್ಷಕ ಭಂಗಿಯ ಕೆತ್ತನೆ ಆಕರ್ಷಕವಾಗಿದ್ದು, ಬೀದರ ಭಾಲ್ಕಿಗಳ ನಡುವೆ ಮೈಲಾರ ಕ್ಷೇತ್ರ ಪ್ರಸಿದ್ಧ ತೀರ್ಥ ಸ್ಥಾನವಾಗಿದೆ. ಹುಮನಾಬಾದನ ಸಮೀಪ

ಇರುವ ಮಾಣಿಕ ಪ್ರಭುಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ – ಧಾರ್ಮಿಕ ಕೇಂದ್ರವು ಅಷ್ಟೇ ಮಹತ್ವದ್ದು. ಅಲ್ಲದೆ ಭಾಲ್ಕಿ, ಹುಮನಾಬಾದ, ಚಾಂಗಲೇರ, ಕರ್ಕನಳ್ಳಿ, ಹಾರಕೂಡ, ಔರಾದ, ಅಗ್ರಹಾರ ಮುಂತಾದ ಕಡೆಗಳಲ್ಲೂ ಧಾರ್ಮಿಕ ಸಾಂಸ್ಕೃತಿಕ ಕೇಂದ್ರಗಳಿವೆ.

ಬೀದರಿನ ಪರಿಸರದಲ್ಲಿ ಇತ್ತೀಚೆಗೆ ಸ್ಥಾಪಿತ ಪರಿಸರದಲ್ಲಿ ಇತ್ತೀಚೆಗೆ ಸ್ಥಾಪಿತ ಬರೀದ್ ಶಾಹಿ ಉದ್ಯಾನ ಮತ್ತು ದೇವ ದೇವ ವನ ಇವುಗಳೂ ಪ್ರವಾಸಿಗ್ಗರನ್ನು ಆಕರ್ಷಿಸುತ್ತಿವೆ. ಬಿದರಿ ಕಲೆ ವಸ್ತುಗಳನ್ನು ತಯಾರಿಸಿ ಮಾರುವ ಮಳಿಗೆಗಳಿಗೆ ಕೂಡಿ ಪ್ರವಾಸಿಗರು ಭೇಟಿ ನೀಡುತ್ತಾರೆ. ಕಾರಂಜಾ ಆಣೆಕಟ್ಟು ಕೂಡ ಆಕರ್ಷಣೀಯವಾಗಿ ಬೆಳೆದು ಬರುತ್ತಿದೆ. ಭಾರತ ವಾಯುಸೇನೆಯ ತರಬೇತಿಗಾಗಿ ಹಾರಾಡುವ ವಿಮಾನಗಳೂ ಪ್ರವಾಸಿಗರನ್ನು ಆಕರ್ಷಿಸದೆ ಇರವು.

ಜನಪದ ಕಲೆಗಳು

ಕರ್ನಾಟಕದ ಉತ್ತರ ತುದಿಯಲ್ಲಿರುವ ಒಂದು ಚಿಕ್ಕ ಜಿಲ್ಲೆ ಬೀದರ. ಹಲವು ಶತಮಾನಗಳ ಹಿಂದಿನ ಚರಿತ್ರೆ ಹೊಂದಿರುವ ಬೀದರ ಜಿಲ್ಲೆಯು ವಿವಿಧ ಜನಾಂಗ ಮತ್ತು ಸಂಸ್ಕೃತಿಗಳ ಸಮಮಿಲನವಾಗಿದೆ. ಇಲ್ಲಿ ಪ್ರಮುಖ ಭಾಷೆ ಕನ್ನಡವಾಗಿದೆ. ಇಲ್ಲಿಯ ಕನ್ನಡದ ಮೇಲೆ ಉರ್ದು, ಪರ್ಷಿಯನ್ ಭಾಷೆಗಳಲ್ಲಿದೆ ಗಡಿನಾಡಿನ ತೆಲಗು, ಮರಾಠಿ ಭಾಷೆಗಳು ಪ್ರಭಾವ ಬೀರಿದೆ. ಬೀದರ ಭಾಷೆಯು ಪ್ರಾದೇಶಿಕವಾದ ಭಿನ್ನತೆಯನ್ನು ಪಡೆದಿದ್ದು ವಿಶಿಷ್ಟವಾಗಿದೆ.

ಉತ್ತರ ಕರ್ನಾಟಕ್ಕೆ ಸೇರಿರುವ ಬೀದರ ಜಿಲ್ಲೆಯಲ್ಲಿ ಉತ್ತರ ಕರ್ನಾಟಕದ ಸಾಮಾನ್ಯ ಜನಪದ ಕಲೆಗಳೆಲ್ಲವು ಅಸ್ತಿತ್ವದಲ್ಲಿವೆ. ಸಾಮಾನ್ಯ ಲಕ್ಷಣಗಳೊಂದಿಗೆ ಕೆಲವು ಪ್ರಾದೇಶಿಕ ವೈಶಿಷ್ಟ್ಯತೆಗಳನ್ನು ಈ ಕಲೆಗಳು ಹೊಂದಿವೆ. ಗೊಂದಲಿಗರು, ಭೂತೇರು, ಪುರವಂತರು ಮುಂತಾದ ಧಾರ್ಮಿಕ ಕಲಾತಂಡಗಳು ಬಹುರೂಪಿಗಳಿಂದ ವೃತ್ತಿ

ಕಲಾವಿದರು, ಮೊಹರಂ ಹಬ್ಬಕ್ಕೆ ಸಂಬಂಧಿಸಿದ ಹುಲಿ ಕುಣಿತ, ಅಲಾಮಿ ಕುಣಿತ, ಪೈತ್ರಿ ಆಟ ಮುಂತಾದ ಕುಣಿತಗಳು, ದೊಡ್ಡಾಟ, ಡಪ್ಪಿನಾಟ (ಸಣ್ಣಾಟ) ಮುಂತಾದ ಜನಪದ ರಂಗಪ್ರಕಾರಗಳು, ಕೋಲಾಟದಂಥ ಜನಪದ ನೃತ್ಯ ಪ್ರಕಾರಗಳು ಇಲ್ಲಿಯ ಪ್ರಮುಖ ಕಲೆಗಳಾಗಿವೆ.

ಕಲೆಗಳು ಆಯಾ ದೇಶದ ಸ್ಮಾರಕವಾಗಿದ್ದು, ಸಂಸ್ಕೃತಿಯ ಜೀವಾಳವಾಗಿರುತ್ತವೆ. ಒಂದರ್ಥದಲ್ಲಿ ಕಲೆಗಳೇ ಸಂಸ್ಕೃತಿ ಎನ್ನುವಾಗ ಕಲೆಗಳ ಬಳಕೆ ಮತ್ತು ಮಹತ್ವದ ಅರಿವಾಗುತ್ತದೆ. ಕಲೆಗಳು ಜನಜೀವನವನ್ನು ಉದಾತ್ತ ಗೊಳಿಸುವ ಶಕ್ತಿ ಪಡೆದಿವೆ. ಕಲೆಗಳು ಮಾನವತೆಯ ಅಭಿವ್ಯಕ್ತಿಯೊಂದಿಗೆ ವಿಶ್ವಮಾನವತೆಯ ಪ್ರತೀಕವಾಗಿದ್ದು, ವ್ಯಕ್ತಿಕ್ಷೇಮ ಸಮಾಜ ಕ್ಷೇಮ ಸಾಧನೆಗೆ ಮಹತ್ವದ ಸಾಧನ. ಆದರೆ ಇಂದು ಆಧುನಿಕ ಮಾಯಾಲೋಕದ ಬೆನ್ನೇರಿ ಸಾಂಪ್ರದಾಯಿಕ ಕಲೆಗಳನ್ನು ಸಹ ಬದುಕಿನ ಕ್ಲೇಷ ನಿವಾರಣೆಗೆ ಬಳಸುತ್ತಿಲ್ಲ. ಇಂದಿನ ಜಾಗತಿಕ ಸಂದರ್ಭದಲ್ಲಿ ಸಮಕಾಲೀನವೆಂಬ ಹೆಸರಿನ ಪ್ರಯೋಗ ಪ್ರಿಯರು, ಪ್ರಚಾರಪ್ರಿಯರು ಕಲೆಗಳ ಮೌಲ್ಯಗಳನ್ನು ರಕ್ಷಸುತ್ತಿಲ್ಲ. "ಸಮಾಜ ತಾಯಿ, ಕಲೆ ಅದರ ಶಿಶು" ಎಂಬ ಕಲೆ ಮತ್ತು ಸಮಾಜಕ್ಕಿರುವ ಅನ್ಯೋನ್ಯ ಸಂಬಂಧಗಳು ಇಂದು ಯಾರಿಗೂ ಅರ್ಥವಾಗುತ್ತಿಲ್ಲ. ಇತಿಹಾಸ ಒಂದು ಜನಾಂಗದ ಜೀವನ ಚರಿತ್ರೆಯಾದರೆ, ಕೆಲಸಗಳು ಆಯಾ ದೇಶದ ಆತ್ಮಚರಿತ್ರೆಯಾಗುತ್ತವೆಂಬ ಹೇಳಿಕೆ ಯಾವತ್ತೂ ಸತ್ಯ. ಆದರೆ ಎಷ್ಟರ ಮಟ್ಟಿಗೆ ಕಲೆಗಳನ್ನು ಪೋಷಿಸುವ ಕಾರ್ಯ ನಡೆದಿದೆಯೆಂಬುದನ್ನು ಗಮನಿಸಬೇಕು.

ವೇದಪೂರ್ವ ಕಾಲದಿಂದ ಬಳಕೆಯಲ್ಲಿರುವ ಕಲೆಗಳು ಇಂದು ಅವಸಾನದ ಅಂಚಿನಲ್ಲಿವೆ. ಒಂದರ್ಥದಲ್ಲಿ ಮನುಷ್ಯರ ಎಲ್ಲಾ ವರ್ತನೆಗಳು ಕಲೆಗಳೇ. ಆದರೆ

ಅಧ್ಯಯನದ ಅನುಕೂಲಕ್ಕಾಗಿ ಕರಕುಶಲ ಕಲೆಗಳು ಲಲಿತ ಕಲೆಗಳೆಂದು ಕರೆಯಲಾಗಿದ್ದು, ಬಹುತೇಕ ಕಲೆಗಳು ಜನಪದ ಮೂಲದಿಂದ ಬಂದಿವೆ.

ಬೀದರ ಜಿಲ್ಲೆಯು ಹಲವಾರು ಕಲೆಗಳಿಗೆ ತವರು ನೆಲೆಯಾಗಿದ್ದು, ಇಂದಿನ ಕೊಳ್ಳುಬಾಕ (ಜಾಗತೀಕರಣ) ಸಂಸ್ಕೃತಿಯ ಹಿನ್ನಲೆಯಲ್ಲಿ ನಮ್ಮ ಎಲ್ಲ ಕಲೆಗಳು ಮತ್ತು ಅವುಗಳಿಗಿರುವ ಸಂಬಂಧಗಳು ಕಳಚಿ ಹೋಗಿವೆ. ಪ್ರಾಚೀನ ಕಾಲದಿಂದಲೂ ಬೀದರ ಜಿಲ್ಲೆ ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪಕಲೆ ಹಾಗು ಕುಶಲ ಕಲೆಗಳಿಗೆ ಪ್ರಸಿದ್ಧಿ ಪಡೆದಿದೆ.

ಬಿದ್ರಿಕಲೆಯಂತೂ ಜಗತ್ಪ್ರಸಿದ್ಧ ಕಲೆಯಾಗಿದ್ದು, ಬೀದರ ಜಗತ್ತಿನ ಏಕೈಕ ಬಿದ್ರಿ ತಯಾರಿಕಾ ಕೇಂದ್ರವಾಗಿರುವುದು ಗಮನಾರ್ಹ. ಆದರೆ ಸಮರ್ಪಕ ಮಾರುಕಟ್ಟೆಯಿಲ್ಲದೆ ಅದು ಬಡವಾಗುತ್ತಿದೆ. ಸಂಗೀತ ಶಾಲೆಗಳಿದ್ದರೂ ಜನತೆ ನಿರಾಸಕ್ತಿ ತೋರಿದ್ದಾರೆ. ಆದರೂ ಕೆಲ ಯುವ ಪ್ರತಿಭೆಗಳು ಸಂಗೀತದಲ್ಲಿ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗುತ್ತಿರುವುದು ಗಮನಾರ್ಹ, ಸಂಗೀತಕ್ಕೆ ಗೋರಟಾ ಹಾಗೂ ಬಸವ ಕಲ್ಯಾಣದ ಕೊಡುಗೆ ಅಪಾರ. ಇಲ್ಲಿರಂಗಭೂಮಿಗಾಗಿ ಸಹ ಅನೇಕರು ತೊಡಗಿಸಿಕೊಂಡಿದ್ದಾರೆ. ಸಮುದಾಯದ ಮೂಲಕ ಹಲವಾರು ರಂಗ ಪ್ರದರ್ಶನಗಳು ನಡೆದಿವೆ. ಆದರೆ ಅವೆಲ್ಲ ಇಂದು ಕ್ಷೀಣಿಸಿವೆ. ಚಿತ್ರಕಲೆ ಚರ್ಚಿಸುವಾಗ ಇಡೀ ದೇಶದ ಚಿತ್ರಕಲೆ, ಕಲಾವಿದರು ಆತಂಕದಲ್ಲಿದ್ದಾರೆ. ಎಲ್ಲವೂ ಡಿಜಿಟಲ್‌ಮಯವಾಗಿರುವುದರಿಂದ ಅನೇಕ ಚಿತ್ರಕಲಾವಿದರು ಕೆಲಸವಿಲ್ಲದೆ ಕೂಡುವ ಸ್ಥಿತಿಯುಂಟಾಗಿದೆ. ಅದೇ ರೀತಿ ಕರಕುಶಲ ಕಲೆಗಳಾದ ಮಡಕೆ ತಯಾರಿಕೆ, ಬುಟ್ಟಿ ನೇಯುವುದು, ಚಾಪೆ ಹೆಣೆಯುವುದು, ಕಸೂತಿ ಹಾಕುವುದು, ಕಂಬಾರಿಕೆ, ಕುಂಬಾರಿಕೆ ಹೀಗೆ ಹಲವಾರು ಕರಕುಶಲ ಕಲೆಗಳಿಗೆ ಜಾಗತೀಕರಣ ಬಂದು ತೆರೆ ಹಾಕಿದಂತಾಗಿದೆ. ಕರಕುಶಲ ಕಲೆಗಳೆಲ್ಲ ಪ್ಲಾಸ್ಟಿಕ್ ರೂಪದಲ್ಲಿಯೇ ಸಿಗುತ್ತಿರುವುದರಿಂದ, ಕುಶಲಕರ್ಮಿಗಳು ಕೆಲಸ

ಕಳೆದುಕೊಂಡರೆ, ಅತ್ತ ಪ್ಲಾಸ್ಟಿಕ್‌ದಿಂದಾಗಿ ವಿಪರಿತ ಮಾಲಿನ್ಯವು ಉಂಟಾಗುತ್ತಿದೆ. ವಿಶೇಷವಾಗಿ ಬೀದರ ಜಿಲ್ಲೆ ಜನಪದ ಕಲೆಗಳಾದ ಗೊಂದಲಿಗರು. ಭೂತೆಯರು ಪುರುವಂತಿಯವರು, ಬಹುರೂಪಗಳು, ಹುಲಿವೇಶದ ಕುಣಿತ, ಡೊಳ್ಳು ಅಲಾಯಿ (ಮೊಹರಂ) ಪೈತ್ರಿ ದೊಡ್ಡಾಟ. ಸಶಾಟ, ಡಪ್ಪಿನ, ಆಟ, ಗಂಗಾಳ ಮಂಟಪ, ಕೋಲಾಡಿಗಳಲ್ಲದೇ ಮದುವೆ ಹಾಗೂ ಸಾವುಗಳ ಸಂದರ್ಭದ ನಡುವೆ ಆಟಗಳು ಇಂದು ಮರೆಯಾಗಿವೆ. ಹೀಗೆ ಆಟಗಳು ಜನ ಜೀವನದಿಂದ ಕೇವಲ ಯಾಂತ್ರಿಕ ಜೀವನವನ್ನು ನಡೆಸುವಂತಾಗಿದೆ.

ಅಧ್ಯಾಯ – 3

ಆಚರಣೆ ಹಿಂದಿನ ನಂಬಿಕೆಗಳು ಮತ್ತು ಆಚರಣೆಗಳು

1.1 ಯುಗಾದಿ ಅಮವಾಸ್ಯೆ.

1.2 ಕಾರ ಹುಣ್ಣಿಮ್ಮೆ ಮತ್ತು ಹ್ವಾಳದ ಅಮವಾಸ್ಯೆ.

1.3 ಗೋಧಿ ಏರಿಸುವ ಹುಣ್ಣಿವೆ.

1.4 ದಸರಾ ಹಬ್ಬ / ಅಮವಾಸ್ಯೆ.

1.5 ಎಳ್ಳ ಅಮವಾಸ್ಯೆ.

1.6 ಢವಾರಿ

1.7 ಕೊಟ್ಟಿಗೆ ಹುಣ್ಣಿಮೆ.

1.8 ಚೇಟ್ಟಿ ಅಮಾವಸ್ಯೆ

ಅಧ್ಯಾಯ–3
ಆಚರಣೆ ಹಿಂದಿನ ನಂಬಿಕೆಗಳು ಮತ್ತು ಆಚರಣೆಗಳು

ಯಾವುದೇ ಒಂದು ಹಬ್ಬವನ್ನು ಆಚರಿಸಲು ಅದಕ್ಕೊಂದು ಸೂಕ್ತವಾದ ಕಾರಣವಿರುತ್ತದೆ. ಅದೇ ರೀತಿಯಾಗಿ ಬೀದರ ಜಿಲ್ಲೆಯಲ್ಲಿ ಆಚರಿಸಲ್ಪಡುವ ಕೃಷಿ ಹಿನ್ನಲೆಯ ಹಬ್ಬ, ಹುಣ್ಣಿಮೆ, ಅಮವಾಸ್ಯೆಗಳಿಗೂ ಒಂದು ನಂಬಿಕೆ ಎನ್ನುವುದು ಇರುತ್ತದೆ, ಆ ನಂಬಿಕೆಯಿಂದಲೇ ಚಾಚೂ ತಪ್ಪದೇ ನಿಯಮ ಬದ್ಧವಾಗಿ ಪರಂಪರಾಗತವಾಗಿ ಆಚರಿಸಿಕೊಂಡು ಬರುತ್ತಾರೆ. ಈ ಮುಂದೆ ಕೃಷಿ ಹಿನ್ನಲೆಯ ಪ್ರತಿಯೊಂದು ಹಬ್ಬ, ಹುಣ್ಣಿ, ಅಮವಾಸ್ಯೆಗಳ ಹಿಂದಿನ ನಂಬಿಕೆ, ಆ ನಂಬಿಕೆಯಿಂದ ಅವರು ಅದನ್ನು ಆಚರಿಸುವ ಪದ್ಧತಿ ಮತ್ತು ಅದರ ಮಹತ್ವ ಎಂಥದ್ದು ಎನ್ನುವುದನ್ನು ಬಿಡಿಬಿಡಿಯಾಗಿ ವಿಸ್ತಾರವಾಗಿ ತಿಳಿಸಲಾಗಿವೆ.

1.1 ಯುಗಾದಿ ಅಮವಾಸ್ಯೆ :–

ನಂಬಿಕೆ :

ಯುಗಾದಿಯ ನೈಜತೆ ಉಳಿದಿರುವುದೇ ರೈತಾಪಿಗಳಲ್ಲಿ ನಗರ ವಾಣಿಜ್ಯಗಳಿಗೆ ಯುಗಾದಿ ಕೇವಲ ಒಂದು ಹಬ್ಬ ಅಷ್ಟೇ ಅವರು ಹೆಚ್ಚೆಂದರೆ ಎರಡು ದಿವಸ ಮಾಡಿಯಾರು. ಆದರೆ ರೈತರ ಹಬ್ಬದ ಸಂಭ್ರಮ ಹದಿನೈದು ದಿನ ಮುಂಚೆಯೇ ಶುರು. ಆಗೆ ಯಾರು ಏನು ಕೇಳಿದರೂ ಅವರ ಉತ್ತರ ಒಂದೇ ಹಬ್ಬ "ಮುಗಿಲಿ ತಡಿರಿ" ಕೊಟ್ಟ ಸಾಲ ಕೇಳಲು ಬಂದವರಿಗೂ ಅಥವಾ ತಮ್ಮಿಂದ ಸಾಲ ಕೇಳುವವರಿಗೂ ಈ ಸಂದರ್ಭ ಸಂಸಂಧಿಯಾಗಿದೆ. ಮನೆಯ ಹೆಣ್ಣು ಮಕ್ಕಳು ಮನೆಯನ್ನೆಲ್ಲಾ ಶುಚಿಗೊಳಿಸುತ್ತಾರೆ. ಹೀಗೆ ಯುಗದ ಆದಿಯದ ಈ ದಿನ ಶಾಲಿವಾಹನ ಶಕೆಯ ಹೊಸ ಸಂವತ್ಸರದ

ಪ್ರಾರಂಭದ ದಿನವಾಗಿರುವುದರಿಂದ ನಿಸರ್ಗ ವರ್ಷದ ಮೊದಲನೇ ದಿನವಾದರಿಂದ ಈ ದಿನವನ್ನು ಯುಗಾದಿಯ ಹೆಸರಿನಲ್ಲಿ ಸಂಭ್ರಮ ಸಡಗರದಿಂದ ಆಚರಿಸುತ್ತಾರೆ.

ಯುಗಾದಿ ರೈತರ ಸಂಪೂರ್ಣ ಬಿಡುವಿನ ಕಾಲದಲ್ಲಿ ಬರುವಂಥದ್ದು ಅಥವಾ ಕೊನೆ ಮತ್ತು ದುಡಿಮೆಯ ಆರಂಭ ಇವೆರಡರ ನಡುವಣ ಹಬ್ಬ ಆದ್ದರಿಂದಲೇ ಈ ಹಬ್ಬದಲ್ಲಿ ಬೇವು ಬೆಲ್ಲದ ಮಿಶ್ರಣ ವಿರುತ್ತದೆ. ಈ ಸಂದರ್ಭದಲ್ಲಿ ಭೂಮಿ ತಾಯಿ ಕೂಡ ಬಹಿಷ್ಠೆ-ಯಾಗಿರುತ್ತಾಳೆಂದು ರೈತರ ನಂಬಿಕೆ.

ಯುಗಾದಿ ಯಾವುದೇ ದೇವ-ದೇವತೆಗಳ ಸೋಕಿಲ್ಲದ ನಿಸರ್ಗದ ಹಬ್ಬ ಜನಪದರಿಗೆ ಹೊಸ ವರ್ಷದ ಮೊದಲ ದಿನ. ಹೊಸ ಮಳೆಗಾಲಕ್ಕೆ ಶ್ರೀಕಾರ. ಒಳ್ಳೇಯದು-ಕೆಟದ್ದನ್ನು ಸಮನಾಗಿ ಸ್ವೀಕರಿಸುವ ಆಶಯದಿಂದ ಬೇವು-ಬೆಲ್ಲ ಬಾಯಿಗೆ ಹಾಕಿಕೊಳ್ಳುತ್ತಾರೆ.

ಯುಗಾದಿ ಆಚರಣೆ :-

ರೈತರು ಯುಗಾದಿ ಹೊಸ ವರ್ಷ ಎಂದು ಆಚರಿಸುತ್ತಾರೆ. ರೈತರಿಗೆ ಯುಗಾದಿಯಿಂದ ಹೊಸ ಹೊಸ ಕೆಲಸವನ್ನು ಮಾಡಲು ಆಚರಿಸುತ್ತಾರೆ. ಅದು ಯಾವ ಕೆಲಸ ಅವರ ಆಳ್ಳ ಮಕ್ಕಳಿಗೆ ಹೊಸ ಕೆಲಸಗಳನ್ನು ಮಾತ್ತಾನಾಡುವದು ಹೊಸ-ಹೊಸ ಬಟ್ಟೆಗಳನ್ನು ತೆಗೆದು ಕೊಡುವುದು ತಮ್ಮತಮ್ಮ ಮಕ್ಕಳಿಗೆ ರೈತರು ಈ ಯುಗಾದಿಯ ಅಮವಾಸ್ಯೆಯಿಂದ ಪ್ರಾರಂಭಿಸುತ್ತಾರೆ.

ಮೂರು ದಿವಸ ಯುಗಾದಿ ಹಬ್ಬ ಆಚರಿಸುತ್ತಾರೆ. ಒಂದು ದಿವಸ ಅಮವಾಸ್ಯೆ ಎರಡನೆಯ ದಿವಸ ಯುಗಾದಿ ಮೂರನೆಯ ದಿವಸ ತಗಾದಿ ಎಂದು ಆಚರಿಸುತ್ತಾರೆ.

ಅಮವಾಸ್ಯೆ ದಿವಸ ಮನೆಯನ್ನು ಸ್ವಚ್ಚಗೊಳಿಸಿ ಮನೆಯ ಮುಂದೆ ರಂಗೋಲ್ಲಿಯನ್ನು ಹಾಕಿ ಸೀಹಿ ತಿಂಡಿಯನ್ನು ಮಾಡುತ್ತಾರೆ. 7 ಗಂಟೆಯ ಸಮಯಲ್ಲಿ

ಆ ರೈತ ಒಂದು ಕಟ್ಟಿಗೆಯ ಬುಟ್ಟಿ ಅದಕ್ಕೆ ರೈತರು ತೂರಾಬುಟ್ಟಿ ಎಂದು ಕರೆಯುತ್ತಾರೆ. ಬುಟ್ಟಿಯಲ್ಲಿ ಜೊಳವನ್ನು ಹಾಕುತ್ತಾರೆ. ಒಂದು ತಂಬಿಗೆಗೆ ಮಾವಿನ ಎಲೆಯನ್ನು ಹಚ್ಚಿ ಕಳಸವನ್ನು ಮಾಡುತ್ತಾರೆ. ಒಂದು ಬಟ್ಟಲಲ್ಲಿ ಕಡ್ಡಲೆ ಬೇಳೆ ಮತ್ತು ಬೆಲ್ಲಾವನ್ನು ಇಕ್ಕುತ್ತಾರೆ. ಒಂದು ಬಟ್ಟಲಲ್ಲಿ ಅಕ್ಕಿಯನ್ನು ಇಕ್ಕುತ್ತಾರೆ. ಆ ಬುಟ್ಟಿಯಲ್ಲಿ ದೀಪವನ್ನು ಹಚ್ಚುತ್ತಾರೆ. ಆ ಬುಟ್ಟಿಯನು ತೆಗೆದುಕೊಂಡ ರೈತರು ಬಡ್ಡಿಗೇರ ಮನೆಗೆ ಹೋಗುತ್ತಾರೆ. ಹೋಗುವಾಗ ಯಾರು ಮಾತು ಆಡುವುದಿಲ್ಲ ಬಡಗೆನು ಕುಂಟಿಗಯನ್ನು ತಂದು ಮನೆಯ ಮುಂದೆ ಇಕ್ಕುತ್ತಾನೆ. ಆ ಕುಂಟ್ಟಿಗೆ ರೈತನು ಪೂಜೆಯನ್ನು ಮಾಡುತ್ತಾನೆ. ಕಡಲೆಬೇಳಿ ಬೇಲ್ಲಾ ಅಲ್ಲಿ ಇದ್ದು ಜನರಿಗೆ ಕೊಡುತ್ತಾನೆ.

ರೈತ ಸ್ವಲ್ಪ ಬಂಗಾರದ ತುಂಡನ್ನು ತೆಗೆದುಕೊಂಡು ಹೋಗಿ ಆ ಕೊಂಟ್ಟಿಗೆ ಒರೆಸುತ್ತಾನೆ. ತನ್ನ ಹೊಲ ಬಂಗಾರ ದಂತ್ತೆ ಬೇಳೆಯಲ್ಲಿ ಎಂದು ರೈತನು ಆ ಕೊಂಟ್ಟಿಗೆ ನಮಸ್ಕರಿಸುತ್ತಾನೆ. ಆ ಬುಟ್ಟಿಯಲ್ಲಿ ಇದ್ದು ಜೋಳಾವನ್ನು ಬಡಗೆನಿಗೆ ಕೊಡತ್ತಾನೆ. ಬುಟ್ಟಿಕಳಸಾ, ದೀಪಾ ರೈತ ಮನೆಗೆ ತೆಗೆದುಕೊಂಡು ಬರುತ್ತಾನೆ. ಮತ್ತೆ ಆ ರೈತ ಆ ಕೊಂಟಿಯನ್ನು ಹೊಲದಲ್ಲಿ ಇಟ್ಟು ಬರುತ್ತಾನೆ.

ಯುಗಾದಿಯ ನಸಕಿನಲ್ಲಿ ಎದ್ದು ಸ್ನಾನವನ್ನು ಮಾಡಿ ಎತ್ತುಗಳನ್ನು ತೆಗೆದು ಕೊಂಡು ಹೋಗುತ್ತಾನೆ. ಹೊಲಕ್ಕೆ ಹೋಗಿ ಕುಂಟಿಯನ್ನು ಕಟ್ಟುತ್ತಾನೆ.

ಈಗ ರೈತನ ಹೆಂಡತಿ ಎದ್ದು ಸ್ನಾನವನ್ನು ಮಾಡಿ ಅಡಿಗೆಯನ್ನು ಮಾಡುತ್ತಾಳೆ. ಅಂದಿನ ಅಡುಗೆಯಲ್ಲಿ ಅನ್ನ, ಶಾವಗಿ, ಮೊಸರು, ಬೇವು, ಬೆಲ್ಲಾ, ಪ್ರಮುಖವಾಗಿರುತ್ತವೆ. ಇಷ್ಟನ್ನು ಮಾಡಿ ಮನೆಯಲ್ಲಿ ಇದ್ದ ದೇವರನ್ನು ಪೂಜಿಸಿ ಅವಳು ಆ ಮಾಡಿಟ್ಟ ಅಡಿಗೆಯನ್ನು ಮನೆಯ ದೇವರಿಗೆ ಮತ್ತು ಊರಿನಾ ಎಲ್ಲಾ ದೇವರಿಗೆ ನಿವೇದೆಯನ್ನು ತೋರುತ್ತಾರೆ.

ಆ ಮಾಡಿದ ಅಡಿಗೆಯನ್ನು ಹೊಲಕ್ಕೆ ಒಯ್ಯುತ್ತಾಳೆ. ಹೊಲದಲ್ಲಿ ಕುಂಟಿಗೆ ಮತ್ತು ಎತ್ತುಗಳಿಗೆ ಪೂಜೆಯನ್ನು ಮಾಡಿ ನಿವುದಿಯನ್ನು ತೋರುತ್ತಾಳೆ. ನಂತರ ರೈತನು ಊಟವನ್ನು ಮಾಡುತ್ತಾನೆ.

ಸಂಜೆಯ ಸಮುಯದಲ್ಲಿ ಊರು ಗೌಡರು ಈ ಹಬ್ಬವನ್ನು ಬಹಳ ಸಂತೋಷದಿಂದ ಆಚರಿಸುತ್ತಾರೆ. ಅದು ಹೇಗೆ ಅಂದರೆ ಪಂಚಾಗವನ್ನು ತರುತ್ತಾರೆ. ತಂದು ಆ ಉರಲ್ಲಿ ಇದ್ದ ಜೋತಿಷ್ಯ ಮತ್ತು ಸ್ವಾಮಿ ಯಾರಾದರು ಒಬ್ಬರನ್ನು ಕರೆಸಿ ಹನುಮಾನ ಗುಡಿಯಲ್ಲಿ ಊರಿನ ಗೌಡರು ಕೊಡುತ್ತಾರೆ. ಊರಿನ ರೈತರಿಗೆ ಕರೆಸುತ್ತಾರೆ. ಆ ಸ್ವಾಮಿ ಗೌಡರ ಮನೆಗೆ ಬಂದು ಪಂಚಾಂಗ ಬುಟ್ಟಿಯಲ್ಲಿ ಜೋಳಾ ಅಕ್ಕಿ, ಒಂದು ತಂಬಿಗೆಗೆ ಕಳಿಸವನ್ನು ಮಾಡಿ ಬಾಜಿಯನ್ನು ಹಚ್ಚಕೊಂಡು ಹೋಗುತ್ತಾರೆ. ಆ ಗುಡಿಯಲ್ಲಿ ಇದ್ದ ಜನರಲ್ಲಾ ಆ ಪಂಚಾಂಗಕ್ಕು ಪೂಜಿಸುತ್ತಾರೆ. ಆಗ ಸ್ವಾಮಿ ಪಂಚಾಂಗವನ್ನು ಯಾವ ಯಾವ ಮಳೆ ಎಷ್ಟರ ಮಟ್ಟಿಗೆ ಸುರಿಯಲ್ಲಿದೆ. ಆ ಮಳೆ ಎಲ್ಲ ಬೀಳುತ್ತದೆ ಹಾಗಾದರೆ ಅದಕ್ಕೆ ಪೂರಕವಾಗಿ ಅವರ ಪಂಚಾಂಗದ ಆಧಾರದ ಮೇಲೆ ಬಿತ್ತಬೇಕು. ಯಾವ ಫಸಲಿಗೆ ಹೆಚ್ಚಿನ ಯೋಗವಿದೆಯೆಂದು ಬೀಜಗಳ ಬಿತ್ತನೆಗೆ ಮಾಡುತ್ತಾರೆ. ಗೌಡರು ಮನೆಗೆ ಬರುತ್ತಾರೆ. ಈ ರೀತಿಯಾದ ಆಚರಣೆಗೆ ಯುಗಾದಿ ಎಂದು ಕರೆಯುತ್ತಾರೆ.

ಮೂರನೆಯ ದಿವಸ ತಗಾದಿ ಎಂದು ಮಾಡುತ್ತಾರೆ. ತಗಾದಿ ಅಂದರೆ ಯಾರಿಗೆ ಹಣ ಧನ್ಯಯನ್ನು ಕೊಟ್ಟಿದ್ದಾರೆ. ಅದು ಹಿಂತಿರಗಿ ಕೊಡುತ್ತಾರೆ. ಇದಕ್ಕೆ ತಗಾದಿ ಎಂದು ಹೇಳುತ್ತಾರೆ. ಈ ರೈತರು ಇಷ್ಟೆಲ್ಲಾ ಕಷ್ಟವನ್ನು ಪಟ್ಟು ಹಬ್ಬಗಳನ್ನು ಆಚರಿಸುತ್ತಾರೆ.

ರೈತರು ಹೊಸ ಹೊಸ ವರ್ಷಗಳು ಎಂದು ಅವರು ಯುಗಾದಿಯ ಎಂದು ಆಚರಿಸುತ್ತಾರೆ.

ಇಂದಿನ ಕಾಲದಲ್ಲಿ ಬದಲಾದ ಯುಗಾದಿ ಆಚರಣೆ : ಜನಪದರು . . . . ಯಾವುದೇ ಹಬ್ಬ-ಹರಿದಿನಗಳನ್ನು ಹೆಚ್ಚು ಶಾಸ್ತ್ರೋಕ್ತವಾಗಿ, ಸಂಪ್ರದಾಯ ಬದ್ಧವಾಗಿ ಹೆಚ್ಚು ದಿನಗಳ ಕಾಲದವರೆಗೆ ಆಚರಿಸುತ್ತಿದ್ದರು. ಆದರೆ ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಇಂದಿನ ಜನರಲ್ಲಿ ಸಮಯದ ಅಭಾವ ಇರುವುದರಿಂದ ಜೀವನದ ದಿನಗಳು ಕಡಿಮೆ-ಯಾಗುತ್ತಿರುವುದರಿಂದ ಈ ಪರಿಣಾಮ ಹಬ್ಬಗಳ ಮೇಲೂ ಬೀರುವ ಈ ಕಾರಣಕ್ಕೆ ಯುಗಾದಿ 2 ದಿನಗಳಿಂದ ಇಂದು ಒಂದು ದಿನಕ್ಕೆ ಬಂದು ನಿಂತಿದೆ. ಅಲ್ಲದೆ ಸಾಲಗಾರರು ಊರಮನೆಯವರಲ್ಲಿ ಪಡೆಯದೆ, ಸರಕಾರಿ ಬ್ಯಾಂಕುಗಳಿಂದ ಲೇವಾದೇವಿ ಸಂಸ್ಥೆಯಗಳಿಂದ ಪಡೆಯುತ್ತಿರುವುದರಿಂದ ತಗಾದೆಯ ಆಚರಣೆ ನಿಂತಿದೆ ಈಗ ಬಾವಿ ಕೊಳವೆ ಬಾವಿಗಳು ಇರುವುದರಿಂದ ಮಳೆ ಅವಲಂಬಿತ ಕೃಷಿಯೂ ಕಡಿಮೆಯಾಗುತ್ತಿರುವ ಹಿನ್ನಲೆಯಿಂದಲೂ ಪಂಚಾಂಗದ ವ್ಯವಸ್ಥೆಯೂ ನಿಲ್ಲುತ್ತದೆ.

1.2 ಕಾರುಹುಣ್ಣಿಮೆ :-

ನಂಬಿಕೆ :-

ಕಾರಹುಣ್ಣುಮೆ ಮಾಡುವುದರ ಹಿಂದೆ ನಿರ್ದಿಷ್ಟವಾದ ಉದೇಶವೊಂದಿದೆ. ಅದೇನೆಂದರೆ ಯಾವ ಫಸಲು ಈ ವರ್ಷ ಉತ್ತಮವಾಗಿ ಆಗುತ್ತದೆ. ಎಂಬುದನ್ನು ಇದರಿಂದ ರೈತರು ತಿಳಿಯುತ್ತಾರೆ. ಹೇಗೆಂದರೆ ಎತ್ತುಗಳ ಕರಿ ಹರಿದಾಗ ಕೆಂಪು ಬಣ್ಣದ ಎತ್ತು ಮುಂದೆ ಬಂದರೆ ಕೆಂಪು ಧಾನ್ಯಗಳು ಆ ವರ್ಷ ಉತ್ತಮವಾಗಿ ಆಗುತ್ತವೆ. ಆ ಬೆಳೆಗಳಿಗೆ ಯಾವುದೇ ಕೀಟ-ರೋಗಾದಿಗಳು ಬರುವುದಿಲ್ಲ ಎಂದರ್ಥ ಒಂದು ವೇಳೆ ಬಿಳಿ ಎತ್ತು ಮುಂದೆ ಬಂದರೆ ಬಿಳಿ ಫಸಲು ನೀಡುತ್ತೇವೆ ಎಂದು ತೀರ್ಮಾನಿಸುತ್ತಾರೆ.

ಇಡೀ ವರ್ಷ ರೈತನು ಬೇಸಲು ಎತ್ತುಗಳು ಹಾಗೂ ಕೃಷಿಯ ಪ್ರೀತಿಯು ಕಾರೆಗು ಬೇಕಾಗುವ ಸಲಕರೆಣೆಗಳನ್ನು ಕಾರುಣಿಯ ದಿವಸ ಎತ್ತುಗಳನ್ನು ಮದುಮಕ್ಕಳಂತೆ ಶೃಂಗರಿಸಿ ಪೂಜಿಸಿ ವಿವಿಧವಾದ ಭಕ್ಷಗಳನ್ನು ತಯಾರಿಸಿ ಅವುಗಳಿಗೆ ಅರ್ಪೀಸುತ್ತಾರೆ.

ಆಚರಣೆ :

ಎತ್ತುಗಳು ಮದುವೆ ಮಾಡುವ ದಿವಸವೆಂದು ರೈತರು ಮಾಡುತ್ತಾರೆ. ಬೀದರ ಜಿಲ್ಲೆಯ ಕೆಲವು ಭಾಗದಲ್ಲಿ ಕಾರು ಹುಣ್ಣಿಮೆಯನ್ನು ಆಚರಿಸಿದರೆ ಇನ್ನು ಕೆಲವರು ಅದೇ ರೀತಿಯ ಆಚರಣೆ 15 ದಿನಗಳ ನಂತರ ಬರುವ ಅಮವಾಸ್ಯೆ ಎಂದು ಹಾಳಾಯೆಂದು ಮಾಡುತ್ತಾರೆ.

ಈ ಹಬ್ಬವನ್ನು ಮೂರು ದಿವಸ ಕಾಲ ಆಚರಿಸುತ್ತಾರೆ. ಮೊದಲನೆಯ ದಿವಸ ಹೊನ್ನ ಹೊಗ್ಗಿ ಎರಡನೇ ದಿವಸ ಹುಣ್ಣಿಮೆ ಮೂರನೇಯ ದಿವಸ ಕರಿ.

ಮೂರನೆಯ ದಿವಸ ಹೊನ್ನ ಹೊಗ್ಗಿ ದಿನ ಜೋಳವನ್ನು ಕುಟ್ಟಿ ಅದರಿಂದ ತಯ್ಯಾರಿಸಿ ಖಿಚಡಿ ಜೊತೆಗೆ ಕಳ್ಳವೆಯ ಅನ್ನು ಧಪ್ಪಾಟಿ, ಸಾರು ಮಾಡಿ ಸಾಯಂಕಾಲ ಐದು ಗಂಟೆ ಸುಮಾರಿಗೆ ಮನೆಗೆ ತಂದು ಪೂಜಿಸಿ ಒಂಬತ್ತು ಮುತ್ತಿನ ಎಲೆಯನ್ನು ತೆಗೆದುಕೊಂಡು ಒಂದು ಎಲೆ ಮೇಲೆ ಖಿಚಡಿಯನ್ನು ಇಕ್ಕುತ್ತಾರೆ. ಅದರ ಮೇಲೆ ತುಪ್ಪವನ್ನು ಹಚ್ಚಿ ಎತ್ತುಗಳಿಗೆ ಅದನ್ನು ಅರ್ಪಿಸುತ್ತಾರೆ. ಮರದಿಂದ ಸ್ವಲ್ಪ ಹಾಲನ್ನು ಹೊಲದಿಂದ ತುದಿ ಎನ್ನುವ ಆ ಮರದಲ್ಲಿ ದೀಪವನ್ನು ನೈವೇದ್ಯಯನ್ನು ತೋರುತ್ತಾರೆ. ಹೊಲದಿಂದ ತಂದ ಹುಲ್ಲಿನ್ನ ಎತ್ತುಗಳು ಭೂಜದ ಮೇಲೆ ಇಕ್ಕಿ ಈ ದಿನ ಉಟಕ್ಕೆ ಹೊತ್ತಾಯಿತು. ನಾಳೆ ಉಟಕ್ಕೆ ಬನ್ನಿ ಎಂದು ಆ ಎತ್ತುಗಳಿಗೆ ಹೇಳುವ ಒಂದು ಪದ್ಧತಿ.

ಈ ಹುಣ್ಣಿಮೆ ದಿವಸ ರೈತನ್ನು ನಸುಕಿನಲ್ಲಿ ಎದ್ದು ಎತ್ತುಗಳಿಗೆ ಸ್ನಾನವನ್ನು ಮಾಡಿಸುವಾರು ಜೋತೆಗೆ ಕೃಷಿ ಉಪಕರಣಾಗಳಾದ ಕೊರಗೆ, ನೊಗಾ, ತಾಳ, ಬೀತುವ, ಚಡ್ಡಿ, ಪಲಗಾ, ಕಾರು ಬಿಳ್ಳಿ, ಹಂಬಲಗಳನ್ನು ಚೆನ್ನಾಗಿ ತೊಳೆದು ಅವುಗಳಿಗೆ ಸುಣ ಜಾಜವನ್ನು ಲೇಪಿಸುತ್ತಾರೆ.

ಮನೆಯಲ್ಲಿ ಮಡದಿ ಸಿಹಿ, ತಿಂಡಿಗಳನ್ನು ತಯ್ಯಾರು ಮಾಡುತ್ತಾಳೆ. ಮನೆಯಲ್ಲಿನ ಎಲ್ಲಾ ದೇವರಿಗೂ ಲಕ್ಷ್ಮೀ ಊರಲ್ಲಿ ಹನುಮಾನ ಮಂದಿರಕ್ಕೆ ಹೊಲದಲ್ಲಿನ ಪಾಂಡವರು ಹೀರೆಡೆ ಹಿರಿಯರ ಸಮಾಧಿಗಳಿಗೂ ಆ ಅಡಗೆಯನ್ನು ತೋರುತ್ತಾರೆ.

ಆ ಎತ್ತುಗಳಿಗೆ ಬಣ್ಣದ ಛಾಪಾ, ಹೊಡೆಯುತ್ತಾರೆ ಎತ್ತುಗಳ ಖೊಡುಗಳಿಗೆ ವಾರನಿಸ ಹಚ್ಚುತ್ತಾರೆ. ನೂಲ್ಲಿನ ಮೂರಕಿ ಕಟ್ಟುತ್ತಾರೆ. ಹೆಣ್ಣಿಗೆ ಮತಾಟ್ಟಿ ಕಟ್ಟುತ್ತಾರೆ. ಬೇನ್ನು ಮೇಲೆ ಝೂಲ ಹಾಕುತ್ತಾರೆ. ಆರು ಹೊಡಿಯುವ ಸಾಮಾನ್ಯ ರೈತನ ಪಡಸಾಲೆಯಲ್ಲಿ ಮೇಲೆ ಜಾಜಿದಿಂದ ಸೂರ್ಯಚಂದ್ರವನ್ನು ಬರೆದು ಕಟ್ಟಗೀಯ ಬುಟ್ಟಿಲ್ಲಿ 9 ಕರಿದ ಹೊಳ್ಳಗಿಯನ್ನು ಇಕ್ಕಿ ಅಲಂಕರಿಸಿದ ಎತ್ತುಗಳಿಗೆ ನಿಲ್ಲಿಸಿ ರೈತ ರೈತನ ಹೆಂಡತಿ ಪೂಜಿಸಿ ಎತ್ತುಗಳಿಗೆ ಹಂತ್ತಿ ಕಟ್ಟುತ್ತಾರೆ.

ಗೌಡರು ಕೆಲಸದವುರು ಹನ್ನೆರಡು ಬಲ್ಲತಾಗಾರರಾದ ಅಗಸು, ಕಂಬಾರ ಕುಂಬಾರ ಬಡಗೆ ಮಠದ ಸ್ವಾಮಿ ಇತ್ಯಾದಿ ಜನರಿಗೆ ಊಟಕ್ಕೆ ಹೆಳುತ್ತಾರೆ. ಮತ್ತೆ ಅಮವಾಸ್ಯೆಯ ಮೂರು ದಿವಸ ಕರಿ ಎಂದು ಮಾಡುತ್ತಾರೆ. ಆ ದಿವಸ ಕರಿದು ತಿಂಡಿದಿನಿಸುಗಳನ್ನು ದೇವರಿಗೆ ಪೂಜಿಸಿ ನೈವ್ಯದಿಯನ್ನು ತೋರುತ್ತಾರೆ. ರೈತರು ಮಾಡುತ್ತಾರೆ.

ಹುಣ್ಣಿಮೆ ದಿನಾ ರೈತರು ಬಹಳ ಸಂತೋಷದಿಂದ ಆ ಕಾರು ಹುಣ್ಣಿಮೆ ಎಂದು ಆಚರಣೆಯನ್ನು ಮಾಡುತ್ತಾರೆ.

ಈ ಹಬ್ಬವನ್ನು ಬೀದರ ಜಿಲ್ಲೆಯಾದ್ಯಂತ ಸಂಭ್ರಮ ಸಡಗರದಿಂದ ಆಚರಿಸುತ್ತಾರೆ. ಆದರೆ ಕೆಲ ತಾಲ್ಲೂಕುಗಳಲ್ಲಿ ಇದನ್ನು ಹುಣ್ಣಿಮೆಯೆಂದು ಆಚರಿಸಿ ಕಾರಹುಣ್ಣಿ ಎಂದು ಕರೆಯುವರು ಇನ್ನು ಕೆಲವೆಡೆಗಳಲ್ಲಿ 15 ದಿವಸಗಳ ನಂತರ ಅಮವಾಸ್ಯೆಯೆಂದು ಆಚರಿಸುವರು ಅದನ್ನು ಹ್ವಾಳ ಎನ್ನುತ್ತಾರೆ.

ಬೀದರನ ಹುಮನಾಬಾದ (ಹುಡುಗಿ) ತಾಲ್ಲೂಕು ಬೀದರ ಕಡೆ ಸಂಪೂರ್ಣ ಕೃಷಿಕರು ಕಾರಹುಣ್ಣಿ ಆಚರಿಸಿದರೆ ಬಸವಕಲ್ಯಾಣ, ಭಾಲ್ಕಿ, ಔರಾದ ತಾಲ್ಲೂಕುಗಳ ಕೆಲ ಕೃಷಿಕರು ಈ ಹುಣ್ಣಿಯನ್ನು ಆಚರಿಸುತ್ತಾರೆ. ಆದರೆ ಮಹಾರಾಷ್ಟ್ರ ಪ್ರಭಾವ ಇರುವ ಈ 2 ತಾಲ್ಲೂಕುಗಳಲ್ಲಿನ ಹೆಚ್ಚು ಕೃಷಿಕರು ಅಮವಾಸ್ಯೆಯೆಂದು ಹ್ವಾಳ ಆಚರಿಸುತ್ತಾರೆ. ಆದರೆ ಇದರ ಆಚರಣೆ ಒಂದೇ ರೀತಿಯಾಗಿ ನಡೆಯುತ್ತದೆ. ಮತ್ತು ಇದರ ಹಿಂದಿನ ಆಶಯವು ಏಕರೀತಿಯಾಗಿಯೇ ಹೊಂದಿವೆ.

1.3 ಗೋದಿಯೇರಿಸುವುದ ಹುಣ್ಣಿಮೆ :–

ನಂಬಿಕೆ :–

ಜನಪದರು ಯಾವುದೇ ಅಂಶವನ್ನು ದೈವದ ಪರಿಕಲ್ಪನೆಯಲ್ಲಿಯೇ ಬಳಸಿಕೊಳ್ಳುತ್ತಾರೆ. ಅವರ ಆಹಾರ, ಸಂತಾನ, ಜೀವನ, ಹಣ ಎಲ್ಲ ದೇವರ ಕೃಪಿಯಿಂದ ದೊರೆತದ್ದು ಮತ್ತು ಹಿರಿಯರಿಗೆ ಮಾಡಿದ ಸೇವೆಯಿಂದ ಲಭಿಸುವುದೆಂದು ಭಾವಿಸಿದ ಇವರು ಖರೀಫ ಬೆಳೆ ಚೆನ್ನಾಗಿ ಬರುತ್ತದೆ. ಆಗ ಅದನ್ನು ತಮ್ಮ ಪ್ರಯತ್ನದಿಂದ ಬಂದ ಪ್ರತಿಫಲವೆನ್ನದೇ ಅದು ಸಹ ದೇವರ ಮತ್ತು ಹಿರಿಯರ ಆಶೀರ್ವಾದದ ಫಲವೆಂದು ತಿಳಿದು ಮೊದಲು ಬೆಳೆಯನ್ನು ಅವರಿಗೆ ಅರ್ಪಿಸುವ ಕಾರಣಕ್ಕಾಗಿ ಈ ಗೋಧಿಯೆರಿಸುವ ಹುಣ್ಣಿಮೆಯೆಂದು ಆಚರಿಸಲು ರೂಢಿಸಿಕೊಂಡರು.

ಈ ದಿನ ಖರೀಫ ಬೆಳೆಗಳಾದ ಜೋಳ, ಕಡಲೆ, ಕುಸುಬಿ, ಗೋಧಿ, ಚೆನ್ನಗಿಗಳ ಬೆಳೆಯ ಧಂಟುಗಳು ಬಾಗಿಲಿಗೆ ತೋರಣವಾಗಿ ಕಟ್ಟಿ ಸತ್ತ ಮನೆಯ ಹಿರಿಯರಿಗೆ ಶಾಂತಿ ಮಾಡಲು ಅವರ ಸಮಾಧಿಗೆ ಪೂಜೆ ಸಲ್ಲಿಸಿ ಅವರ ಹೆಸರಿನಲ್ಲಿ ಮುತ್ತೈದೆಯರಿಗೆ ಊಟ ಹಾಕಿ ಬಾಗಿನ ನೀಡಿ ಅವರ ಆಶೀರ್ವಾದ ಪಡೆಯಬೇಕೆಂದು ಇದನ್ನು ಮಾಡುತ್ತಾರೆ.

ಆಚರಣೆ :–

ಜನಪದರಲ್ಲಿ ಹಿರಿಯರ ಹಬ್ಬವೆಂದೇ ನಡೆಸಿಕೊಂಡು ಬಂದಿರುವ ಗೋಧಿ ಎರಿಸುವ ಹುಣ್ಣಿಮೆಯನ್ನು ಸಂಪ್ರದಾಯ ಬದ್ಧವಾಗಿ ಹಾಗೂ ಶಾಸ್ತ್ರೋತ್ತವಾಗಿ ಆಚರಿಸುತ್ತಾರೆ. ಮನೆಯನ್ನೆಲ್ಲ ಶುಭಗೊಳಿಸಿ ಮನೆ ಬಾಗಿಲಿಗೆ ಮಾವಿನ ತೋರಣದ ಬಾಗಿಲಿಗೆ ಪೂಜೆ ಅಂಗಳದಲ್ಲಿ ರಂಗೋಲಿಗಳ ವಿಜೃಂಭಿಸುತ್ತವೆ. ಇದರ ಹಿನ್ನಲೆಯಾಗಿ ಅವರಲ್ಲಿ ಬೆಳೆದು ನಂಬಿಕೆ ಈ ರೀತಿಯಾಗಿ ಕಾಣಬಹುದು ಹೊಲದಲ್ಲಿ ಒಂದು ಜೋಳ ಕಡಲೆ ಫಸಲು ಮನೆ ದೇವರ ಮತ್ತು ಹಿರಿಯರ ಆಶೀರ್ವಾದದಿಂದ ಒಂದದೆಂದು ತಿಳಿದು ಅದನ್ನು ತಾನು ತಿನ್ನುವ ಮೊದಲು ಗುರು ಕಾಣಿಕೆ ಎಂಬಂತೆ ಅವರಿಗೆ ಅರ್ಪಿಸುವುದು ಅದು ಯಾವು ಯಾವು ಧಾನ್ಯ ಅಂದರೆ: ಜೋಳ, ಗೋಧಿ, ಕಡಲೆ, ಕುಸಬಿ, ಅಗಸಿ, ಮಾವಿನಾ ಎಲೆ ಐದು ಮಾಡ ಬಾಕಿಲಕೆ ತರುಣವನ್ನು ಕಟ್ಟುಡುತ್ತಾರೆ.

ಮನೆಯಲ್ಲಿ ಹೀರಿಯರು ಸತ್ತವರಿಗೆ ಸಮಾಧಿಗಳಿಗೆ ಮುತ್ತೈದಿಯರು ಎಂದು ಅವರ ಹೆಸರ ಮೇಲೆ ಉಟಕ್ಕೆ ಮುತ್ತೈದಿಯರನ್ನು ಕರೆಯುತ್ತಾರೆ. ಅವರಿಗೆ ಹೊಸ ಬಟ್ಟೆ, ಹೂವಾಗಳನ್ನು ಒಳಗೊಂಡ ಬಾಗಿನವನ್ನು ನೀಡಿ ಅವರ ಪಾದಕ್ಕೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಅವರು ವೇದು ದೀಪವನ್ನು ಹಚ್ಚುತ್ತಾರೆ. ನಂತರ ಮನೆಯವರೆಲ್ಲಾ ಸೇರಿ ಊಟವನ್ನು ಮಾಡುತ್ತಾರೆ

ಇದು ಗೋಧಿಯೇರಿಸುವುದ ಹುಣ್ಣಿಮೆ ಎಂದು ಕರೆಯುತ್ತಾರೆ.

1.4 ದಸರಾ ಹಬ್ಬ ಅಮಾವಾಸ್ಯೆ :-

ನಂಬಿಕೆ :-

ದಸರಾ ಅಂದಿನಿಂದ ಇಂದಿನವರೆಗೂ ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಆದರೆ ಸಾಮಾನ್ಯ ಜನರು ಆಚರಿಸುವ ದಸರಾಗೂ ಕೃಷಿಕರು ಆಚರಿಸುವ ದಸರಾಗೂ ಅಜಗಜಾಂತರ ವ್ಯತ್ಯಾಸವುಂಟು, ಸಾಮಾನ್ಯ ಜನರು ದಸರಾ ದಿವಸಗಳಲ್ಲಿ ಪಾಂಡವರ ಮತ್ತು ಇತರ ಮೂರ್ತಿಗಳನ್ನು ಕೂಡಿಸಿ ಅಲಂಕರಿಸಿ ಪೂಜಿಸುತ್ತಾರೆ. ಕೃಷಿ ಇಲ್ಲೆ ಏನೇ ನಡೆದರು ತನ್ನ ಎತ್ತು ಉಳುವ ಕಾರ್ಯವನ್ನು ಬಿಡಲಾರ ಎಂಬ ಸತ್ಯಾಂಶದಂತೆ ಮುಂದಿನ ಖರೀಫ ಬೆಳೆಗಳ ಬಿತ್ತಣಿಕೆ ಪ್ರಾರಂಭವಾಗುವ ದಿನಗಳಲಿ ಬರುವ ದಸರಾಕ್ಕೆ ಹೊಲದಿಂದ ಫಲವತ್ತಾದ ಮಣ್ಣು ತಂದು ಅದರಲ್ಲಿ ಖರೀಫ ಬೆಳೆಗಳಾದ ಜೋಳ, ಕಡಲೆ, ಗೋಧಿ, ಚನಗಿ, ಒಟಾಣಿ, ಕಳವೆ ಮುಂತಾದ 9 ಧಾನ್ಯಗಳನ್ನು ಮಿಶ್ರಣ ಮಾಡಿ ಅದರಲ್ಲಿ ಹಾಕಿ ಜಗಲಿ ಮುಂದೆ ದಿನ ಪೂಜಿಸಿ ನೀರೆರೆದು ಪೋಷಿಸುತ್ತಾರೆ. ಅದರಿಂದ ಹೊಲಗಳಲ್ಲಿ ಬೆಳೆಗಳ ಬಿತ್ತುವಿಕೆ ಪ್ರಾರಂಭವಾಗುತ್ತದೆ. ಅಂದರೆ ಮೊದಲು ಬೆಳೆಯನ್ನು ದೇವರ ಸನ್ನಿಧಿಯಲ್ಲಿ ಹಾಕಿ ಹೊಲದಲ್ಲಿ ಬಿತ್ತಿ ಅದರ ಪ್ರತಿಫಲ ಹೆಚ್ಚು ಪಡೆಯುವ ನಂಬಿಕೆ ಇಲ್ಲಿಯದಾಗಿರುತ್ತದೆ.

ಆಚರಣೆ :-

ದಸರಾ ಕೌರವರು ಮತ್ತು ಪಾಂಡವರು ಇಂಥವನ್ನು ಮಾಡಿ ಪಾಂಡವರು ವರ್ಷ ವನವಾಸಕ್ಕೆ ಹೋಗಿದರು ಅಪ್ಪಟೆ ಬನ್ನಿ ಎಂಬ ಗೀಡದಲ್ಲಿ ಅವರ ಬಿಲ್ಲು ಬಾಣವನ್ನು ಬಚ್ಚಿಟ್ಟಿದರು ಹದಿನಾಲ್ಕು ವರ್ಷ ವನವಾಸ ಮುಗಿಸಿ ಹಿಂತ್ತಿರುಗಿ ಬಂದಿದರು ಪಾಂಡವರು ಆ ಗಿಡ್ಡದಲ್ಲಿ ಇದ್ದ ಬಿಲ್ಲು ಬಾಣವನ್ನು ತೆಗೆದು ಕೊಂಡು ಮನೆಗೆ ಹೋದರು ಆ ದಿನ್ನದಂದು ದಸರಾ ಎಂದು ಆಚರಣೆ ಮಾಡುತ್ತಾರೆ.

ಅಮವಾಸ್ಯೆ ಮರುದಿನ ಸಸಿ ಹಾಕಿ ನವರಾತ್ರಿಗಳವರೆಗೆ ಹಾಕುತ್ತಾರೆ. ಕೊನೆಯ ದಿನ ಹತ್ತನೆಯ ದಿನವೇ ವಿಜಯ ದಶಮಿ ದಸರಾ ಹಬ್ಬವನ್ನು ಹತ್ತು ಹನ್ನೊಂದು ದಿನಗಳ ಕಾಲ ಆಚರಿಸುತ್ತಾರೆ. ಮೊದಲ ದಿನ ಅಮವಾಸ್ಯೆ ಮಾಡುತ್ತಾರೆ. ಮತ್ತೆ ಘಟಿ ಎಂದು ದೇವಿಯ ಹೆಸರಿನಲ್ಲಿ ಕೂಡಿಸುತ್ತಾರೆ. ಯಾರ ಮನೆಯಲ್ಲಿ ಹತ್ತು ದಿನ್ನದ ಘಟ್ಟ ಇರುತ್ತವೆ. ಯಾರ ಮನೆಯಲ್ಲಿ ಒಂಭತ್ತು ದಿನದು ಇರುತ್ತವೆ. ಯಾರು ಮನೆಯಲ್ಲಿ ಐದು ದಿನದಂದು ಘಟಿ ಇರುತ್ತವೆ.

ಅದು ಹೇಗೆ ಕೂಡಿಸುತ್ತಾರೆ. ಎಂದರೆ ಕೂಡಿಸುವ ದಿನ ಮನೆಯನ್ನು ತೊಳೆದು ರಂಗೋಲಿಯನ್ನು ಹಾಕಿ ಸಿಹಿ ತಿಂಡಿ ಎನ್ನುಮಾಡಿ ಹೊಲದಿಂದ ಫಲವತ್ತಾದ ಜೋಳ, ಕಡಲೆ, ಚಣಗಿ, ಅವರಿ, ನೇಕಿ ಹಾಕಿದ್ದಾರೆ. ಮಣ್ಣನು ಎರಡು ಜೋಳದ ತೇನೆಯನ್ನು ಮಾವಿನ ಎಲ್ಲೆಯನ್ನು ತರುತ್ತಾರೆ. ಮಾವಿನ ಎಲೆಗಳಿಂದ ತೋರಣ ಕಟ್ಟುತ್ತಾರೆ. ಕುಂಬಾರನ ಮನೆಯಿಂದ ಎರಡು ಕುಳ್ಳಿಗಳನು ತಂದು ಬಂದರಲ್ಲಿ ನೀರು ಮತ್ತೊಂದರಲ್ಲಿ ಎಣ್ಣಿ ಹಾಕಿ ಫಲವತ್ತಾದ ಮಣ್ಣಿನ ತಂದು ದೇವರ ಹತ್ತಿರ ಸ್ವಲ್ಪ ಜಾಗದಲ್ಲಿ ಮುತ್ತಿನ ಎಲ್ಲಿ ಇಕ್ಕಿ ಮಣ್ಣನ್ನು ಹಾಕಿ ಅದರ ಮೇಲೆ ಕುಳ್ಳಿಯನ್ನು ಇರುತ್ತಾರೆ. ಕುಳ್ಳಿಗೆ ಎಲ್ಲೆಗಳನ್ನು ಹಚ್ಚುತ್ತಾರೆ. ತೆನ್ನೆಯನ್ನು ಇಕುತ್ತಾರೆ. ಕಳ್ಳಸ ಮಾಡಿ, ಆ ಮಣ್ಣಿನಲ್ಲಿ ಮದಿನಾ ಎಂದು ಹಾಕುತ್ತಾರೆ.

ಮದಿನಾ ಅಂದರೆ ಐದು ತರದ ಧಾನ್ಯವನ್ನು ಹಾಕುತ್ತಾರೆ. ಆ ಧಾನ್ಯದ ಒಂಭತ್ತು ದಿನದವರೆಗೆ ಮಳಿಕೆಯನ್ನು ಆಗುತ್ತವೆ. ಒಂಭತ್ತು ದಿನದವರೆಗೆ ನಂದಿ ದೀಪವನ್ನು ಎರಿಸುತ್ತಾರೆ. ಎಂಟನೆ ದಿವಸದ ಉಪ್ಪವಾಸ ಮಾಡುತ್ತಾರೆ. ಆದಿವಸ ದೇವರಿಗೆ ಕೂಡಬಾಳ್ಳಿ, ಕಡಕುಣಿ, ಎಂದು ಮಾಡಿ ದೇವರ ಮೇಲೆ ಕಟ್ಟುತ್ತಾರೆ. ಅದು ಗೋಧಿ ಹಿಟ್ಟಿನಿಂದ ಮಾಡುತ್ತಾರೆ. ಆ ಹಿಟ್ಟಿನಿಂದ ದೇವರಿಗೆ ಬಳ್ಳಿಗಳು, ಕಾಲ್ಲುಂಗರು,

ಕೊಂಕಮ, ಡಬ್ಬಿ ಮೇರಿ, ಕಡಕುಣಿ, ಮಾಡಿ ಕಟ್ಟುತ್ತಾರೆ. ಖೊಬರೆ ಬಟಲು, ಕಟ್ಟಿ ಎರಡು ಕೊಬ್ಬಸದ ಮಳ್ಳವನ್ನು ಅದರ ಮೇಲೆ ಮುಟ್ಟುತ್ತಾರೆ. ದೇವಿಯ ಮುಂದೆ ಹಣ್ಣುಗಳು ತೇಂಗಿನಕಾಯಿ ಇಕ್ಕುತ್ತಾರೆ. ಆ ಮೇಲೆ ಒಂಭತ್ತನೆಯ ದಿನಕ್ಕೆ ದೇವಿಯ ಹಡ್ಡಗಿ ಎಂದು ತುಂಬುತ್ತಾರೆ.

ಅದು ಹೇಗೆ ಎಂದರೆ ರೈತರು ಬೇಳಿಗೆ ಎಂದು ಮನೆಯನ್ನು ತೊಳೆದು ರಂಗೋಲಿಯನ್ನು ಹಾಕಿ ಅಡಿಗೆ ಎನ್ನು ಮಾಡಿ ಅದು ಯಾವ ಅಡ್ಡಿಗೆ ಎಂದರೆ ಅಂಬಲ್ಲಿ ಖಿಚ್ಚಡಿ, ಕಳವಿ, ಅನ್ನ, ನವಣಿ ಅನ್ನ, ದಿವಟಿ, ಉದ್ದಿನ ಬ್ಯಾಳಿ, ತೊಗರೆ ಸಪ್ಪನ ಬಾಳಿ, ಇಷ್ಟಲ್ಲವನ್ನು ಮಾಡಿ ಮನೆಯ ಮಾದಿಗನ ಹೆಂಡತಿಗೆ ಕರೆದುಕೊಂಡು ಬರುದ್ದಾರೆ. ಆ ದೇವಿಯ ಒಟ್ಟುಗೆ ಪೂಜಿಸಿ ಆ ಅಬ್ಬಲ್ಲಿ ಕಡಗೀಗೆ ಪೂಜೆಯನ್ನು ಮಾಡಿದ್ದಾರೆ. ಮನೆಯಲ್ಲಿ ಇದ ದೇವಿಗೆ ಪೂಜಿಸಿ ನೈವ್ಯದೆಯನ್ನು ತೋರಿ ದೇವಿಗೆ ಎಬ್ಬಿಸಿ ಇಕುತ್ತಾರೆ. ಮಾದಿಗನಾ ಹೆಂಡತಿಗೆ ಬೇವಿನಾ ಎಲೆಯನ್ನು ತೆಗೆದುಕೊಂಡು ಮನೆಯಲ್ಲಿ ಇದ್ದು ಜನರಿಗೆ ಪೂಜೆಯನ್ನು ಮಾಡದ ಮೇಲೆ ಮಾದಿಗನಾ ಹೆಂಡತಿ ಎಲ್ಲರಿಗೆ ಮೇಲೆದ ಕೆಳಗೆ ಬೇವಿನಾ ಎಲೆಯದು ಕಳಗ ಬೆಲ್ಲೆ ಇಳಿಸುತ್ತಾರೆ. ಆ ಮಾದಿಗನಾ ಹೆಂಡತಿಗೆ ಉಟಕ್ಕೆ ಕೊಡುತ್ತಾರೆ.

ಈಗ ಹತ್ತನೆಯ ದೀವಸ ವಿಜಯ ದಶಮಿ ಎಂದು ಮಾಡುತ್ತಾರೆ. ಅದು ಹೇಗೆ ಮನೆಯ ಎಲ್ಲಾ ಜನರು ಹೊಸ ಒಟ್ಟು ಹಸಿ ತಿಂಡಿ ಮಾಡಿ ಹೊಸ ಬಟ್ಟೆಯನ್ನು ಹಾಕಿಕೊಂಡು ಸಿಹಿ ತಿಂಡಿಯನ್ನು ಊಟ್ಟಮಾಡುತ್ತಾರೆ.

ಸಂಜೆಯ ಸಮಯದಲ್ಲಿ ಊರಿನ ಎಲ್ಲಾ ಗಂಡಸರು ಮಕ್ಕಳು ಸಿಲ್ಲಂಗ ಗೌಡರು ಮನೆಯದು ಬಾಜಿ ಅಪ್ಪಟಿ ಬನ್ನಿ, ಗೀಡ ಇದ ಜಾಗದಲ್ಲಿ ಹೋಗುತ್ತಾರೆ. ಆ ಊರು ಗೌಡರ ಮನೆ ಇದ್ದ ಬಾಜಿ ಮತ್ತು ಒಂದು ಬಟ್ಟಿನಲ್ಲಿ ಜೋಳ ತುಂಬಿ ಕಳ್ಳಸವನ್ನು

ಮಾಡಿ ಬಂದು ಬಟ್ಟಲಲ್ಲಿ ಸಕ್ಕರೆ ಒಂದು ಬಟ್ಟುಲಲ್ಲಿ ಅಕ್ಕಿ ಪೂಜಿಸುವ ಸಾಮಾನ್ಯ ತೆಗೆದುಕೊಂಡು ಹೋಗುತ್ತಾರೆ.

ಅಲ್ಲಿ ಬಳ್ಳಿ ಹೋಗಿ ಗಿಡಕ್ಕೆ ಪೂಜಿಸಿ ಆರತಿಯನ್ನು ಅದ್ದು ತೆಂಗನ್ನು ಒಡೆದು ಆ ಗೀಡದ ಎಲ್ಲೆಯನ್ನು ಮನೆಗೆ ತರುತ್ತಾರೆ.

ಬರು ಬರುತ್ತಾ ಮೊದಲು ಹನುಮನ ಅಥವಾ ಭವಾನಿ ಮಂದಿರಕ್ಕೆ ಹೋಗುತ್ತಾರೆ. ಆ ಗಿಡದ ಎಲ್ಲೆಯನ್ನು ಬಂಗಾಳ ಮತ್ತು ಬೆಳ್ಳಿ ಎಂದು ದೇವರ ಮುಂದೆ ಇಕ್ಕುತ್ತಾರೆ. ಬಟ್ಟರು ಬಂಗಾರ ಮತ್ತು ಬೆಳ್ಳಿ ತೆಗೆದುಕೊಂಡು ನಮಸ್ಕರಿಸುತ್ತಾರೆ. ಮತ್ತು ಗೌಡರು ಮನೆಗೆ ಹೋಗುತ್ತಾರೆ ಗೌಡರು ಮನೆಯ ಗೋಧಿಯ ಹಿಟ್ಟಿನಿಂದ ಎರಡು ಕುಳ್ಳಿನಿಂದ ದೀಪವನ್ನು ಹಚ್ಚುತ್ತಾರೆ ಮತ್ತು ಮಡಕಿ ಮಾಡುತ್ತಾರೆ. ಹೀಗೆ ಪೂಜೆಮಾಡಿ ಅದನ್ನು ಸಿಲ್ಲಂಗ ಮಾಡಿ ಬರುವವರು ನೋಡಬಾರದೆಂದು ಆ ದೀಪ ಬೆಳಗೆ ಒಯ್ಯುತ್ತಾರೆ. ಗೌಡರು ಮನೆಯ ಮಕ್ಕಳು ಆರತಿಯನ್ನು ಮಾಡುತ್ತಾಳೆ. ಆ ಗಂಡು ಮಗನಿಗೆ ಮೊದಲು ಕಣ್ಣಿಗೆ ನೀರು ಹೆಚ್ಚುತ್ತಾರೆ. ಆ ಮೇಲೆ ಕುಂಕಮ್ಮ ಹಚ್ಚುತ್ತಾರೆ. ಆ ಮೇಲೆ ಆರತಿ ಮಾಡುತ್ತಾರೆ. ಆ ಮಗಳಿಗೆ ಆರತಿಯಲ್ಲಿ ಬಂಗಾರ ಮತ್ತು ಬೆಳ್ಳಿ ಕೊಡುತ್ತಾನೆ. ಎಲ್ಲರು ಮೊದಲು ದೇವರು ಮನೆಯಲ್ಲಿ ಹೋಗುತ್ತಾರೆ.

ದೇವರ ಮುಂದೆ ಬಂಗಾರ ಮತ್ತು ಬೆಳ್ಳಿ ಇಕ್ಕುತ್ತಾರೆ. ಮನೆಯಲ್ಲಿ ಇದ್ದ ಎಲ್ಲರಿಗೆ ಬಂಗಾರ ಮತ್ತು ಬೆಳ್ಳಿ ಕೊಡುತ್ತಾರೆ. ಹೀಗೆ ದಸರಾ ಹಬ್ಬ ಮಾಡುತ್ತಾರೆ.

1.5 ಎಳ್ಳೆಮಸಿ ಅಮವಾಸ್ಯೆ :–

ನಂಬಿಕೆ :–

ವರ್ಷದ ಜನವರಿ ಅಥವಾ ಡಿಸೆಂಬರ ತಿಂಗಳಲ್ಲಿ ಉತ್ತರ ಕರ್ನಾಟಕದಲ್ಲಿ ಆಚರಿಸಲ್ಪಡುವ ಸಂಭ್ರಮದ ಆಚರಣೆ ಎಳ್ಳಮಾವಾಸ್ಯೆ ಈ ತಿಂಗಳುಗಳು ಮುಂಗಾರಿಗೆ

ಬೆಳೆಗಳ ಕಟಾವು ಮತ್ತು ಹಿಂಗಾರು ಬೆಳೆಗಳ ಬಿತ್ತನೆಗಳೆರಡು ಎಕಕಾಲಕ್ಕೆ ನಡೆಯುವ ಸಂಭ್ರಮದ ಮತ್ತು ಸಂಧಿಗ್ದದ ಸಮಯ. ಒಂದೆಡೆ ಮುಂಗಾರಿನ ಪ್ರಮುಖ ಬೆಳೆಯಾದ ಜೋಳದ ಶೇಂಗಾ, ಕಡಲಿ, ಸೂರ್ಯಕಾಂತಿ, ಬೇಸಿಗೆ ಸಜ್ಜೆ ಮುಂತಾದ ಬೆಳೆಗಳ ಬಿತ್ತನೆ ನಡೆಯುತ್ತಿರುತ್ತದೆ. ಇದೇ ಸಂದರ್ಭದಲ್ಲಿ ಹಾಜರಾಗುವುದು ಎಳ್ಳಮವಾಸೆಯ ಸಡಗರ.

ಬೆಳೆಗಳಿಗೆ ಅಂಟುವ ಪೀಡೆ ಪರಿಹಾರಾರ್ಥವಾಗಿ ರೋಗ ನಿವಾರಣಾರ್ಥವಾಗಿ ಚರಗೆ ಚಲ್ಲುವ ಆಚರಣೆ ವ್ಯವಸಾಯಗಾರರಲ್ಲಿ ದಟ್ಟವಾಗಿ ನೆಲೆಯಾರಿದೆ.

ಎಳ್ಳಮಸಿ ಆಚರಣೆ :-

ಎಳ್ಳಮಾಸೆ ಏಕೆ ಮಾಡುತ್ತಾರೆ ಅಂದರೆ ಇದು ಹೊಲದ ಲಕ್ಷ್ಮೀಯ ಬಂಕ್ಕಿ ಊಟ ಎಂದು ಹೇಳುತ್ತಾರೆ.

ಹೊಲದಲ್ಲಿ ಎತ್ತ ನೋಡಿದರು ಹಚ್ಚು ಹಸಿರು ಸಮೃದ್ಧಿ ತುಂಬಿ ತುಳ್ಳುಕುತ್ತದೆ. ಹಬ್ಬ ಹಸುರಾಗಿ ಕಾಣುತ್ತದೆ. ಜೋಳೆ, ಕಡಲೆ, ತೋಗರಿ, ಚೆಣ್ಣಿಗಿ, ಒಟಾಣಿ, ಕಬ್ಬು, ಗೋಧಿ, ತರಕಾರಿ ಎಲ್ಲಾ ಬೇಳಗಳಿಂದ ಹಚ್ಚ ಹಸುರಾಗಿ ಕಾಣುತ್ತದೆ. ರೈತರು ಆನಂದದಿಂದ ಅಮವಾಸ್ಯಯನ್ನು ಆಚರಿಸುತ್ತಾರೆ. ಆಮವಾಸ್ಯ ಲಕ್ಷ್ಮೀ ಪೂಜೆಯನ್ನು ನಂಬಿಕೆಯಲ್ಲಿ ಆಚರಿಸುತ್ತಾರೆ.

ಅಮವಾಸ್ಯೆಯ ಹಿಂದಿನ ದಿನ ಎಲ್ಲಾ ತರದ ತರಕಾರಿಯನ್ನು ತಂದು ಅಡಗೆಯನ್ನು ಮಾಡುತ್ತಾರೆ ರೈತರು ಈ ದಿನಕ್ಕೆ ಕಾಯಿಪಲ್ಯಾ ಎಂದು ಕರೆಯುತ್ತಾರೆ. ರಾತ್ರಿಯ ಹೋತ್ತಿನಲ್ಲಿ ಅಡಿಗೆ ಮಾಡುತ್ತಾರೆ. ಅದು ಯಾವುದು ಅಂದರೆ ಭಜಿಪಲ್ಯಾ, ಅಂಬಲ್ಲಿ, ದಿವಡಿ, ದವಣೆಯ ಅನ್ನ, ಜೋಳದ ಅನ್ನ, ಅಕ್ಕಿಯ ಅನ್ನ, ಕಾನೂಲಿ, ಅಕ್ಕಿಯ ಹುಗ್ಗಿ, ಜೋಳದ ರೊಟ್ಟು, ಝುಜಿಯ, ರೊಟ್ಟಿ ಅದಕ್ಕೆ ಎಳ್ಳ ಹಚ್ಚಿ ಮಾಡುತ್ತಾರೆ. ತುಂಬ ಬದನೆಕಾಯಿಯ ಪಲ್ಯಾ ಮಾಡುತ್ತಾರೆ. ಲಕ್ಷ್ಮೀಯ ಎದುರು ದೀಪಾ

ಹಚ್ಚುವದಕ್ಕೆ ಜೋಳ್ಳ ಹಿಟ್ಟಿನ ದೀಪಗಳನ್ನು ಮಾಡಿಕೊಂಡು ಹೋಗುತ್ತಾರೆ. ಅಮವಾಸ್ಯೆಯ ದಿವಸ ನಸಕಿನ (5) ಗಂಟೆಯ ಸಮಯಕ್ಕೆ ಮನೆಯ ಹಿರಿಯನಾದ ರೈತ ಸ್ನಾನವನ್ನು ಮಾಡಿ ಬಂದು ಬಿದಿಗೆ ಎರಡು ಮುಚಳ್ಳ ಮತ್ತು ಐದು ಜೋಳದ ಸೂಡ್ಡನು ತೆಗೆದುಕೊಂಡು ಹೊಲಕ್ಕೆ ಹೋಗುತ್ತಾನೆ.

ಹೋಗಿ ಆ ಸೂಡುಗಳಿಂದ ಗೂಡಸಿಯನ್ನು ಹಾಕುತ್ತಾರೆ. ಅದಕ್ಕೆ ಶಾಲ ಅನ್ನು ಕಟ್ಟುತ್ತಾರೆ. ಆ ಗೂಡಸಿ ಯಾವ ವಾರದ ದಿವಸ ಯಾವ ನೋಡಿ ಗೂಡಸಿಯನು ಹಾಕುತ್ತಾರೆ. ಆ ಗುಡಸಿಗೆ ಚೆಂಡ ಹೂವಿನ ಗಿಡ ಕಟ್ಟುತ್ತಾರೆ. ಕಬ್ಬು ಐದು ಮಾಡಿ ಕಟ್ಟುತ್ತಾರೆ. ಆ ಗೂಡಸಿಯಲ್ಲಿ ಐದು ಮಣ್ಣಿನ ಹೆಂಟ್ಟೆಯನ್ನು ಈ ರೈತರು ಇಂಥ ಮುಢನಂಬಿಕೆ ಮಾಡಿ ದೇವರ ಎಂದು ಬಯಸುತ್ತಾರೆ. ಆ ರೈತನ ಹೆಂಡತಿ ಮನೆಯಲ್ಲಿ ಅಬಲ್ಲಿಯನು ಗಡಿಗೀಯಲ್ಲಿ ತುಂಬುತ್ತಾರೆ. ಆ ಎರಡು ಒಂದೆ ಜಗದಲ್ಲಿ ಇಕ್ಕುತ್ತಾರೆ. ಅದರ ಕೆಳಗೆ ಅಕ್ಕಿಯನ್ನು ಆ ಗಡಗಿಗೆ ಎರಡು ಗೊಂಬೆಯನ್ನು ಇಳಿಸುತ್ತಾರೆ. ವಿಭೂತಿಯಿಂದ ಇಳೀಸುತ್ತಾರೆ. ಅದಕ್ಕೆ ಪೂಜಿಯನ್ನು ಮಾಡುತ್ತಾರೆ. ಹುಗಿಯ ಡಬ್ಬಿಗೆ ಪೂಜೆಯನ್ನು ಮಾಡುತ್ತಾರೆ. ಆ ಅಬಲ್ಲಿ ಗದಗಿಗೆ ಆ ರೈತನ ಹೆಂಡತಿ ಕೊರಳಲ್ಲಿನ ಮಂಗಳ ಸೂತ್ರವನ್ನು ಹಾಕುತ್ತಾರೆ. ಆ ರೈತ ಆ ಅಂಬಲ್ಲಿಯ ಕೊಡವನ್ನು ತೆಗೆದುಕೊಂಡು ಹೋಗುವಾಗ ಮಾತನ್ನು ಆಡುವದು ಇಲ್ಲಾ ಆ ರೈತ ಎಲ್ಲಾ ಮಾಡಿಟ ಅಡಿಗೆಯನ್ನು ಒಂದು ಒಂದಾಗ್ಗಿ ಹೊಲಕ್ಕೆ ಒಯ್ಯುತ್ತಾನೆ. ಆ ರೈತನ ಹೆಂಡತಿ ಮನೆಯ ಪೂಜೆಯನ್ನು ಮಾಡಿ ನೈವ್ಯದೇವನ್ನು ದೇವರಿಗೆ ತೋರಿ ಹೊಲಕ್ಕೆ ಹೋಗುತ್ತಾಳೆ.

ಹೊಲದಲ್ಲಿ ಹೋಗಿ ಅವಳು ಆ ಗೂಡಸಿಯಲ್ಲಿ ಆ ಇಟ್ಟಿದ ಮಣ್ಣಿನ ಹೆಂಟ್ಟೆಗಳಿಗೆ ದೇವರು ಪಾಂಡವರು ಎಂದು ಪೂಜಿಸುತ್ತಾಳೆ. ಮತ್ತೆ ಹಿಟ್ಟಿನ ಕುಳಿಗಳ್ಳಲ್ಲಿ ದೀಪವನ್ನು ಹಚ್ಚುತ್ತಾರೆ. ಎರಡು ಕೂಬಸದ ಮಳ್ಳವನ್ನು ಇರುತ್ತಾರೆ. ಖೊಬರೆ ಬಟ್ಟಿಲ್ಲವನ್ನು

ಇಕ್ಕುತ್ತಾರೆ, ಸ್ವಲ್ಪ ಅಕ್ಕಿಯನ್ನು ಇಕ್ಕುತ್ತರೆ, ಬಾರೆತಾಯಿ ಹಣ್ಣುಗಳು ಇಕ್ಕುತ್ತಾರೆ, ಜಾಪ್ಪಳ ಹಣ್ಣು (5) ಐದು ಇಕ್ಕುತ್ತಾರೆ, ತೆಂಗು ಇಡುತ್ತಾರೆ.

ಎರಡು ಮಚ್ಚಳದಲ್ಲಿ ಬದರಲ್ಲಿ ಅಬ್ಬಲ್ಲಿ ಇನ್ನೊಂದರಲ್ಲಿ ನೀರು ಜೋಳದ ಬಾನ ಅನ್ನವನ್ನು ಅದರಲ್ಲಿ ಜೋಳದ ಒಂದು ಒಂದು ಎಲ್ಲೆಯನ್ನು ಇಕ್ಕುತ್ತಾರೆ. ಮಾಡಿದ ಅಡಿಗೆಯ ಮುತ್ತಿನ ಎಲೆಯನ್ನು ಇಂದ ಎರಡು ಪತ್ತರೊಳಗೆಯನ್ನು ಹೊಲದಿ ಅದರ ಮೇಲೆ ಎಲ್ಲಾ ಅಡಗೆ ಸ್ವಲ್ಪ ಇಡುತ್ತಾರೆ. ಇದು ಪೂಜಿಸುತ್ತಾರೆ. ಆ ರೈತನ ಹೆಂಡತಿ ಮಕ್ಕಳು ಅಣ್ಣತಂಗಿ ಮನೆಯಲ್ಲಿ ಇದ್ದು ಹಿರಿಯರು ಎಲ್ಲರು ಪೂಜೆಯನ್ನು ಮಾಡಿ ಆರತಿ ಪದ್ಯವನ್ನು ಹಾಡಿ ಎಲ್ಲ ದೇವರಿಗೆ ನೈವ್ಯದೇಯ ಒಯ್ಯುತ್ತಾರೆ.

ಆ ದೇವರು ಯಾವು ಎಂದರೆ ಎರಲ್ಲಿ ಇಂದು ಹನುಮಾನ ಮಂದಿರ, ಊರು ಲಕ್ಷ್ಮೀ ಮಂದಿರ, ಊರು ಹೊರಗೆ ಮರಗೆಮ್ಮಾ ಎಂಬ ದೇವತೆ ಪೂಜೆ ಮತ್ತೆ ಯಾರು ಯಾರು ಮನೆಯಲ್ಲಿ ಮನೆಯ ಲಕ್ಷ್ಮಯ ಗೂಡಿ ಇರುತ್ತದೆ. ಆ ದೇವತೆಗೆ ಮತ್ತು ಹೊಲದಲ್ಲಿ ಮನೆಯ ಹಿರಿಯರು ಸಮಾಂಧಿಗಳಿಗೆ ಮತ್ತು ಹೊಲದಲ್ಲಿ ಹಿರೂಡ್ಡ ಮತ್ತು ಪಾಂಡವರಿಗೆ ಎಲ್ಲ ದೇವರಿಗೆ ಮತ್ತು ಆ ರೈತ ಇಷ್ಟ ಎಲ್ಲಾ ಪೂಜಿಸಿ ನೈವ್ಯದೇಯನ್ನು ತೋರಿ ಮತ್ತೆ ಹೊಲದ ಗೂಡಸಿಗೆ ಹಾಗೆ ಆ ರೈತ ಎರಡು ಮಜ್ಜಳದಲ್ಲಿ ಒಂದು ಮುಚ್ಚಳದಲ್ಲಿ ನೀರು ಜೋಳ್ಳದ ಎಲೆ ಬಂಗಾರದ ಊರುರು ಹಾಕುತ್ತಾರೆ. ರೈತ ಒಬ್ಬವ ಇನ್ನೊಬ್ಬ ಮಗ ಅಥವಾ ಮತ್ತೆ ಯಾರಾದರೂ ಒಬ್ಬರಿಗೆ ತೆಗೆದುಕೊಂಡು ಈಗ ಆ ರೈತ ಮುಂದೆ ಅಬ್ಬಲಿಯ ಮುಚ್ಚಳವನ್ನು ಮುಂದೆ ಇಷ್ಟು ಮನುಷ್ಯ ನೀರಿನ ಮುಚ್ಚುಳುವನ್ನು ತೆಗೆದುಕೊಂಡು ರೈತ ಅನುತ್ತಾನೆ ಮೊದಲು ಒಲಗ್ಯಾ ಒಲಗ್ಯಾ' ಹಿಂದಿನವ ಮನುಷ್ಯ 'ಚಲಂಪೂಲಗ್ಯಾ' ಅನ್ನುತ್ತಾ ಹೋಗುತ್ತಾರೆ. ಆ ಗೂಡಸಿಯ ಸುತ್ತಲು ಐದು ಸುತ್ತು ಹಾಕುತ್ತಾರೆ. ಹಾಕಿ ಇಕುತ್ತಾರೆ. ಇಕ್ಕಿ ಆ ರೈತ ಊಟವನ್ನು ಮಾಡುತ್ತಾರೆ. ಮಾಡಿ

ಹೊಲದ ಜನರೇಲ್ಲಾರಿಗೆ ಆರೈತನ ಹೆಂಡತಿ ಊಟವನ್ನು ಬಡಿಸುತ್ತಾಳೆ. ಆನಂದದಿಂದ ಆ ದಿನ ಹಬ್ಬವನ್ನು ಆಚರಿಸುತ್ತಾರೆ.

ಆ ಊರ ಗೌಡರು ಹೊಲಕ್ಕೆ ಹೋಗುವಾಗ ಬಾಜಿಯನು ಹಚ್ಚಿಕೊಂಡು ಹೋಗುತ್ತಾರೆ. ಆ ಊರು ಗೌಡರು ಊಟಕ್ಕೆ ಹೇಳುವ ಜನರು ಯಾರು ಯಾರು ಎಂದರೆ ಅಗಸರು ಗೌಡರ ಬಟ್ಟೆಯನ್ನು ಸ್ವಚ್ಛಗೊಳಿಸುವದರಿಂದ ಅವರಿಗೆ ಹೋಳುತ್ತಾರೆ. ಗೌಡರು ಮನೆಯ ಮಾದಿಗ ಎಂದು ಇರುತ್ತಾರೆ. ಹೊಲದ ಮಾದಿಗ ಎಂದು ಇರುತ್ತಾನೆ. ಆ ಮನೆಯ ಮಾದಿಗ ಗೌಡರ ಕೆಲಸ ಎಲ್ಲ ಮಾಡುತ್ತಾರೆ. ಮತ್ತು ಆ ಗೌಡರ ಮಗಳು ಅಥವಾ ಮಗನ್ನ ಮದುವೆಗೆ ಇದರೆ ಆ ಮದಿಗ ಮಕ್ಕಳಿಗೆ ಪಾದ ರಕ್ಷೆಯನ್ನ ಕೊಡುತ್ತಾನೆ. ಆ ಗೌಡರು ಯಾವ ಯಾವ ಊರಿಗೆ ಹೋಗು ಎಂದರೆ ಹೋಗಬೇಕು. ಅವರು ಹೇಳಿದ ಕೆಲಸವನ್ನು ಮಾಡಿಕೊಂಡು ಬರುತ್ತಾನೆ. ಮತ್ತೆ ಆ ಮಾದಿಗನಾ ಹೆಂಡತ್ತಿ ದಾವನ ಹುಣ್ಣಿಗೆ ಹಡಿಗೆಯನ್ನು ತುಂಬುತ್ತಾಳೆ. ಇಷ್ಟು ಮನೆಯ ಮಾದಿಗ ಮಾಡುತ್ತಾನೆ. ಹೊಲದ ರಾಶಿ ಜೋಳದ ರಾಶಿ ತೊಗರೆ ರಾಶಿ ಹೀಗೆ ಹೊಲದಲ್ಲಿ ಇದ್ದ ಎಲ್ಲ ತರದ ರಾಶಿ ಇದ್ದರೆ ಆ ಹೊಲದ ಮಾದಿಗ ಈ ರಾತ್ರಿ ಸಮಯದಲ್ಲಿ ಹೋಗುತ್ತಾನೆ. ಬೇಕು ಹೀಗೆ ಆ ಊರು ಗೌಡರು ಇವರಿಗೆ ಇಂದು ಹಬ್ಬಗಳಿಗೆ ಊಟಕ್ಕೆ ಹೇಳುತ್ತಾರೆ. ಮತ್ತೆ ಕಂಬಾರನಿಗೆ ಹೇಳುತ್ತಾರೆ. ಕುಂಬಾರು ಗೌಡರ ಹೊಲದಲ್ಲಿ ನೇಗಿಲ್ಲ ಸಾಮಾನು ಯಾವುದೇ ಕಬ್ಬಣ ಸಾಮಾನುಗಳನ್ನು ಮಾಡಿಕೊಡುತ್ತಾನೆ. ಕುಂಬಾರನಿಗೆ, ಹೇಳುತ್ತಾನೆ. ಕುಂಬಾರನು ಗಡಿಗೆಯನ್ನು ಮಾಡುತ್ತಾನೆ. ಹಾಗೇ ಬಡಗೆನಿಗೆ ಊಟಕ್ಕೆ ಹೇಳುತ್ತಾರೆ. ಬಡಿಗೆಯನ್ನು ಯಾವುದೇ ಕಟ್ಟಿಗೆ ಕೆತ್ತನೆ ಕೆಲಸವನ್ನು ಮಾಡುತ್ತಾನೆ. ಸೈರರಿಗೆ, ಊಟಕ್ಕೆ ಹೇಳುತ್ತಾರೆ. ಅದನ್ನು ಗೌಡರ ಮನೆಗೆ ಹೂವುಗಳನ್ನು ತರುತ್ತಾನೆ. ಮತ್ತೆ ಮುಚ್ಚಕುರಿ ಎಂದು ಇರುತ್ತಾನೆ.

ಅವನು ಗೌಡರು ಯಾರಿಗೆ ಊಟಕ್ಕೆ ಹೋಳು ಎಂದು ಹೇಳಿದ್ದಾರೆ. ಮತ್ತೆ ಊರಿನಲ್ಲಿ ಇದ್ದ ಮಠದ ಮಡಪತಿಯನ್ನು ಸ್ವಾಮಿಗಳಿಗೆ ಊಟಕ್ಕೆ ಹೇಳುತ್ತಾರೆ. ಹೀಗೆ ಎಲ್ಲ ತರದ ಅಡಗೆ ಮಾಡಿ ಹೀಗೆ ಕೆಲಸದವರಿಗೆ ಊಟಕ್ಕೆ ಹೇಳಿ ಊರು ಗೌಡರು ಹೀಗೆ ಮಾಡುತ್ತಾರೆ.

ಈ ಹಬ್ಬವನ್ನು ವಿಜೃಂಭಣೆಯಿಂದ ನಗರದ ಜನರು ಹಳ್ಳಿಯ ಜನರು ಕುಡಿಕೊಂಡು ಈ ಹಬ್ಬವನ್ನು ಆಚರಿಸುತ್ತಾರೆ. ಆ ದಿವಸ ಆ ಹಳ್ಳಿಯ ಜಾತ್ರೆಯನ್ನ ಹಾಗ್ಗೆ ಕಾಣುವುದು. ಆ ದಿವಸ ಸಂಜೆ ಐದು ಘಂಟೆಗೆ ಯುವಾಗ ಮನೆಗೆ ಬರುವ ಸಮಯದಲ್ಲಿ ಆ ಇಟ್ಟ ಕಟ್ಟಗೆಯ ಬುಟ್ಟಿಯಲ್ಲಿ ಹುಗ್ಗಿ ಉಳಿದಿದ ಡಬಿಯಲ್ಲಿ ಆ ಲಕ್ಷ ಯಲ್ಲಿ ಇಟ್ಟು ಹಿಟ್ಟಿನ ಕೊಳ್ಳಿಯನ್ನು ಬಂದು ತೆಗೆದುಕೊಂಡು ಆ ಡಬ್ಬಿಯಲ್ಲಿ ದೀಪಾ ಹಚ್ಚುತ್ತಾರೆ.

ಆ ಬುಟ್ಟಿಗೆ ಐದು ಜೋಳದ ಧಂಟ್ಟನು ಹಚ್ಚುತ್ತಾರೆ. ಕೂಸಬ್ಬಿ ಧಂಟ್ಟನ್ನು ನೇಕ್ಕಿಯ ಚಣಗೀಯ ಧಂಟ್ಟನ್ನು ಕಡಲಿಯ ಐದು ಮಾಡಿ ಕಟ್ಟುತ್ತಾರೆ. ಅದಕ್ಕೆ ಗೊಡಸಿಯಲ್ಲಿ ಇಟ್ಟು ಕೂಬಸದ ಒಂದು ಮಳ್ಳಮನು ಕಟ್ಟುತ್ತಾರೆ. ಮತ್ತೆ ಆ ಗೂಡಸಿಯ ಮುಂದೆ ಸ್ವಲ್ಪ ನಾರಿಯನು ಅಗೇದು ಸಗಣೀಯ ಕೊಳನ್ನು ಹಾಕ್ಕಿ ಅದರ ಚೀಕಿ ಇಟ್ಟು ಒಂದು ತುಂಬಿಗೆಯಲ್ಲಿ ಹಸಿ ಹಾಲು ಮತ್ತು ಸ್ವಲ್ಪ ಅಕ್ಕಿಯನ್ನು ಹಾಕಿ ಆ ಬೆಂಕಿಯ ಮೇಲೆ ಇಡುತ್ತಾರೆ. ಆ ರೈತರು ಅದು ಏಕೆ ಇಕುತ್ತಾನೆ. ಎಂದರೆ ಆ ಹಾಲು ಪೂರ್ವದ ಕಡೆ ಪಶ್ಚಿಮದ ಕಡಾ ಹೋದರೆ ರೈತನು ಹೊಲದಲ್ಲಿ ಬೇಳೆಯನ್ನು ಚೇನ್ನಾಗಿ ಬುರುವು ಎಂದು ಹೇಳುತ್ತಾರೆ. ಮನೆಯಲ್ಲಿ ಎಲ್ಲಾ ತರದ ಶಾಂತಿಯನ್ನೆ ಇರುತ್ತದೆ ಎಂದು ಆ ರೈತನ ಇಂಥ ಮೂಢನಂಬಿಕೆ ಇವು ಎಂದು ಹೇಳುತ್ತಾರೆ.

ಆ ಗೂಡಸಿಲಲ್ಲಿ ಇಟ್ಟ ತೆಂಗಿನಕಾಯಿ ಅದಕ್ಕೆ ಪುಜೆಯನ್ನು ಮಾಡಿ ಆರತಿಯ ಹಾಡಿ ಅದಕ್ಕೆ ಒಡೆಯುತ್ತಾರೆ. ಒಡೆದು ಆ ರೈತನ ಹೆಂಡತಿಯ ಉಡಿಯಲ್ಲಿ ಸ್ವಾಮಿ ಕೊಡುತ್ತಾನೆ ಹಾಗೆ ಆ ರೈತ ಗೂಡಸಿಯಿಂದ ಬೂಟ್ಟಿಯನ್ನು ಎತ್ತೀಕೊಂಡು ಮನೆಗೆ ಬರುವಾಗ ಹನುಮಾನ ಮಂದಿರ ಗೂಡಿಯ ಮೇಲೆ ಇಕ್ಕಿ ನಿಲ್ಲುತ್ತಾರೆ. ಆ ರೈತನ ಹೆಂಡತಿ ಅಂಬಲ್ಲಿ ಗಡಿಗೇಯ ಕೊಡವನ್ನು ತರುತ್ತಾಳೆ. ತಂದ ಮೇಲೆ ಅವಳು ದೀಪಾ ಹಚ್ಚುತ್ತಾಳೆ. ದೀಪಾ ಹಚ್ಚಿ ದೇವರಿಗೆ ನಮಸ್ಕರಿಸಿ ಮನೆಗೆ ಬರುತ್ತಾರೆ. ಒಂದು ಬೂಟಿಯನ್ನು ದೇವರ ಹತ್ತೀರ ಇಕ್ಕುತ್ತಾರೆ. ಆ ಬುಟ್ಟಿಗೆ ಇದ್ದ ಸಸಿಯನ್ನು ಮನೆಯ ಮಾಳಗಿಯ ಮೇಲೆ ಇಕ್ಕುತ್ತಾರೆ.

ಆ ರೈತನ ಮನೆಯಲ್ಲಿ ಅವರ ಹೆಂಡತಿ ಅಥವಾ ಸೊಸಿ ಮತ್ತು ತಮ್ಮನ ಹೆಂಡತಿ ಗರ್ಭಿಣಿ ಇದ್ದರೆ ಆ ಬುಟ್ಟಿಗೆ ಆ ಜೋಳಧ ಸಸಿಯನ್ನು ಕಟ್ಟುವುದಿಲ್ಲಾ.

ಆ ರೈತ ಮತ್ತೆ ಹೊಲಕ್ಕೆ ಹೋಗುತ್ತಾನೆ. ಹೋಗಿ ಗೂಡಿಸಿಯ ಒಂದು ಜೋಳದ ಸೂಡನು ತೆಗೆದುಕೊಂಡು ಅದಕ್ಕೆ ಉರಿಯನು ಹಚ್ಚುತ್ತಾನೆ. ಹಚ್ಚಿ ಆ ಗೂಡಸಿಯ ಸುತ್ತಲು ತೀರುಗುತ್ತಾರೆ. ಅದಕ್ಕೆ ಹೀಲಾಲ ಎಂದು ಕರೆಯುತ್ತಾರೆ.

ಇಂದಿನ ಕಾಲದಲ್ಲಿ ಬದಲಾದ ಎಳ್ಳಮವಾಸೆ ಆಚರಣೆ

ಬಡವರಾಗಿದು ಯಾವುದೇ ಜೌದ್ಯೋಗಿಕ ಕ್ರಿಯೆಗಳಲ್ಲಿ ಹಿಂದೆ ಜನ ಹೆಚ್ಚು ಹೆಚ್ಚು ಗುರುತಿಸಿಕೊಂಡವರಾಗಿರಲಿಲ್ಲ ಅದಕ್ಕಾಗಿ ಅವರ ಆಹಾರ ಪದ್ಧತಿ ಅವರ ಹೊಲದಲ್ಲಿ ಬೆಳೆದ ಬೆಳೆಗಳಿಂದ ಸಂಬಂಧ ಪಡೆದಿತ್ತು. ಅದಕ್ಕಾಗಿ ಅವರು ಹೊಲದಲ್ಲಿ ಸಿಗುವ ಜೊಳದಿಂದ ರೊಟ್ಟಿ ಕಡಬು, ತೊಗರಿಂದ ಸಪ್ಪನೆಯ ಬ್ಯಾಳಿ, ಕಡಲೆಯಿಂದ ಹುಳಪಲ್ಯಾ ಇತರ ತರಕಾರಿಗಳಿಂದ ಅರೆಯಿಂದ ಭಜ್ಜಿ ಮಾಡುತ್ತರೆ. ಹೈನುಗಾರಿಕೆ ಹೆಚ್ಚಾಗಿದ್ದರಿಂದ ಅಂಬಲಿ ಮಾಡುತ್ತಿದ್ದರು. ಆದರೆ ಇಂದು ಶೆಂಗಾ ಹೊಳಿಗೆ ನವಣೆ ಅನ್ನದ ಬದಲು

ಕಳವೆಯ ಅನ್ನ ಭಜ್ಜಿ ಜೊತೆಗೆ ಇತರ ತರಹದ ಪಲ್ಯಾ ಸಾರು ಹೀಗೆ ಅವರ ಅನುಕುಲಕ್ಕೆ ತಕ್ಕಂತೆ ಸಿಹಿ ಮತ್ತು ಟೇಸ್ಟಿಯಾಗಿರುವ ಅಡುಗೆಗಳನ್ನು ಮಾಡುತ್ತಾರೆ. ಮುತ್ತಲ ಎಲೆ / ಬಾಳೆ ಎಲೆ ಬದಲಾಗಿ ಊಟಕ್ಕಾಗಿ ಪ್ಲಾಸ್ಟೀಕ ತಟ್ಟೆಗಳನ್ನ ಬಳಸುತ್ತಿದ್ದಾರೆ. ಎತ್ತಿನ ಬಂಡಿ ಕಟ್ಟಿ ಎಲ್ಲರು ಅದರಲ್ಲೂ ಕುಳಿತು ಹೋಗುತ್ತಿದ್ದರು ಅದು ಅವರ ಕೃಷಿ ಸಲಕರಣೆಗಳಲ್ಲಿ ಒಂದಾಗಿತ್ತು ಬಂಡಿ ಕೃಷಿಕರ ಬದುಕಿನ ಪ್ರತ್ಯೇಕವಾಗಿದೆ. ಇಂದು ಅದರ ಅದಲಾಗಿ ಸಾರಿಗೆ ವಾಹನಗಳನ್ನು ಬಳಸುತ್ತಿದ್ದಾರೆ. ಸಂಜೆಯ ವರೆಗೂ ಹೊಲದಲ್ಲೇ ಇರದೇ ಬೇರೆ ಬೇರೆ ಕಾರ್ಯಗಳ ಕಾರಣದಿಂದಾಗಿ ಊಟ ಮುಗಿದ ನಂತರ ಮನೆಗೆ ಬರುತ್ತಿದ್ದಾರೆ. ಹೀಗೆ ಈ ಒಂದು ಆಚರಣೆಯಲ್ಲಿ ಜನರ ಆಸಕ್ತಿ ಕಡಿಮೆಯಾಗುತ್ತಿದ್ದು, ಜಾಗತೀಕರಣದ ಕರಿನೆರಳಲ್ಲಿ ಮರೆ ಯಾಗಬಹುದಾದ ಶಂಕೂಳು ಕಾಣುತ್ತಿವೆ.

1.6 ಥವಾರಿ

ನಂಬಿಕೆ :

ಈ ಥವಾರಿ ಜೋಳವನ್ನು ರಾಶಿ ಮಾಡುವಾಗ ಥವಾರಿ ಎಂದು ಮಾಡುತ್ತಾರೆ. ಹೊಳ್ಳಿ ಹುಣ್ಣಿಮೆ ಮತ್ತು ಯುಗಾದಿಯ ಮಧ್ಯಮದಲ್ಲಿ ಈ ರಾಶಿಯನ್ನು ಮಾಡುತ್ತಾರೆ. ರೈತರು ಆನಂದದಿಂದಾ ರಾಶಿಯನ್ನು ಮಾಡುತ್ತಾನೆ. ಅದು ಹೋಗೆ ಅಂದರೆ ಮೊದಲು ಪಂಚಗ ನೋಡಿ ಆ ಜೋಳದ ರಾಶಿಯನ್ನು ಮಾಡುತ್ತಾನೆ. ಒಂದು ಒಂದು ಥಂಟನ್ನು ಕೀತ್ತುತ್ತಾನೆ.

ಆಚರಣೆ :–

ತೆನೆ ಸಹಿತವಾಗಿ ಥಂಟನ್ನು ಬುಡಸಮೇತ ಕಿತ್ತಿ ನೆಲಕ್ಕೆ ಹಾಕುತ್ತಾನೆ. ಎರಡು ದಿನ ಬಿಸಿಲು ತಿಂದ ಮೇಲೆ ಅವುಗಳು ಚಿಕ್ಕ ಚಿಕ್ಕ ಸೂಡುಗಳನ್ನು ಕಟ್ಟಿ ಆ ಸೂಡಗಳನ್ನು ಗೋಪುರಾಕಾರದಲ್ಲಿ ಬಣವಿಯನ್ನು ಒಟ್ಟುತ್ತಾರೆ. ಕೆಲವುದಿನದ ನಂತರ ಬಣದಿಯಿಂದ

ಒಂದೊಂದೇ ಸೂಡು ತೆಗೆದು ಅದರ ತೆನಿಗಳನ್ನು ಖಳಮಾಡಿ ಅದರಲ್ಲಿ ಮುರಿದು ಕೊಯ್ದು ಹಾಕುತ್ತಾರೆ. ಇದಕ್ಕೆ ಗೂಡು ಮುರಿಯುವುದೆಂದು ಹೇಳುತ್ತಾರೆ. ಆ ತೆನೆಗಳಿಂದ ಜೋಳವನ್ನು ಬೇರರ್ಪಡಿಸಲು ಎತ್ತುಗಳಿಂದ ಹಂತಿ ಕಟ್ಟುತ್ತಾರೆ. ಹಂತಿ ಎಂದರೆ ಖಳದ ಮಧ್ಯ ಮೇಟಿನಟ್ಟಿ ಮೇಟಿಗೆ 2/3 ಜೋಡಿ ಎತ್ತುಗಳನ್ನು ಕಟ್ಟುತ್ತಾರೆ. ಹಾಡುಗಳನ್ನು ಹಾಡುತ್ತಾ

1) "ನಸಕಿನೊಳಗ ಎದ್ದು ಕಸ ಹೆಂಡಿ ತಾ ಬಳಿದು
ಮುಸರಿ ಹತ್ತಿಕಾಳಿಡಬೇಕೊ/
ಬೆಳಕ ಹರಿವಹರೊಳಗ ಜಳಕ ತಣ್ಣೀರಾಗ
ಕಳಕ ಮಲ್ಲನ ಧ್ಯಾನ/ ಮಾಡಬೇಕೊ/
ಗಳ್ಯಾ ಹೊಡಿಬೇಕೊ/" ॥

2) "ಕಾಸಿದ ಕಬ್ಬಿಣ ಚಂದ ಸೋಸಿದ ಬಂಗಾರ ಚಂದ
ರಾಸ್ಯಾಗ ಚಂದ ಬಿಳಿಜ್ವಾಳ"
" ಇದ್ದೂರ ಗುರುಲೇಸು ಮುದ್ದಿ ಬಂಗಾರ ಲೇಸು
ಉದ್ಯೋಗ ಮಾಡಾ ಮಗಲೇಸು"
"ಕಾಲು ಜಾರಿದರ ಕೈಲಾಸೊ ಹೆಣ್ಣಿನ
ಮನವ ಜಾರಿದರ ವನವಾಸೊ"
" ಹಾಡಿದ್ದರ ಹಾಡಬೇಕು ಜೋಡಿದ್ದರ ನಗಬೇಕು
ತುರುಬಿದ್ರ ಸೆರಗ ತಗಿಬೇಕೋ"
"ಬಿಳಿ ಎತ್ತ ತರಬೇಕು ಬೆಲಿಯಾ ಹೊಲಬೇಕು

ಮೆಳ್ಳಗಣ್ಣಿನ ಸೊಸಿ ಬೇಕು"

" ಹಂಡೆತ್ತ ತರಬ್ಯಾಡ ದುಂಡುಳ್ಳ ಸೊಸಿಬ್ಯಾಡ

ತಿರಿದುಂಡು ಮನಗಾ ಮಗಬ್ಯಾಡ"

" ಕರಿಯೆತ್ತ ತರಬ್ಯಾಡ ಕರಕಿಯ ಹೊಲಬ್ಯಾಡ

ಕಾಡಗಿಗಣ್ಣಿನ ಸೊಸಿ ಬ್ಯಾಡ"

" ನಗುವ ಹೆಂಗಸು ಬ್ಯಾಡ ಆಳುವ ಗಂಡಸಬ್ಯಾಡ

ಅಳದಕ್ಕಿಹೇಳೋ ಬೀಗಬ್ಯಾಡ" ॥

3) "ಬಸವಣ್ಣ ಬರ್‍ವಾಗ ಅವರವ್ವ ಹೇಳ್ಯಾಳ/

ಬಸವಾಗ ಹೂಡಿ ಹೊಡಿಬ್ಯಾಡೋ/ ಸ್ವಾಮಾರ

'ಹಸುಮಗ' ಆಗಿ ತಿರಗಲೋ॥

ಚಿಂತಿ ಮಾಡಲಿಬ್ಯಾಡ ಹುಚ್ಚ ನನ್ನ ಬಸವಣ್ಣ

ಚಿಂತ್ಯಾಗ ಕಾಯ ಇಳದಾದೊ/ಪಾಂಡೋರು

ಅಂತವರಿಗುಂಟೊ ವನವಾಸೋ॥"

ಬಸವಣ್ಣ ಬದುಕಿನೋಂದಿಗೆ ರೈತನ ಬದುಕೂ ಇಲ್ಲಿ ಸಮರಸಗೊಂಡಿದೆ. ತಾವಿಬ್ಬರೂ ವನವಾಸದಿಂದ ಬದುಕುತ್ತಿದ್ದೇವೆಂದು ರೈತ ತನ್ನ ಮುದ್ದು ಬಸವನಿಗೆ ಹಿತನುಡಿಯನ್ನು ಹೇಳುತ್ತಾನೆ. ಚಿಂತಿಸದಿರಲು ಅಭಯಹಸ್ತ ನೀಡುತ್ತಾನೆ. ಅಂತೆಯೇ ಎತ್ತುಗಳು ರೈತನ ಬೆನ್ನೆಲುಬಾಗಿ ನಿಂತು ಅವನ ಬದುಕನ್ನು ನಡೆಸುತ್ತಿವೆ. ಬಸವ ಅವನಿಗಾಗಿ ರೈತ ಮಾಡಿದ ಸೇವೆಚೂದರೂ ಅಪಾರವಾದುದು.

4) "ಕಸವ ಬಳಿದ ಕೈ ಕಸ್ತೂರಿ ನಾತವ।
ಬಸವ ನಿನ್ನ ಸೆಗಣಿ ಬಳದಾರ। ಕೈಗಳು
'ಯಾಲಕ್ಕಿ ನಾತ' ನಾರ್‍ಯಾವೊ॥

ಖಳಾ ಮಾಡ್ಬೇಕೊ ಖಳಾ ಹ್ಯಾಂಗ ಮಾಡ್ಬೇಕೊ
ಸೂರ್‍ಯಾ ಚಂದ್ರಮನ್ಹಾಂಗ ಖಳಾ ಮಾಡ್ಬೇಕೊ।
ಬಣಮಿ ಒಟ್ಬೇಕೊ ಭಣಮಿ ಹ್ಯಾಂಗ ಒಟ್ಬೇಕೊ
ಗಾಡಿ ಚೌಕಿನ್ಹಾಂಗ ಭಣಮಿ ಒಟ್ಬೇಕೊ।
ಸೂಡ ಕಟ್ಬೇಕೊ ಸೂಡ ಹ್ಯಾಂಗ ಕಟ್ಬೇಕೊ
ಗರತ್ಯಾರ ತುರಬಿನ್ಹಾಂಗ ಸೂಡ ಕಟ್ಬೇಕೊ।
ಮೆದಿ ಹಾಕ್ಬೇಕೊ ಮೆದಿ ಹ್ಯಾಂಗ ಹಾಕ್ಬೇಕೊ
ಸೂಳ್ಯಾರ ನಿರಿಗಿ ಹಾಂಗ ಮೆದಿ ಹಾಕ್ಬೇಕೊ॥"

5) "ಕಲಬುರ್ಗಿ ದಾರೀಗಿ ಕಲ್ಲಿಲ್ಲ ಮುಳ್ಳಿಲ್ಲ।
ಎಳ್ಳಕಾಳಷ್ಟು ರವದಿಲ್ಲ। ಶರಣಬಸವ
ದಾರಿ ನಡದಾರ ಹಸಿವಿಲ್ಲ॥
ಎರಕೊಂಡು ಬುಕಿಯ ಹಾಕ್ಕೊಂಡು।
ತುರುಕರು ಹೊಂಟಾರ ಹೊರೆಯಾಕ। ಕಲಬುರ್ಗಿ
ಬಂದೇನವಾಜನ ದರಗಾಕ॥
ಅಡ್ಡಗೋಡಿ ಚಂದ ಕಪ್ಪುಕುಪ್ಪಸ ಚಂದ।

ಕಡ್ಡಿ ಕೈಯ್ಯಾನ ಬಳಿಚಂದ। ಹುಮನಾಬಾದ

ನೋಡೊ ಈರಣ್ಣನ ಗುಡಿ ಚಂದೊ॥

ಕ್ಯಾವಿಯ ಉಟ್ಯಾನೊ ಕ್ಯಾವಿಯ ಹೊದ್ದಾನೊ।

ಹೂವಿನ ಮರಕೆಳಗ ಮಲಗ್ಯಾನೊ। ನಾಗರಲಿಂಗಸ್ವಾಮಿ

ಮಠದಲ್ಲಿ ಮಾಯವಾಗ್ಯಾನೊ॥

ಮಠದಲ್ಲಿ ಮಠವೆಲ್ಲಿ ಬಾಗಿಲವೆಲ್ಲಿ।

ಕಟ್ಟಿದ ರುದ್ರಾಕ್ಷಿ ಸರವೆಲ್ಲಿ। ಸ್ವಾಮಿ

ಮಠವೈತೊ ಬಾಳಿ ವನದಾಗ॥"

ಎಂದು ಚುಡಾಯಿಸಿ ಅಣಕವಾದ್ದಾನೆ. ಶೃಂಗಾರ ಚೇಷ್ಟೆಯ ಚಟಾಕಿಗಳನ್ನು ಹಾರೆಸುತ್ತ 'ಹುಣಚಿಯ ಗಿಡ ಬುಡ್ಡಿದ್ದರಿರಲಿ ಹುಳಿಭಾಳ। ಚೆಲುವಿದ್ದರಿರಲಿ ತಲಿಜಿಡ್ಡೊ.

7) "ಹಾದಿಯ ಹೊಲ ನೋಡು ಗೋಧಿಯ ಬೆಳಿನೋಡು।

ಹೋರಿ ಮೇಸೀನಿ ಇಣಿನೋಡು। ಎಲೆ ಹುಡಿಗಿ।

ಮೀಸಿ ತಿದ್ದೀನಿ ಹುರಿನೋಡು॥

ಬಂಗಾರ ಹೊಳಪಿನ ಬಣ್ಣ ಅಸಕ ತಕ್ಕಂತ ಮೀಸಿ।

ಎಳೆ ಹರೆಯದ ಹುಡುಗನೋ। ಕಂಡರ

ಬಾಲಿಯ ನಿಲುಗಿ ಸಡಿಲಾವೋ॥"

ಮನೆಯವರಿಗೆ ಕದ್ದು ವ್ಯಭಿಚಾರ ನಡೆಸುವ ಗಂಡು ಹೆಣ್ಣಿನ ವ್ಯವಹರವನ್ನು ಹಚಿತಿಯ ಹಾಡುಗಳು ಸೆರೆಹಿಡಿದಿವೆ.

8) "ಹತ್ತಿಯ ಹೊಲ್ದಾಗ ಅತ್ತತ್ತ ಹೇಳ್ತಾಳ।

ನತ್ತ ಮಾಡಿಸ ನನಗೊಂದು। ನನಗೆಣೆಯ
ಅತ್ತಿ ಮನಿಗ್ಹೋಗಿ ಬರತೀನೊ॥"

ಪರಪುರಷನ ಸಂಗ ಮಾಡಿದ ಹೆಣ್ಣೊಂದು ತನ್ನ ಗ್ವಣೆಯನ ಮುಂದೆ ಈ ರೀತಿ ಬಯಕೆಯನ್ನು ತೋಡಿಕೊಂಡಿದ್ದಾಳೆ. ಅತ್ತಿಯ ಮನೆಯಲ್ಲಿ ವೈಯ್ಯಾರ ಮಾಡಿ ಬರಬೇಕೆನ್ನುವ ಹೆಣ್ಣಿಗೆ ತಬರೂರಿನ ಹಳೆಯ ಗೆಳೆಯನ ನತ್ತು ತೀರ ಅವಶ್ಯಕವೆನಿಸಿದೆ.

ಇನ್ನು ತನ್ನ ಗೆಣೆಯ ಬರುವನೆಂದು 'ಗಿಣ್ಣ' ಕಾಸಿಟ್ಟು ದಾರಿ ಕಾದು ಬೇಸತ್ತ ಹೆಣ್ಣೊಂದ ನೊಂದು.

9) "ಹುಣ್ಣಿಯ ಮರುದಿನ ಗಿಣ್ಣವ ಕಾಸಿದ್ದ।
ಹುಣ್ಣತ್ತದ್ಹುಡುಗ ಬರಲಿಲ್ಲೊ। ಮನಿಯಾನ
ತಿಂದೋಡಿ ಗಂಡ ತಿನಬಾರೋ॥

ಗೆಣಿಯ ಬರ್‍ತಾನಂತ ಗೆಣಸಿನ ಹೋಳಿಗಿ ಮಾಡಿ।
ಹರದಾರಿ ಗೆಣಿಯ ಬರಲಿಲ್ಲ। ಮನಿಯಾನ
ತಿಂದೋಡಿ ಗಂಡ ತಿನು ಏಳೊ॥"

ಗೆಣಿಯನ ಕೂಡುವ ಭರಾಟೆಯಲ್ಲಿ ಮನೆಯ ಗಂಡನನ್ನು ಮೂದಲಿಸಿ ನುಡಿದ ಹೆಣ್ಣಿನ ಚಿತ್ರವಿದು. ಹುಣ್ಣ ಹತ್ತಿ ಕೀವು ಕೋರುತ್ತಿದ್ದರೂ, ಅವನ ಅಂಗಸಂಗದಲ್ಲಿ ಒಂದು ಸುಖವಿದೆ ಎಂದು ಹಾಡು ಅಣಕವಾಡಿದೆ.

10) "ಹೊರಗ ಕೂತೀನಂತ ಹೊರಗೆ ಮಲಗಿರತೀನಿ।
ಕರು ಹೋಗ್ಯಾದಮರ ಬಂದ್ಹೋಗೋ। ನನಗೆಣೆಯ

ಕರುವಿನ ಸೇಡು ತೆಗೆದ್ಹೋಗೊ॥"

ತನ್ನನ್ನು ಕೂಡಲು ಬರುವ ಗೆಣೆಯನಿಗೆ ಸಂಕೇತವನ್ನು ಸ್ವಾರಸ್ಯಕರವಾಗಿ ನಿರೂಪಿಸಿದ್ದಾಳೆ. ಹೋರಗೆ ಮಲಗಿದ್ದು, ಕದ್ದು ಬಂದದ್ದು ಆ ಸ್ವರದಲ್ಲಿ ಕೂಡಿಕೊಂಡು ತೃಪ್ತಿಪಟ್ಟಿದ್ದರ ಸ್ಪಷ್ಟ ಚಿತ್ರ ಇಲ್ಲಿದೆ.

ಆ ಇಡಿ ರಾತ್ರಿ ಎತ್ತುಗಳಿಂದ ತೆನಿಗಳನ್ನು ತುಳುಸುತ್ತಾರೆ. ಎತ್ತುಗಳು ಕಾಲಿನಿಂದ ಧಾನು ಹೆಚಾಗುತ್ತದೆಂದು ನಂಬಿಕೆಯನ್ನು ಉಂಟು.

ಆ ಖಳ್ಳದಲ್ಲಿ ಸುಟ್ಟ ಅನ್ನು ಹಜ್ಜ ನಾಲ್ಕು ಭಾಗಗಳನ್ನು ಮಾಡುತ್ತಾರೆ ರೈತನಾ ಹೆಂಡತಿ ಅಂಬಲ್ಲಿ, ಖಿಚಡಿ, ಮೊಸರು, ಅಕ್ಕಿ ಅನ್ನ, ಒಂದನೇ ಕಾಯಿ ಪಲ್ಯ ಹುಗ್ಗಿ ರೊಟ್ಟಿ ಎಣ್ಣಿ ಹೋಳಗಿ ಹೀಡಿನಾ ಕುಳ್ಳಿಯನ್ನು ಮಾಡುತ್ತಾಳೆ. ಎಣ್ಣಿ ಹೋಳಗಿ ಮೇಲೆ ದೀಪವನ್ನು ಹಚ್ಚುವುದಕ್ಕೆ ಹಿಟ್ಟಿನ ಕುಳಿಯನ್ನು ಮಾಡುತ್ತಾರೆ.

ರೈತನ್ನು ಮನೆಯಲ್ಲಿ ಮೊದಲು ನೀವೈದ ತೂರುತ್ತಾರೆ. ಆ ಮೇಲೆ ಹೊಲಕ್ಕೆ ಮಾಡದು ಅಡಗಿಯನ್ನು ಒಯ್ಯುತ್ತಾರೆ. ರೈತನ ಹೆಂಡತಿಯ ಜೋಳದ ಖಳ್ಳವನ್ನು ಒಂದೊಂದು ಅಗ್ಗಿ ಪೂಜೆಯನ್ನು ಮಾಡುತ್ತಾಳೆ.

ಮೊದಲು ಮೆಟಿಗಕೆ ಆದ ನಂತರ ಅಂಬಲಿಯ ಒಂದು ಕಡಗೀಯನ್ನು ಇಡುತ್ತಾರೆ. ಪೂಜೆಯನ್ನು ಮಾಡುತ್ತಾರೆ. ಹೊಲದ ಪಾಂಡವರಿಗೆ ನೈವೆದ್ಯ ತೊರುತ್ತಾರೆ. ಎಲ್ಲ ದೇವರಿಗೆ ಪೂಜೆಯನ್ನು ಮಾಡಿ ನಿವೈದಿ ತೋರುತ್ತಾರೆ.

ಬೇಕಾದ ಜನರಿಗೆ ಊಟಕ್ಕೆ ಹೇಳುತ್ತಾರೆ. ಖಳ್ಳದಲ್ಲಿ ಇದ್ದು ಮದಿನಾವನ್ನು ಹಾಲು ಮತ್ತು ತುಪ್ಪವನ್ನು ಸ್ವಲ್ಪ ಸ್ವಲ್ಪ ಹಾಕುತ್ತಾರೆ. ರೈತ ಖಳ್ಳವನ್ನು ಹಾಲು ಮತ್ತು ತುಪ್ಪದಿದ್ದು ಉಕ್ಕಿ ಹರಿಲ್ಲಿ ಎಂದು

1.7 ಕೊಟ್ಟಿಗೆ ಹುಣ್ಣಿಮೆ :–

ನಂಬಿಕೆ :–

ಈ ಹುಣ್ಣಿಮೆ ರೈತರು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಕೃಷಿಕ ಜನರಲ್ಲಿ ಹೈನುಗಾರಿಕೆ ಪ್ರಮುಖ ಪಾತ್ರ ಪಡೆದಿದರಿಂದ ಅವರು ಮನೆಯಲ್ಲಿ ಮಕ್ಕಳಷ್ಟೆ ದನಕರುಗಳು ಪ್ರಿತಿಗೆ ಪಾತ್ರವಾಗಿದ್ದವು. ಮನೆ ತುಂಬ ಮಕ್ಕಳು ದನಕರುಗಳು ಇದ್ದರೆ ಅದೇ ಅವರಿಗೆ ಅತಿ ದೊಡ್ಡ ಆಸ್ತಿ ಅದಕ್ಕಾಗಿ ಮನೆಯಲ್ಲಿ ಕೃಷಿಗೆ ಬೆನ್ನಲುಬಾಗಿ ನಿಂತಿರುವ ರೈತನ ಸ್ನೇಹಪರವಾಗಿರುವ ಎತ್ತುಗಳು ಗೋಮಾತ್ರಯೆಂದ ಪೂಜಿಸಲ್ಪಡುವ ಆಕಳುಗಳು ಹೈನದ ಕ್ಷೀರಸಾಗರವನ್ನು ಹರಿಸುವ ಎಮ್ಮೆಗಳು ಆಕಳು ಎಮ್ಮೆಗಳು ಕರಗಳು ಇದ್ದು ಅದಕ್ಕೊಂದು ಪ್ರತ್ಯೇಕ ವಾಸಸ್ಥಾನವಿದ್ದು ಅದನ್ನು ಕೊಟ್ಟಿಗೆ ಅಂತ ಕರೆಯುವರು ಕೊಟ್ಟಿಗೆಯು ಅವುಗಳು ವಾಸಸ್ಥಾನಕ್ಕೆ ತಕ್ಕಂತೆ ರಚಿಸಲ್ಪಡುವುದು ದನಗಳು ಅವರ ಆರ್ಥಿಕ ಪರಿಸ್ಥೀತಿಯನ್ನು ಸುಧಾರಿಸುವ ಅಂಶಗಳು ಆಗಿದ್ದರಿಂದ ಅವುಗಳನ್ನು ಗೌರವ ಭಕ್ತಿಯಿಂದ ಪೂಜಿಸಿಕೊಂಡು ಬರುತ್ತಿದ್ದ ಹೀಗೆ ಅದೊಂದು ಪರಂಪರಾಗತವಾಗಿ ಸಂಪ್ರದಾಯವಾಗಿಯೇ ನಡೆದು ಬಂದಿದೆ ಅದನ್ನ ಕೊಟ್ಟಿಗೆ ಹುಣ್ಣಿಮೆ ಎಂದು ಕರೆಯುತ್ತಾರೆ.

ಆಚರಣೆ :–

ರೈತ ಎತ್ತುಗಳಿಗೆ ದೇವರು ಎಂದು ಭಾವಿಸುತ್ತಾರೆ. ಎತ್ತುಗಳು ಕಟುವ ಕೊಟ್ಟಿಗೆ ಹುಣ್ಣಿಮೆ ದಿನ ಆ ಕೊಟ್ಟಿಗೆ ಹಬ್ಬ ಎಂದು ಆಚರಣೆ ಮಾಡುತ್ತಾರೆ,

ಕೊಟ್ಟಿಗೆಯನ್ನು ಗುಡಿಸಿ ಸಾರಿಸಿ ಸ್ವಚ್ಚಗೊಳಿಸುತ್ತಾರೆ. ಹುಣ್ಣಿಮೆಯ ಕೊಟ್ಟಿಗೆ ಗೊಡೆಯ ಮೇಲೆ ಸುಣ್ಣ ಜಾಜದಿಂದ ಸೂರ್ಯ ಮತ್ತು ಚಂದ್ರ ಬಾಳಿಯ ಗಿಡ ಪಾಂಡವರ ಚಿತ್ರಗಳನ್ನು ಇಳುಸುತ್ತಾರೆ.

ಎತ್ತು ಆಕಳು ಎಮ್ಮೆ ಕಟ್ಟಿರುವ ಗೊಟಗಳಿಗೆ ಮೊದಲು ನೀರಿನಿಂದ ತೊಳೆದು ಅದಕ್ಕೆ ಒಂದು ಸುಣ್ಣದ ಪಟ್ಟಿ ಇನ್ನೊಂದು ಜಾಜದ ಪಟ್ಟಿಯನ್ನು ಬರೆಯುತ್ತಾರೆ.

ಬರೆದು ಅದಕ್ಕೆ ಅರಸಿಣ ಕುಂಕುಮದಿಂದ ಪೂಜಿಸುತ್ತಾರೆ. ಸಿಹಿ ತಿಂಡಿಯನ್ನು ಮಾಡುತ್ತಾರೆ. ಆನಂತರ ಮನೆಯಲ್ಲಿ ಮಾಡಿದ ಸಿಹಿ ತಿಂಡಿಯನ್ನು ನೈವೆದಿಯನ್ನು ತೋರುತ್ತಾರೆ. ತೋರಿದ ನಂತರ ರೈತ ರೈತನ ಹೆಂಡತಿ ಮಕ್ಕಳ ಮನೆಯಲ್ಲಿದ ಹಿರಿಯರು ಆರತಿ ಮಾಡುತ್ತಾರೆ. ಮಾಡಿದ ಮೇಲೆ ಸಂತೋಷದಿಂದ ಊಟವನ್ನು ಮಾಡುತ್ತಾರೆ.

ಹೀಗೆ ರೈತರು ಮನೆಯಲ್ಲಿ ಇದ್ದು ಎಲ್ಲಾ ಹಿರಿಯರು ಕಿರಿಯರು ಕೊಟ್ಟಿಗೆಯ ಹುಣ್ಣಿಮೆಯನ್ನು ಆಚರಣೆಯ ಮಾಡುತ್ತಾರೆ.

1.8 ಅಮವಾಸ್ಯೆ ಚೇಟ್ಟಿ :–

ಅಮವಾಸ್ಯೆ ಆದ ಮೇಲೆ 7ನೇ ದಿವಸಕ್ಕೆ ಚೇಟಿಯನ್ನು ಮಾಡುತ್ತಾರೆ. ರೈತರು ಮೂಢನಂಬಿಕೆ ಅಂದರೆ ಹಾಲು ತುಪ್ಪವನ್ನು ಮನೆಯಲ್ಲಿ ದನಗಳು ಚೆನ್ನಾಗಿ ಇರುವುದು ಹಾಲು ತುಪ್ಪವನ್ನು ಕಡಿಯುವುದು ಇಲ್ಲ ಎಂದು ಹೇಳುತ್ತಾರೆ.

ಮೈಲಾರ ಲಿಂಗ ದೇವರ ಮೇಲೆ ಚೇಟಿ ಎಂದು ಮಾಡುತ್ತಾರೆ. ಮೈಲಾರ ಲಿಂಗ ದೇವರಿಗೆ ಹಾಲು ತುಪ್ಪವನ್ನು ಮನೆಯಲ್ಲಿ ಯಾರು ಊಟವನ್ನು ಮಾಡುವುದು ಹೇಳಿಕೊಡುತ್ತಾರೆ. ದೀಪವನ್ನು ಹಚ್ಚುತ್ತಾರೆ.

ಅಮವಾಸ್ಯೆ ಆದ ಮೇಲೆ 7ನೇಯ ದಿವಸಕ್ಕೆ ಚೇಟಿ ಎಂದು ಮಾಡುತ್ತಾರೆ

ರೈತರು ಮನೆಯಲ್ಲಿ ಸ್ವಚ್ಛ ಮಾಡಿ ರಂಗೋಲಿಯನ್ನು ಹಾಕಿ ಮುಂಜಾನೆ ಎದ್ದು ರೈತರು ಹೊಲಕ್ಕೆ ಹೋಗಿ ಹಚ್ಚಕಾಯಿ, ಬದನೇಕಾಯಿ, ಹಿರೇಕಾಯಿ, ಮೇಣಸಿನಕಾಯಿ, ಉಳ್ಳಿಗಡಿ, ಮಂತೇಪಲ್ಯೆ ಇತ್ಯಾದಿಗಳು ತರಕಾರಿಗಳು ಹೊಲಕ್ಕೆ ಹೋಗಿ ತರುತ್ತಾರೆ.

ಮನೆಗೆ ತಂದು ಎಲ್ಲ ತರಕಾರಿಗ ಸೇರಿಸಿ ಅಡಿಗೆ ಮಾಡಿ ಚೇಟನೀಯನ್ನು ಮಾಡುತ್ತಾರೆ. ಅಡಿಗೆಯನ್ನು ಮಾಡುತ್ತಾರೆ. ಆದರೆ ಝುಜ್ಜಿಯ ರೊಟ್ಟಿ ಬದನೆಕಾಯಿಯ ಪಲ್ಯಾ, ಅಕ್ಕಿಯ ಹುಗ್ಗಿ, ಅಕ್ಕಿಯ ಅನ್ನ, ತುಪ್ಪ, ಹಾಲು, ಮೊಸರೂ ಎಲ್ಲನ್ನು ಅಡಿಗೆಯನ್ನು ಮಾಡುತ್ತಾರೆ. ಈಗ ವಗ್ಯನಿಗೆ ಕರೆಯುತ್ತಾರೆ. ಆ ವಗ್ಯನಿಗೆ ಒಂದು ಮೇಲೆ ಕೋಡಬಿಯನ್ನು ತುಂಬುತ್ತಾರೆ. ಅದರ ಕೇಳಗೆ ಜೋಳವನ್ನು ಹಾಕುತ್ತಾರೆ. ಹಾಕ್ಕಿದ ಬಳಿಕ ಹಾಲು, ತುಪ್ಪವನ್ನು ಹಾಕುತ್ತಾರೆ. ಮತ್ತು ಒಂದು ಒಳಕ್ಕೆ ಝುಜಯರೊಟ್ಟಿ, ಚೇಟನಿ, ಬದನೆಕಾಯಿ ಪಲ್ಯಾ, ಹುಗ್ಗಿ ಅಕ್ಕಿ ಅನ್ನ ಹಾಕುತ್ತಾರೆ. ಎಲ್ಲವನ್ನು ಹಾಕಿದ ಮೇಲೆ ಪ್ರಜೆಯನ್ನು ಮಾಡುತ್ತಾರೆ. ಮೇಳೆ ಎಣಿ ದೀಪವನ್ನು ಹಚ್ಚುತ್ತಾರೆ. ಮತ್ತು ಹೂವುವನ್ನು ಹಾಕುತ್ತಾರೆ. ಮನೆಯಲ್ಲಿ ಇದ್ದ ದೇವರು ತಂದು ಇಡುತ್ತಾರೆ. ಕಬಿರಿಯನ್ನು ತುಟಿ ತುಟಿ ಮಾಡುತ್ತಾರೆ. ಅರಸಿನವನ್ನು ಕಲಿಸಿ ಭಂಡಾರವನ್ನು ಮಾಡುತ್ತಾರೆ.

ಆ ರೈತನು ಹೆಂಡತಿಯನ್ನು ಪೂಜೆಯನ್ನು ಮಾಡಿ ಆ ಮಗನ್ನು ಯಳುಕೊಟ್ಟು – ಯಳುಕೊಟ್ಟ ಎಂದು ಐದು ಸಲ ಕಬೀರಿಯನ್ನು ಹರಿಸುತ್ತಾರೆ. ಪೂಜೆಯನ್ನು ಆದ ಮೇಲೆ ವಗ್ಯನಿಗೆ ಊಟಕ್ಕೆ ಕೋಡುತ್ತಾರೆ. ಆ ದಿವಸ ನಾಯಿಯನ್ನು ಖಡಬಾ ಎಂದು ಪೂಜೆಯನ್ನು ಮಾಡುತ್ತಾರೆ. ಆ ನಾಯಿ ಯನ್ನು ಹೂವುವಿನ ಹಾರವನ್ನು ಹಾಕುತ್ತಾರೆ. ಪೂಜೆಯನ್ನು ಮಾಡುತ್ತಾರೆ. ನೈವ್ಯದಿಯನ್ನು ಕೊಡುತ್ತಾರೆ.

ಹೀಗೆ ಅಮವಾಸ್ಯ ಆದ ಮೇಲೆ 7 ದಿವಸಕ್ಕೆ ಚೇಟಿ ಎಂದು ಆಚರಿಸುತ್ತಾರೆ.

ಅಧ್ಯಾಯ – 4

ವೈಶಿಷ್ಟತೆ

ಅಧ್ಯಾಯ – 4
ವೈಶಿಷ್ಟತೆ

ಕೃಷಿ – ಆರ್ಥಿಕ ಬೆಳವಣಿಗೆ : ಅಂದು–ಇಂದು

ಬೀದರ ಜಿಲ್ಲೆಯೂ ಕರ್ನಾಟಕ ರಾಜ್ಯದ ಉತ್ತರ ಭಾಗದಲಿದೆ. ಜಿಲ್ಲೆಯು ಐದು ತಾಲ್ಲೂಕುಗಳನ್ನೊಳಗೊಂಡಿದೆ. ಕರ್ನಾಟಕ ರಾಜ್ಯದ ಹತ್ತು ಕೃಷಿ ವಲಯಗಳಲ್ಲಿ ಬೀದರ ಜಿಲ್ಲೆಯ ಉತ್ತರ ಪೂರ್ವ (ಈಶಾನ್ಯ) ಅರೆ ಮಲೆನಾಡು ಪ್ರದೇಶದಲ್ಲಿ ಬರುತ್ತದೆ. ಈಲ್ಲೆಯ ಒಟ್ಟು ಭೌಗೋಳೀಕ ಪ್ರದೇಶವು 5,458 ಚದರ ಕೀ.ಮೀ. ಇದ್ದು ಇದರಲ್ಲಿ 4,52,475 ಹೆಕ್ಟೇರ್ ಊಳುವ ಭೂಮಿಯಾಗಿದೆ. ಈಲ್ಲೆಯಲ್ಲಿ ಒಟ್ಟು 30 ಹೋಬಳಿಗಳಿವೆ. ಜಿಲ್ಲೆಯ ಒಟ್ಟು ಜನಸಂಖ್ಯೆ 12,,55,799 ಇದ್ದು ಇದರಲ್ಲಿ 2,45,703 ಜನ ಪಟ್ಟಣದಲ್ಲಿ ಹಾಗೂ ಉಳಿದ 10,10,096 ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣವು ಶೇ. 45,11ರಷ್ಟು ಇರುತ್ತದೆ ಹಾಗೂ ಜಿಲ್ಲೆಯು 914 ಪ್ರಾಥಮಿಕ ಶಾಲೆಗಳನ್ನು 105 ಪ್ರೌಢ ಶಾಲೆಗಳನ್ನು, 20 ಪದವಿ ಕಾಲೇಜುಗಳಲನ್ನು, 5 ಡಿಪ್ಲೋಮಾ ಹಾಗೂ 6 ತಾಂತ್ರಿಕ ಕಾಲೇಜುಗಳನ್ನು ಹೊಂದಿದೆ.

ಜಿಲ್ಲೆಯ ಹವಾಗುಣ :–

ಜಿಲ್ಲೆಯ ಜಿಲ್ಲೆಯ ಹವಾಗುಣವು ಕೃಷಿಗೆ ಪೂರಕವಾಗಿರುತ್ತದೆ. ಜಿಲ್ಲೆಯಲ್ಲಿ ಸರಾಸರಿ 847 ಮಿ.ಮೀ. ಮಳೆಯಾಗುತ್ತದೆ ಹಾಗೂ ಇದು ಜೂನ್‌ದಿಂದ ಅಕ್ಟೋಬರ್‌ವರೆಗೂ ಹರಡಿರುತ್ತದೆ. ಇದರಿಂದ ವರ್ಷದಲ್ಲಿ ಎರಡು ಬೆಳೆಗಳನ್ನು ತೆಗೆಯಲು ಅನುಕೂಲವಿದೆ. ದಿನದ ಸರಾಸರಿ ಗರಿಷ್ಠ ಉಷ್ಣಾಂಶವು 36.40 ಸೆ. ಹಾಗೂ ಸರಾಸರಿ ಕನಿಷ್ಠ ಉಷ್ಣಾಂಶವು 20.40 ಸೆ. ಇರುತ್ತದೆ ವಾತಾವರಣದ ಸರಾಸರಿ ಆರ್ದ್ರತೆಯು ಶೇ. 48ರಿಂದ 90ರವರೆಗೆ ಇರುತ್ತದೆ.

ಮಣ್ಣು :-

ಜಿಲ್ಲೆಯ ಕೆಲವೊಂದು ಭಾಗದಲ್ಲಿ ಜಂಬಟ್ಟಿಗೆ ಅಥವಾ ಲ್ಯಾಟರೈಟಿಕ್ ಮಣ್ಣು ಇರುತ್ತದೆ ಇನ್ನುಳಿದ ಭಾಗದಲ್ಲಿ ಕಪ್ಪು ಮಣ್ಣು ಇದ್ದು ಈ ಮಣ್ಣುಗಳಿಗನುಸಾರವಾಗಿ ಎರಡೂ ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತದೆ.

ಜಿಲ್ಲೆಯ ಪ್ರಮುಖ ಬೆಳೆಗಳು :-

ಬೀದರ ಜಿಲ್ಲೆಯಲ್ಲಿ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತದೆ. ಆಯಾ ಹಂಗಾಮಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳನ್ನು ಇಲ್ಲಿ ತಿಳಿಸಲಾಗಿದೆ.

ಮುಂಗಾರು ಬೆಳೆಗಳು :

ಹೆಸರು, ಉದ್ದು, ಸೋಯಾಬಿನ್, ತೊಗರಿ, ಜೋಳ, ಎಲ್ಳು, ಸೂರ್ಯಕಾಂತಿ, ಕಬ್ಬು, ಭತ್ತ, ಶುಂಠಿ, ಶೇಂಗಾ, ಹತ್ತಿ ಮುಂತಾದವು

ಹಿಂಗಾರು ಬೆಳೆಗಳು :- ಕಡಲೆ, ಗೋಧಿ, ಕುಸುಬೆ ಮುಂತಾದವು.

ನೀರಾವರಿ ಸೌಲಭ್ಯ :-

ಬೀದರ ಜಿಲ್ಲೆಯಲ್ಲಿ ಒಟ್ಟು 45,824 ಹೆ. ಪ್ರದೇಶವು ನೀರಾವರಿ ಸೌಲಭ್ಯವನ್ನು ಹೊಂದಿದೆ. ಅದರಲ್ಲಿ 338 ಹೆ. ಪ್ರದೇಶವು ಕಾಲುವೆಯಿಮದ 997 ಹೆ. ಹಳ್ಳ ಹಾಗೂ ಹೊಂಡಗಳಿಂದ, 32,396 ಹೆ. ತೆರೆದ ಬಾವಿಗಳಿಂದ, 11,894 ಹೆ. ಕೊಳವೆ ಬಾವಿಗಳಿಂದ ಹಾಗೂ 1,852 ಹೆ. ಪ್ರದೇಶವು ಇತರೇ ಮೂಲಗಳಿಂದ ನೀರನ್ನು ಪಡೆಯುತ್ತವೆ.

ಬೀದರ ಜಿಲ್ಲೆಯಲ್ಲಿ ಕೃಷಿಯ ಬೆಳವಣಿಗೆ :-

ಇತ್ತಿತ್ತಲಾಗಿ ಕೃಷಿಯಲ್ಲಿ ಬಹಳ ಮಹತ್ವಪೂರ್ಣ ಬೆಳವಣಿಗೆಗಳಾಗುತ್ತಿವೆ. ಆದರೆ, ಇಂದಿಗೆ ಸುಮಾರು 20 ವರ್ಷಗಳ ಹಿಂದ ಕೃಷಿಯಲ್ಲಿ ಇಂತಹ ಬೆಳವಣಿಗೆಗಳಿರಲಿಲ್ಲ. ರೈತರಿಗೆ ಆಧುನಿಕ ಕೃಷಿಯ ಬಗ್ಗೆ ತಿಳುವಳಿಕೆ ಇರಲಿಲ್ಲ. ಈಗಿನಂತೆ ಆಗ ಹೊಸ ಹೊಸ ತಳಿಗಳಾಗಲಿ ಇರಲಿಲ್ಲ. ಆದ್ದರಿಂದ ಆಗ ರೈತರು ತಮ್ಮಲ್ಲಿರುವ ವಿವಿಧ ಬೆಳೆಗಳ ಸ್ಥಾನೀಯ ತಳಿಗಳನ್ನೇ ಬೆಳೆಯುತ್ತಿದ್ದರು. ಅಂತಹ ತಳಿಗಳಲ್ಲಿ ಹೆಚಚಿನ ಇಳುವರಿ ಕೊಡುವ ಸಾಮರ್ಥ್ಯ ಇರಲಿಲ್ಲ. ಹೀಗಾಗಿ ಆಗ ಉತ್ಪಾದಕತೆ ಬಹಳ ಕಡಿಮೆ ಇರುತ್ತಿತ್ತು. ಈ ಮೊದಲು ಜಿಲ್ಲೆಯಲ್ಲಿ ಬೆಳೆಯುತ್ತಿದ್ದ ವಿವಿಧ ಬೆಳೆಗಳ ತಳಿಗಳು ಹಾಗೂ ಅವುಗಳ ಉತ್ಪಾದಕತೆಯು ಈ ಕೆಳಗಿನಂತಿದೆ.

ಬೆಳಗಳು	ತಳಗಳು	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ಉತ್ಪಾದನೆ (ಕ್ವಿಂಟಲ ಪ್ರತಿ ಹೆ.)
ಜೋಳ	ಸಿ.ಎಸ್.ಎಚ್.–1, ಸಿ.ಎಸ್.ಎಚ್.–5 ಸಿ.ಎಸ್.ಎಚ್.–9	82078	7
ತೊಗರಿ	ಪ.ಟಿ.–221, ಜಿ.ಎಸ್.–1	40,000	6
ಸೂರ್ಯಕಾಂತಿ	ಮಾರ್ಡನ್	3,842	8
ಶೇಂಗಾ	ಎಸ್–230	10,000	12
ಉದ್ದು	ಕೆ–3	30,000	6
ಹೆಸರು	ಚೈನಾ ಮೂಂಗ	20,000	6
ಕುಸುಬೆ	ಎ–300,ಎಸ್–144	5,000	7
ಹತ್ತಿ	ವರಲಕ್ಷ್ಮಿ, ಡಿ.ಸಿ.ಎಚ್.–32	1,000	6
ಮೆಕ್ಕೆ ಜೋಳ	ಆಫ್ರಿಕನ್ ಟಾಲ್	500	15
ಸಜ್ಜಿ	ಎಂ.ಎಚ್.–179,ಪಿ.ಜಿ.ಜೆ.–104	29,242	4
ಗೋದಿ	ಕೀರ್ತಿ,ಎಚ್.ಡಿ.–2189	18,808	––
ಕಬ್ಬು	ಸಿ.ಡಿ.–419, ಸಿ.ಓ.–740	10,000	250

ರೇಷ್ಮೆ ಕೃಷಿ :-

ಜಿಲ್ಲೆಯಲ್ಲಿ 80ರ ದಶಕದಲ್ಲಿ ರೇಷ್ಮೆ ಕೃಷಿಯ ಆಗಮನವಾಯಿತು,. ಇಲ್ಲಿನ ಹವಾಮಾನ, ಮಣ್ಣು ನೀರಾವರಿಯ ಅನುಕೂಲತೆಗಳು ಈ ಕೃಷಿಗೆ ಪೂರಕವಾಗಿದ್ದು ರೇಷ್ಮೆ ಕೃಷಿಯನ್ನು ರೈತರು ಹೆಚ್ಚಾಗಿ ಅಳವಡಿಸಿಕೊಳ್ಳುವಲ್ಲಿ ಮುಂದಾದರು. 90ರ ದಶಕದಲ್ಲಿ ಜಿಲ್ಲೆಯಾದ್ಯಂತ ಸುಮಾರು 2,000 ಎಕರೆ ಪ್ರದೇಶದಲ್ಲಿ ರೇಷ್ಮೆ ಕೃಷಿಯನ್ನು ಮಳಆಡಲಾಗುತ್ತಿತ್ತು. ಕ್ರಮೇಣ ರೈತರು. ಅಧಿಕ ಆಳುಗಳು ಬೇಕಾಗುವುದರಿಂದ, ಸೊಪ್ಪು ಕಿತ್ತು, ತಟ್ಟೆಯಲ್ಲಿ ಹುಳು ಸಾಕಾಣಿಕೆಯಿಂದ ಅಲ್ಲದೆ ಇಳುವರಿ ಮಟ್ಟ ಕಡಿಮೆ ಇದ್ದು, ಬೆಳೆದ ಗೂಡಿಗೆ ಸರಿಯಾದ ಬೆಲೆ ಇಲ್ಲದೆ ಮತ್ತು ದೂರದ ಮಾರುಕಟ್ಟೆ ಇದ್ದ ಕಾರಣ ಕ್ರಮೇಣ ರೈತರ ಆಸಕ್ತಿ ಕಡಿಮೆಯಾಗಿ 1988ರಲ್ಲಿ ರೇಷ್ಮೆ ಕೃಷಿಯು ಕೇವಲ 200 ಎಕರೆಗೆ ಬಂತು. ಅನಂತರದ ದಿನಗಳಲ್ಲಿ ಚಾಲ್ತಿಗೆ ಬಂದ ಹೊಸ ಹೊಸ ಅಧಿಕ ಇಳುವರಿ ಕೊಡುವ ಹಿಪ್ಪುನೇರಳೆ ತಳಿಗಳಾದ ವಿ–1 (ವಿಕ್ಟರಿ–1) ಮತ್ತು ದ್ವಿ–ತಳಿ ಸಂಕರಣ

ತಳಿಗಳಾದ ಸಿ.ಎಸ್.ಆರ್.ಗಳ ಬಿಡುಗಡೆಯಿಂದ ಮುಖ್ಯವಾಗಿ ರೆಂಬೆ ಸಾಕಾಣಿಕೆ ಪದ್ಧತಿಯನ್ನು ಹೆಚ್ಚು ಜನಪ್ರೀಯಗೊಳಿಸಲಾಗಿ ಇಂದು ಜಿಲ್ಲೆಯಲ್ಲಿ ಸುಮಾರು 750 ಎಕರೆ ಪ್ರದೇಶದಲ್ಲಿ ಈ ಕೃಷಿಯನ್ನು ಕೈಗೊಳ್ಳಲಾಗುತ್ತಿದೆ.

ಶಿಫಾರಸ್ಸು ಮಾಡುತ್ತಿರುವ ಮತ್ತು ಪ್ರಚಲಿತವಿರುವ ಹಿಪ್ಪುನೇರಳೆ ತಳಿಗಳೆಂದರೆ ವಿ–1, ಎಸ್–13 ಮತ್ತು ಎಸ್–36. ವಿ–1 ಎಕರೆವಾರು ಅಧಿಕ ಇಳುವರಿ ಕೊಡುವ ತಳಿ, ರೆಂಬೆಗಳು ನೇರವಾಗಿರುವುದರಿಂದ ರೆಂಬೆ ಸಾಕಾಣಿಕೆ ಬಹಳ ಸೂಕ್ತ. ಇತ್ತೀಚಿನ ದಿನಗಳಲ್ಲಿ ಬಹಳಷ್ಟು ರೈತರು ಈ ತಳಿಯನ್ನು ಬೆಳೆಯುತ್ತಿದ್ದಾರೆ. ಎಸ್–13 ಈ ತಳಿಯು ಕೆಂಪು ಮಣ್ಣಿಗೆ ಸೂಕ್ತವಾಗಿದ್ದು ಕಡಿಮೆ ನೀರು ಅಥವಾ ಬರ ನಿರೋಧಕ ಶಕ್ತಿ ಹೊಂದಿದ್ದು, ಜಿಲ್ಲೆಯಲ್ಲಿ ಜನಪ್ರೀಯವಾದ ತಳಿಯಾಗಿದೆ. ಎಸ್–36 ತಳಿಯನ್ನು ವಿಶೇಷವಾಗಿ ಚಾಕಿ ಅಂದರೆ ಸಣ್ಣ ಹುಳುಗಳಿಗೆಂದೇ ಶಿಫಾರಸ್ಸು ಮಾಡಲಾಗಿದೆ. ಕಾರಣ ಇದರಲ್ಲಿ ಚಾಕಿ ಹುಳುಗಳಿಗೆ ಬೇಕಾದ ತೇವಾಂಶ, ಮೃದುವಾದ ಎಲೆ, ಅಲ್ಲದೆ ಪೂರಕ ಪೋಷಕಾಂಶವಿರುತ್ತದೆ. (ಕಾರ್ಬೋಹೈಡ್ರೇಟ್ಸ್).

ರೇಷ್ಮೆ ಹುಳುಗಳ ತಳಿಗಳಲ್ಲಿ ಸಿ.ಎಸ್.ಆರ್.–2.4, ಸಿ.ಎಸ್.ಆರ್. –4.2, ಸಿ.ಎಸ್.ಆರ್. 2.5 ಈ ದ್ವಿ–ತಳಿಗಳನ್ನು ಬೆಳೆಯಲಾಗುತ್ತಿದ್ದು, ಇವು ಬಿಳಿ ಗೂಡು ಕಟ್ಟುತ್ತವೆ, ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆಯನನು ತಂದುಕೊಡಬಲ್ಲವು. ಆದರೆ ಹುಳ ಸಾಕಾಣಿಕೆಯನ್ನು ರೈತರು ಬಹಳ ಕಾಳಜಿ ವಹಿಸಿ ಮಾಡಬೇಕಾಗುತ್ತುದೆ. ಇವಲ್ಲದೆ ಬಹು ಸಂತತಿ ತಳಿಗಳಾದ ಕೋಲಾರ ಗೋಲ್ಡ್, ಕಾವೇರಿ, ಸ್ವರ್ಣಾಂಧ್ರ ಮತ್ತು ಸಿ.ಬಿ. ತಳಿಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ.

ಇತ್ತಿಚಿನ ದಿನಗಳಲಿ ರೈತರು ರೇಷ್ಮೆ ಕೃಷಿಯಿಂದಾಗುವ ಲಾಭಗಳನ್ನರಿತು ಹೆಚ್ಚು ರೈತರು ಈ ಕೃಷಿಯ ಕಡೆಗೆ ಒಲವು ತೋರಿಸುತ್ತಿದ್ದಾರೆ.

ಹೈನುಗಾರಿಕಾ ಉದ್ಯಮ :-

ಹೈನುಗಾರಿಕೆಯನ್ನು ಈ ಮೊದಲು ವಾಣಿಜ್ಯ ಕಸಬಾಗಿ ಪರಿಗಣಿಸಿರಲಿಲ್ಲ. ಆದರೆ ಇಂದು ಹೈನುಗಾರಿಕೆಯ ಒಂದು ಉದ್ಯಮವಾಗಿ ಬೆಳೆದಿದೆ. ಕೃಷಿ ವಿಶ್ವವಿದ್ಯಾಲಯ ಧಾರವಾಡದ ಅಂಗ ಸಂಸ್ಥೆಯಾದ ದೇವಣಿ ಫಾರ್ಮದ ವಿಜ್ಞಾನಿಗಳು ಆಕಳು ಮತ್ತು ಎಮ್ಮೆಯ ಹೊಸ ತಳೀಗಳನ್ನು ರೈತರಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ತಳೀಗಳಲ್ಲಿ ಹಾಲು ಕೊಡುವ ಸಾಮರ್ಥ್ಯವು ಇತರೆ ಸ್ಥಾನೀಯ ತಳಿಗಳೀಗಿಂತ ಬಹಳ ಹೆಚ್ಚಿಗೆ ಇದೆ. ಇಂದು ರೈತರು ಅಂತಹ ತಳೀಗಳನ್ನು ಖರೀದಿಸಿ ಹೈನುಗಾರಿಕೆಯನ್ನು ನಡೆಸುತ್ತಿದ್ದು ಇದರಿಂದ ಲಾಭ ಪಡೆಯುತ್ತಿದ್ದಾರೆ, ಅಲ್ಲದೆ ಹೈನುಗಾರಿಕೆಯನ್ನಾರಂಭಿಸಲು ಈಗ ವಿವಿಧ ಕೃಷಿಪರ ಬ್ಯಾಂಕುಗಳು ಸಾಲವನ್ನು ಸಹ ನೀಡುತ್ತಿವೆ.

ಕೋಳಿ ಸಾಕಾಣಿಕೆ :

ಇತ್ತಿಚೆಗೆ ಕೋಳೀ ಸಾಕಾಣಿಕೆಯು ಉತ್ತಮ ಲಾಭ ಕೊಡುವ ಕೃಷಿಯೇತರ ಚಟುವಟಿಕೆಯಾಗಿದೆ. ಕೋಳೀಗಳಲ್ಲಿಯೂ ಸಹ ವಿಜ್ಞಾನಿಗಳೂ ಹೆಚ್ಚಿಗೆ ತತ್ತಿ ಇಡುವ ಸಾಮರ್ಥ್ಯವಿರುವ, ಹೆಚ್ಚಿಗೆ ಮಾಂಸವನ್ನು ಒದಗಿಸುವ ಹಾಗೂ ವಿವಿಧ ರೋಗಗಳಿಗೆ ನಿರೋಧಕತೆ ಇರುವ ತಳಿಗಳನ್ನು ಕಂಡುಹಿಡಿದಿದ್ದಾರೆ. ಇಂತಹ ಹೊಸ ತಳಿಗಳ ಕೋಳಿಗಳನ್ನು ಸಾಕಾಣಿಕೆ ಮಾಡಿ ರೈತರು ಲಾಭ ಪಡೆಯುತ್ತಿದ್ದಾರೆ. ಹೈನುಗಾರಿಕೆಯಂತೆ, ಕೋಳಿ ಸಾಕಾಣಿಕೆಗೂ ಸಹಿತ ವಿವಿಧ ಕೃಷಿ ಪರ ಬ್ಯಾಂಕುಗಳಿಂದ ಸಾಲದ ಸೌಲಭ್ಯ ಇರುತ್ತದೆ.

ಕಬ್ಬಿನ ಕಾರ್ಖಾನೆಗಳು :

ಇಂದಿಗೆ 20-25 ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಕಬ್ಬಿನ ಕಾರ್ಖಾನೆಗಳು ಇರಲಿಲ್ಲ. ಹೀಗಾಗಿ ಕಬ್ಬನ್ನು ಬೆಳೆದ ರೈತರು ದೂರದ ಪ್ರದೇಶಕ್ಕೆ ಹೋಗಿ ತಮ್ಮ ಕಬ್ಬನ್ನು ಮಾರಾಟ ಮಾಡಬೇಕಾಗಿತ್ತು. ಅಲ್ಲದೇ ಆಗಿನ ಕಬ್ಬಿನ ತಳಿಗಳು ಕಡಿಮೆ ಇಳುವರಿ ಕೊಡುತ್ತಿದ್ದವು. ಆದರೆ ಇಂದು ಕಬ್ಬಿನ ತಳಿಗಳು ಕಡಿಮೆ ಇಳುವರಿ ಕೊಡುವ ಹಾಗೂ ರೋಗಗಳ ನಿರೋಧಕತೆ ಇರುವ ಕೆಲವು ಕಬ್ಬಿನ ತಳೀಗಳನ್ನು ವಿಜ್ಞಾನಿಗಳೂ ಕಂಡುಹಿಡಿದಿದ್ದಾರೆ. ಇಂತಹ ತಳಿಗಳನ್ನು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯ ರೈತರು ಬೆಳೆಯುತ್ತಿದ್ದಾರೆ. ಬೀದರ ಜಿಲ್ಲೆಯ ಕಬ್ಬಿನ ಉತ್ಪಾದಕತೆಯ ಮಟ್ಟವು ಹೆಚ್ಚಾಗಿರುವುದರಿಂದ ಜಿಲ್ಲೆಯಲ್ಲಿ ಈಗ 3 ಸಕ್ಕರೆ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ, ಅಲ್ಲದೇ ಹಲವಾರು ಖಂಡಸಾರಿಗಳು ಇವೆ. ಇದರಿಂದ ರೈತರು ತಮ್ಮ ಕಬ್ಬಿನ ಮಾರಾಟ ಇಂದು ದೂರದ ಪ್ರದೇಶಗಳಿಗೆ ಹೋಗುವ ಅನಿವಾರ್ಯತೆ ಇರುವುದಿಲ್ಲ.

ದಾಲ್ ಮಿಲ್ಲುಗಳು :-

ಕೃಷಿ ವಿಜ್ಞಾನಿಗಳು ತೊಗರಿಯಲ್ಲಿ ಹೆಚ್ಚಿನ ಇಳುವರಿ ನೀಡುವ ಹಾಗೂ ಹಲವು ರೋಗಗಳಿಗೆ ನಿರೋಧಕತೆಯನ್ನು ಹೊಂದಿರುವ ತಳಿಗಳನ್ನು ಕಂಡುಹಿಡಿದಿದ್ದಾರೆ. ಜಿಲ್ಲೆಯಲ್ಲಿ ಅಂತಹ ತಳಿಗಳನ್ನು ರೈತರು ಇಂದು ಬೆಳೆಯುತ್ತಿದ್ದಾರೆ. ಅಲ್ಲದೇ ಹೆಚ್ಚಿನ ಉತ್ಪಾದನೆಯನ್ನು ಮಾಡುತ್ತಿದ್ದಾರೆ. ತಮ್ಮ ಉತ್ಪಾದನೆಯ ಸ್ವಲ್ಪ ಭಾಗವನ್ನು ತೊಗರಿ ಬೆಳೆಯನ್ನಾಗಿ ಪರಿವರ್ತಿಸಲು ರೈತರು ಮುಂದಾದರು. ಇದರ ಪರಿಶ್ರಮವಾಗಿ ಇಂದು ಜಿಲ್ಲೆಯಲ್ಲಿ ಅನೇಕ ತೊಗರಿಯ ದಾಲ್ ಮಿಲ್‌ಗಳು ಸ್ಥಾಪಿತವಾಗಿವೆ. ಹೀಗಾಗಿ ರೈತರಿಗೂ ತಾವು ಬೆಳೆದ ಬೆಳೆಗೆ ಹೆಚ್ಚಿನ 98 ಬೆಲೆ ಸಿಗುತ್ತಲಿದೆ. ಅಲ್ಲದೇ ದಾಲ್ ಮಿಲ್ ಹಾಕಿಕೊಂಡಿರುವ ವ್ಯಕ್ತಿಗೂ ಲಾಭವಾಗುತ್ತಿದೆ.

ರಾಸಾಯನಿಕಗಳ ಬಳಕೆ : -

ಮೊದಲು ರೈತರು ತಮ್ಮ ಬೆಳೆಗಳಿಗೆ ಅಷ್ಟೊಂದು ರಾಸಾಯನಿಕ ಗೊಬ್ಬರವಾಗಲಿ ಅಥವಾ ಕ್ರಿಮಿನಾಶಕಗಳನ್ನು ಬಳಸುತ್ತಿರಲಿಲ್ಲ. ಆದರೆ 1960ರಲ್ಲಿ ನಡೆದ ಹಸಿರು ಕ್ರಾಂತಿಯ ಪರಿಣಾಮವಾಗಿ ಹೆಚ್ಚು ಹೆಚ್ಚು ರಸಗೊಬ್ಬರಗಳನ್ನು ಹಾಗೂ ಕ್ರಿಮಿನಾಶಕಗಳನ್ನು ಬಳಸಲು ರೈತರು ಮುಂದಾದರೂ ಬೆಳೆಯುತ್ತಿರುವ ದೇಶದ ಜನಸಂಖ್ಯೆಗೆ ಆಹಾರವನ್ನು ಪೂರೈಸಲು ಉತ್ಪಾದಕತೆಯನ್ನು ಹೆಚ್ಚಿಸುವುದು ಅನಿವಾರ್ಯವಾಗಿತ್ತು. ಹೀಗಾಗಿ ಹೆಚ್ಚು ಹೆಚ್ಚು ರಸಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಬಳಸುವುದು ಸಹ ಅಷ್ಟೇ ಅನಿವಾರ್ಯವಾಗಿತ್ತು. ಇದು ಹೀಗೆ ಮುಂದುವರೆದ ಪರಿಣಾಮವಾಗಿ ಮಣ್ಣಿನ ಫಲವತ್ತತೆಯ ಗಣನೀಯವಾಗಿ ಕಡಿಮೆಯಾಗತೋಡಗಿತು. ಕೀಟಗಳು ಈ ರಾಸಾಯನಿಕಗಳಿಗೆ ನಿರೋಧಕತೆಯನ್ನು ಬೆಳೆಸಿಕೊಂಡವು ಮತ್ತು ವಾತಾವರಣವು ಕಲುಷಿತಗೊಂಡಿತು. ಇದರಿಂದ ಎಚ್ಚೆತ್ತ ರೈತರು ಇಂದು ಸಾವಯವ ಕೃಷಿಯ ಕಡೆಗೆ ಒಲವು ತೋರಿಸುತ್ತಿದ್ದಾರೆ. ಅಲ್ಲದೇ ಸರಕಾರವು ಸಾವಯವ ಕೃಷಿ ನೀತಿಯನ್ನು ಸಹ ಜಾರಿಗೊಳಿಸಿದೆ. ಹೀಗಾಗಿ ಜಿಲ್ಲೆಯ ರೈತರು ಕ್ರಮೇಣವಾಗಿ ರಾಸಾಯನಿಕ ರಸಗೊಬ್ಬರ ಹಾಗೂ ಕ್ರಿಮಿನಾಶಕಗಳ ಬಳಕೆಯನ್ನು ಕಡಿಮೆ ಮಾಡುತ್ತಿದ್ದಾರೆ. ರೈತರನ್ನು ಸಾವಯವ ಕೃಷಿಯ ಕಡೆಗೆ ಪ್ರೇರೆಪಿಸುವಲ್ಲಿ ಕೃಷಿ ವಿಜ್ಞಾನ ಕೇಂದ್ರ ಬೀದರ್‌ನ ವಿಜ್ಞಾನಿಗಳು ಮಹತ್ವದ ಪಾತ್ರವನ್ನು ವಹಿಸಿದ್ದಾರೆ.

ರೈತ ಸಂಪರ್ಕ ಕೇಂದ್ರಗಳ ಸ್ಥಾಪನೆ :-

ಈ ಮೊದಲು ರೈತರು ತಮ್ಮ ಬೆಳೆಗಳ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಬೇಕಾದ ದೂರದ ಪ್ರದೇಶಗಳಲ್ಲಿರುವ ಕೃಷಿ ಇಲಾಖೆಗೆ ಬರಬೇಕಾಗುತ್ತಿತ್ತು. ಇದರಿಂದಾಗುವ ತೊಂದರೆಯನ್ನು ಅರಿತ ಸರಕಾರವು 2000ನೇ ಇಸ್ವಿಯಿಂದ ಜಿಲ್ಲೆಯಲ್ಲಿ ಪ್ರತಿಯೊಂದು ಹೋಬಳಿಯಲ್ಲಿ ರೈತ ಸಂಪರ್ಕ ಕೇಂದ್ರಗಲನ್ನು ಸ್ಥಾಪಿಸಿತು. ಇಲ್ಲಿ ಕೃಷಿ ಇಲಾಖೆಯ

ಉದ್ದೇಶಗಳು, ರೈತರಿಗಿರುವ ಸವಲತ್ತು ಹಾಗೂ ರೈತರ ಬೆಳೆಗಳಿಗೆ ಬರುವ ರೋಗಗಳು, ಕೀಟಗಳು ಹಾಗೂ ಅವುಗಳ ಹತೋಟಿ ಕ್ರಮಗಳ ಬಗ್ಗೆ ರೈತರಿಗೆ ತಿಳಿಸಲಾಗುತ್ತದೆ.

ಮಾಹಿತಿ ತಂತ್ರಜ್ಞಾನ :-

ಈ ಹಿಂದೆ ರೈತರು ಕೃಷಿಯ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಬೇಕಾದರೆ ಕೇವಲ ರೆಡಿಯೋದಲ್ಲಿ ಪ್ರಸಾರವಾಗುವ ಕೃಷಿ ರಂಗ ಕಾರ್ಯಕ್ರಮದವನ್ನು ಆಲಿಸುತ್ತಿದ್ದರು. ಆದರೆ ಈ ಕಾರ್ಯಕ್ರಮದಲ್ಲಿ ಕೇವಲ ಪ್ರಚಲಿತ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುತ್ತಿತ್ತು. ಅಲ್ಲದೆ ಇದು ಹಲವೊಂದು ಬೆಳೆಗಳಿಗೆ ಸೀಮಿತವಾಗಿತ್ತು. ಆದರೆ ಇಮದು ಮಾಹಿತಿ ತಂತ್ರಜ್ಞಾನದಲ್ಲಿ ಆದ ಬೆಳವಣಿಗೆಯಿಂದ ಅಂತರ್ಜಾಲದ ಮುಖಾಂತರ ರೈತರು ತಮಗೆ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳಬಹುದು. ರಾಜ್ಯದಲ್ಲಿ ದೇಶದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಕೃಷಿ ಉದ್ಯುನ್ಮಾನಗಳ ಬಗ್ಗೆ ಯಾವುದೇ ಒಂದು ಬೆಳೆಯಲ್ಲಿನ ಕೀಟ ಬಾಧೆ, ರೋಗ ಬಾಧೆಗೆ ಪರಿಹಾರವಾಗಲಿ ಅಥವಾ ಯಾವುದೇ ರೈತರ ಉತ್ಪನ್ನಕ್ಕೆ ವಿವಿಧ ಮಾರುಕಟ್ಟೆಗಳಲಿ ಇರುವ ಪ್ರಚಲಿತ ಬೆಲೆಯನ್ನು ತಿಳಿದುಕೊಳ್ಳಲು ಮಾಹಿತಿ ತಂತ್ರಜ್ಞಾನದಿಂದ ಸುಲಭವಾಗಿದೆ.

ಕೃಷಿ ವಿಜ್ಞಾನ ಕೇಂದ್ರಗಳ ಸ್ಥಾಪನೆ :-

ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ನಡೆಸಿದ ಸಂಶೋಧನೆಯ ಪರಿಣಾಮಗಳನ್ನು ಪರಿಣಾಮಕಾರಿಯಾಗಿ ರೈತರಿಗೆ ತಲುಪಿಸುವ ಸಲುವಾಗಿ ಕೃಷಿ ವಿಸ್ತೀರ್ಣ ವಿಭಾಗವನ್ನು ಬಲಪಡಿಸಬೇಕಾಯಿತು. ಈ ದಿಶೆಯಲ್ಲಿ

ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಯಿತು. ಇದರ ಪರಿಣಾಮವಾಗಿ ಜಿಲ್ಲೆಯಲ್ಲಿ 1985ರಲ್ಲಿ ಕೃಷಿ ವಿಜ್ಞಾನ ಕೇಂದ್ರವು ಅಸ್ತಿತ್ವಕ್ಕೆ ಬಂದಿತು. ಇಂದು ಈ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಜಿಲ್ಲೆಯ ರೈತರಿಗೆ ವಿವಿಧ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳು, ಸಸ್ಯ ಸಂರಕ್ಷಣಾ ಕ್ರಮಗಳ ಬಗ್ಗೆ ತರಬೇತಿಯ ಮುಖಾಂತರ ಹಾಗೂ ರೈತರ ಹೊಲಗಳಿಗೆ ಭೇಟಿ ನೀಡುವ ಮೂಲಕ ತಿಳಿಸುತ್ತಿದ್ದಾರೆ. ಅಲ್ಲದೆ ರೈತ ಮಹಿಳೆಯರಿಗೆ ಹಾಗೂ ಗ್ರಾಮೀಣ ಯುವಕರಿಗೆ ವಿವಿಧ ಆದಾಯ ತರುವಂತಹ ಚಟುವಟಿಕೆಗಳ ಬಗ್ಗೆ ತರಬೇತಿ ನೀಡಲಾಗುತ್ತದೆ.

ಸವಾಲುಗಳು :-

ರಾಜ್ಯದ ಕೃಷಿಕರು ಈಗ ಹತ್ತಾರು ಸಮಾಲುಗಳನ್ನು ಎದುರಿಸಬೇಕಾಗಿದೆ. ಇದಕ್ಕೆ ಜಿಲ್ಲೆಯ ರೈತರು ಹೊರತಾಗಿಲ್ಲ. ಏಕೆಂದರೆ ಕೃಷಿಯನ್ನು ಆರ್ಥಿಕ ಸಬಲತೆಯನ್ನು ಬಯಸಿರುವ ರೈತರು ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಅಕಾಲಿಕ ಮಳೆ/ಮಳೆಯ ಅನಿಶ್ಚಿತತೆ :-

ಹಲವು ವರ್ಷಗಳಿಂದ ಜಿಲ್ಲೆಯಲ್ಲಿ ಮಳೆಯು ಸಕಾಲಕ್ಕೆ ಬರುತ್ತಿದ್ದಿಲ್ಲ. ಅತಿವೃಷ್ಟ ಹಾಗೂ ಅನಾವೃಷ್ಟಯಿಂದ ರೈತರು ಬಳಲುತ್ತಿದ್ದಾರೆ. ಹಂಗಾಮಿನಲ್ಲಿ ಮಳೆಯ ಅನಿಶ್ಚತೆಯಿಂದ ಬೆಳೆಗಳು ಸರಿಯಾಗಿ ಬರುತ್ತಿಲ್ಲ. ಇದರಿಂದ ಉತ್ಪಾದಕತೆ ಬಹಳ ಮಟ್ಟಿಗೆ ಕಡಿಮೆಯಾಗಿದೆ,. ಆದರೆ ಬೆಳೆಯನ್ನು ಬೆಳೆಯಲು ಉಪಯೋಗಿಸುವ ಕೃಷಿ ಪರಿಕರಗಳ ಬೆಲೆಯಲ್ಲಿ ಮಾತ್ರ ಕಡಿಮೆ ಯಗುತ್ತಿಲ್ಲ. ಇದರಿಂದ ರೈತರಿಗೆ ಕೃಷಿಯು ವರವಾಗಿ ಪರಿಣಮಿಸದೇ ಅವರನ್ನು ಸಾಲಗಾರರನ್ನಾಗಿ ಮಾಡುತ್ತಿದೆ.

ಅಂತರರ್ಜವಲ ಕುಸಿತ :

ಸಕಾಲಕ್ಕೆ ಮಳೆಯಾಗದೆ ಇರುವುದರಿಂದ ಹಾಗೂ ಮಳೆಯ ಪ್ರಮಾಣ ಹಣನೀಯವಾಗಿ ಕಡಿಮೆಯಾಗುವುದರಿಂದ ಅಂತರ್ಜಲದ ಮಟ್ಟವು ಬಹಳ ಕುಸಿದೆದಿ. ನಮ್ಮ ದೈನಂದಿನ ಕಾರ್ಯಗಳಿಗೆ ಹಾಗೂ ನೀರಾವರಿ ಸಲುವಾಗಿ ನಾವು ಬೋರವೆಲ್ ಹಾಗೂ ಬಾವಿಗಳಿಂದ ಸತತ ನೀರನ್ನು ಬಳಸುತ್ತಿದ್ದೇವೆ. ಆದರೆ ಅದರ ಮರು ಪೂರಣದ ಕಡೆಗೆ ಹೆಚ್ಚಿನ ಗಮನ ಹರಿಸುತ್ತಿಲ್ಲ.

ಕಡಿಮೆಯಾಗುತ್ತಿರುವ ಅರಣ್ಯ ಪ್ರದೇಶ :-

ಜನ ಸಂಖ್ಯಾಸ್ಫೋಟದ ಒತ್ತಡದಿಂದ ಮಾನವನು ತನ್ನ ಆಹಾರದ ಕೊರತೆಯನ್ನು ನೀಗಿಸಿ ಕೊಳ್ಳಲು ಅರಣ್ಯ ಪ್ರದೇಶವನ್ನು ಉಳುವ ಭೂಮಿಯನ್ನಾಗಿ ಪರಿವರ್ತಿಸುತ್ತಿದ್ದಾನೆ. ಇದರಿಂದ ಜಾನುವಾರುಗಳಿಗೆ ಮೇವಿನ ಕೊರತೆಯುಂಟಾಗುತ್ತಿದೆ. ಅಲ್ಲದೆ ಸಕಾಲಕ್ಕೆ ಮಳೆಯಾಗದಿರುವುದಕ್ಕೆ ಇದು ಒಂದು ಮುಖ್ಯ ಕಾರಣವೂ ಆಗಿದೆ.

ಓಜೋನ್ ಪದರಿನ ರಂಧ್ರಗಳು :-

ಮಾನವರು ತನ್ನ ಐಷಾರಾಮು ಜೀವನವನ್ನು ನಡೆಸುತ್ತಿರುವುದರಿಂದ ವಾಹನಗಳ ಹೊಗೆ ಹಾಗೂ ಇನ್ನಿತರ ಮೂಲಗಳೀಚಿದ ಹೊರಹೊಮ್ಮುವ ಕ್ಲೋರೊಫ್ಲೋರೋಕಾರ್ಬನ್‌ಗಳಿಂದ ಓಜೋನ್ ಪದರಿನಲ್ಲಿ ರಂಧ್ರಗಳುಂಟಾಗುತ್ತಿವೆ. ಈ ರಂಧ್ರಗಳ ಮುಖಾಂತರ ಸೂರ್ಯಕಿರಣಗಳು ನೇರವಾಗಿ ಭೂಮಿಯ ಮೇಲೆ ಬೀಳುವುದರಿಂದ ಉಷ್ಣತೆ ಹೆಚ್ಚಾಗುತ್ತಿದೆ.

ಹೆಚ್ಚುತ್ತಿರುವ ಕೃಷಿ ಪರಿಕರಗಳ ಬೆಲೆ :-

ಕುಸಿದಿರುವ ಬೆಳೆಯ ಉತ್ಪಾದಕತೆಯನ್ನು ಹೆಚ್ಚಿಸಲು ರೈತರು ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ವಿಪರೀತವಾಗಿ ಬಳಸುತ್ತಿದ್ದಾರೆ. ಈ

ರಸಾಯನಿಕಗಳನ್ನು ಹಲವು ಕಂಪನಿಗಳು ಉತ್ಪಾದಿಸುತ್ತಿರುವುದರಿಂದ ರೈತರು ಸಂಪೂರ್ಣವಾಗಿ ಈ ಕಂಪನಿಗಳ ಮೇಲೆ ಅವಲಂಬಿತರಾಗಿದ್ದಾರೆ. ಆದ್ದರಿಂದ ಈ ಕಂಪನಿಗಳು ತಮ್ಮ ಉತ್ಪನ್ನದ ಬೆಲೆಯನ್ನು ತಾವೇ ನಿಗದಿ ಮಾಡುವ ಹಕ್ಕು ಹೊಂದಿರುವುದರಿಂದ ಯಥೇಚ್ಛವಾಗಿ ಬೆಲೆಗಳನ್ನು ನಿಗದಿ ಮಾಡುತ್ತಿವೆ.

ಮಾರುಕಟ್ಟೆ ಸೌಲಭ್ಯಗಳ ಕೊರತೆ :-

ರೈತರು ಇಂದು ಬಹಳ ಸಮಸ್ಯೆಗಳ ನಡುವೆಯೂ ಬೆಳೆದ ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗುತ್ತಿಲ್ಲ. ಇದಕ್ಕೆ ಮುಖ್ಯವಾಗಿ ಮದ್ಯವಾಗಿ ಮದ್ಯವರ್ತಿಗಳ ಹಾವಳಿಯೇ ಕಾರಣ. ಅಲ್ಲದೇ ಸರಕಾರವು ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ನಿಗದಿಪಡಿಸಲು ತೋರಿಸುತ್ತಿರುವ ಅಸಡ್ಡೆಯೂ ಇದಕ್ಕೆ ಕಾರಣ. ಕೆಲವೊಂದು ಸಾರಿ ಮಾರುಕಟ್ಟೆಗೆ ತೆಗೆದುಕೊಂಡು ಹೋದ ಟೊಮ್ಯಾಟೊ ಹಾಗೂ ಈರುಳ್ಳಿಯನ್ನು ರೈತರು ರಸ್ತೆಯಲ್ಲಿಯೇ ಎಸೆದು ಬಂದಿರುವ ಉದಾಹರಣೆಗಳು ಮಾರುಕಟ್ಟೆಯಲ್ಲಿ ರೈತರ ಉತ್ಪನ್ನಗಳಿಗಿರುವ ಅಗ್ಗದ ಬೆಲೆಯನ್ನು ಸೂಚಿಸುತ್ತದೆ.

ಹೊಸ ಹೊಸ ಕೀಟಗಳ ಬಾಧೆ :

ಯಥೇಚ್ಛವಾಗಿ ರಸಾಯನಿಕ ಕ್ರಿಮಿನಾಶಕಗಳ ಬಳಕೆಯಿಂದ ವಾತಾವರಣದಲ್ಲಿ ಜೈವಿಕ ಅಸಮತೋಲನ ಉಚಿಟಾಗಿದೆ. ಇದರಿಂದ ಹಾನಿಕಾರಕ ಕೀಟಗಳನ್ನು ಭಕ್ಷಿಸುವ ನೈಸರ್ಗಿಕ ಭಕ್ಷಕ ಕೀಟಗಳ ಸಂಖ್ಯೆ ಕಡಿಮೆಯಾಗಿದೆ. ಇದಲ್ಲದೆ ಕೀಟಗಳನ್ನು ಹತೋಟಿ ಮಾಡಲು ಅವಶ್ಯಕತೆಗಿಂತ ಹೆಚಿನ ಪ್ರಮಾಣದಲ್ಲಿ ರಸಾಯನಿಕ ಕ್ರಿಮಿನಾಶಕಗಳಿಗೆ ನಿರೋಧತೆಯನ್ನು ಬೆಳೆಸಿಕೊಂಡಿವೆ. ಇದರಿಂದ ಇಂದು ವಿವಿಧ ಬೆಳೆಗಳಲ್ಲಿ ಹೊಸ ಹೊಸ ಹಾನಿಕಾರಕ ಕೀಟಗಳು ಕಾಣಿಸಿಕೊಳ್ಳ ತೊಡಗಿವೆ. ಇತ್ತೀಚೆಗೆ ಬೀದರ ಜಿಲ್ಲೆಯ ಕಬ್ಬಿನಲ್ಲಿ ಬಿಳಿ ಉಣ್ಣೆ ಹೇನಿನ ಬಾಧೆಯಿಂದ ಕಬ್ಬಿನ ಉತ್ಪಾದಕತೆಯು

ಗಣನೀಯವಾಗಿ ಕುಗ್ಗಿರುವುದು ಹೊಡ ಕೀಟಗಳ ಹಾವಳಿಯ ಜೀವಂತ ಉದಾಹರಣೆಯಾಗಿದೆ.

ವಿದ್ಯುತ್‌ನ ಆಭಾವ :-

ಜಿಲ್ಲೆಯಲ್ಲಿ ಶೇ 40ರಷ್ಟು ನೀರಾವರಿ ಪ್ರದೇಶವಿದೆ, ಇದರಲ್ಲಿ ಹೆಚ್ಚಿನ ಪ್ರದೇಶಕ್ಕೆ ಬೋರವೆಲ್‌ಗಳ ಮುಖಾಂತರ ನೀರುಣಿಸಲಾಗುತ್ತದೆ. ಇದಕ್ಕೆ ಮುಖ್ಯವಾಗಿ ವಿದ್ಯುತನ ಅವಶ್ಯಕತೆ ಇರುತ್ತದೆ. ಆದರೆ ಇಂದು ರಾಜ್ಯದಲ್ಲಿ ವಿದ್ಯುತ್ತ್‌ನ ಅಭಾವ ಬಹಳವಾಗಿ ಕಾಣತೊಡಗಿದೆ. ಅಲ್ಲದೆ ಇದ್ದ ವಿದ್ಯುತ್ತಿನಲ್ಲಿ ಕೈಗಾರಿಕೆಗಳಿಗೆ ಬಹಳ ಪ್ರಮಾಣದಲ್ಲಿ ವಿದ್ಯುತ್‌ನ್ನು ಪೂರೈಸಲಾಗುತ್ತಿದೆ. ಇದರಿಂದ ನೀರಾವರಿಯನ್ನೇ ನಂಬಿರುವ ರೈತರಿಗೆ ಸಮಸ್ಯೆಯಾಗಿದೆ. ಈ ಸಮಸ್ಯೆ ತೀವ್ರತೆ ಬೇಸಿಗೆ ಕಾಲದಲ್ಲಿ ಇನ್ನು ಹೆಚ್ಚಿರುತ್ತದೆ.

ಕೃಷಿಕಾರ್ಮಿಕರ ವಲಸೆ :

ಅನಿಯಮಿತ ಹಾಗೂ ಅಕಾಲಿಕ ಮಳೆಯಿಂದ ಕೃಷಿಕಾರ್ಮಿಕರಿಗೆ ಹಳ್ಳಿಗಳಲ್ಲಿ ಕೆಲಸ ದೊರಕುತ್ತಿಲ್ಲ. ಹೀಗಾಗಿ ಕೃಷಿಕಾರ್ಮಿಕರು ಜೀವನೋಪಾಯದ ಸಲುವಾಗಿ ಪಟ್ಟಣ ಪ್ರದೇಶಗಳಿಗೆ ಕೆಲಸಗಳನ್ನು ಅರಸಿಕೊಂಡು ಹೋಗುತ್ತಿದ್ದಾರೆ. ಇದರಿಂದ ಕೆಲವು ಪ್ರಮುಖ ಕೃಷಿ ಚಟುವಟಿಕೆಗಳ ಸಮಯದಲ್ಲಿ ರೈತರು ಕಾರ್ಮಿಕರ ಅಭಾವವನ್ನು ಎದುರಿಸಬೇಕಾಗಿದೆ. ಅಲ್ಲದೇ ಕಾರ್ಮಿಕರು ಕೃಷಿಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಇತ್ತೀಚೆಗಂತೂ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವ ಕೃಷಿ ಕಾರ್ಮಿಕರ ಸಂಖ್ಯೆ ತೀರಾ ಹೆಚ್ಚಾಗಿದೆ.

ಕೃಷಿ ಉತ್ಪಾದನೆಯನ್ನು ಬೆಲೆ ಒದಗಿಸುವ ಉತ್ಪನ್ನಗಳಾಗಿ ಮಾರ್ಪಡಿಸುವುದು

ಕೆಲವೊಂದು ಸಮಯ ರೈತರು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆಯನ್ನು ಮಾಡಿರುತ್ತಾರೆ. ಅಂತಹ ಸಮಯದಲ್ಲಿ ಮಾರುಕಟ್ಟೆಯಲ್ಲಿ ತಮ್ಮ ಉತ್ಪಾದನೆಗೆ ತಕ್ಕ ಬೆಲೆ

ದೊರೆಯುವುದಿಲ್ಲ. ಆಗ ಗುಣ ಮಟ್ಟವು ಕಡಿಮೆಯಾಗದಿರುವಂಥ ಉತ್ಪನ್ನಗಳನ್ನ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಸಿಗುವವರೆಗೆ ದಾಸ್ತಾನು ಮಾಬಹುದು. ಆದರೆ ಬೇಗ ತಮ್ಮ ಗುಣಮಟ್ಟವನ್ನು ಕಳೆದು ಕೊಳ್ಳುವಂತಹ ಉತ್ಪಾದನೆ ಇದ್ದರೆ ರೈತರು ಅದನ್ನು ಅಗ್ಗದ ಬೆಲೆಗೆ ಮಾರಾಟ ಮಾಡಬೇಕಾಗುತ್ತದೆ. ಉದಾಹರಣೆಗೆ ಟೊಮ್ಯಾಟೊ ಹಾಗೂ ಈರುಳ್ಳಿ ಇಂತಹ ಸಮಯದಲ್ಲಿ ಬೇಗ ಕೆಡುವ ವಸ್ತುಗಳನ್ನು ಬಹಳ ದಿನಗಳವರೆಗೆ ಶೇಖರಿಸಿಡಬಹುದಾದ ಉತ್ಪನ್ನಗಳನ್ನಾಗಿ ಮಾರ್ಪಡಿಸುವುದು ಅವಶ್ಯಕವಾಗಿದೆ.

ಜೈವಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳಿಗೆ ಆದ್ಯತೆ ಕೊಡದಿರುವುದು :-

ಇಂದಿಗೂ ಹೆಚ್ಚಿನ ರೈತರು ರಾಸಾಯನಿಕ ಕ್ರಿಮಿನಾಶಕ ಹಾಗೂ ಗೊಬ್ಬರಗಳ ದುಷ್ಪರಿಣಾಮಗಳ ಅರಿವಿದ್ದರೂ, ಅವುಗಳ ಮೇಲೆಯೇ ಅವಲಂಬಿತರಾಗಿದ್ದಾರೆ. ವಾತಾವರಣದಲ್ಲಿ ಜೈವಿಕ ಸಮತೋಲನವನ್ನು ಕಾಪಾಡುವ ಹಾಗೂ ಪರಿಸರ ಸ್ನೇಹಿ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಬಳಕೆಯನ್ನು ಮಾಡುತ್ತಿಲ್ಲ.

ಅಧ್ಯಾಯ –5

ವೈಜ್ಞಾನಿಕತೆ

ಅಧ್ಯಾಯ-5
ವೈಜ್ಞಾನಿಕತೆ

ನೈಸರ್ಗಿಕ ಕೃಷಿ ವಿಧಾನವನ್ನು ಬೆಳಸಿಕೊಂಡು ಬಂದ ನಮ್ಮ ಜನಪದರು ಅದರೊಂದಿಗೆ ಅನೇಕ ರೂಢಿ, ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದರು. ಈ ಆಚರಣೆಗಳನ್ನು ನಾವು ಅವರಲ್ಲಿದ್ದ ಮೂಢನಂಬಿಕೆ, ಅಂಧಪ್ರದೇಶಗಳೆಂದು ಕರೆಯುತ್ತೇವೆ. ಆದರೆ ಅವು ಸಂದರ್ಭ, ಸನ್ನಿವೇಶಕ್ಕನುಗುಣವಾಗಿ ಪರಿಸರಕ್ಕನುಗುಣವಾಗಿ ಆಚರಿಸಲಾಗುತ್ತಿದೆಂಬುದು ಕಾಣಬಹುದಾಗಿದೆ. ಅಲ್ಲಿನ ಆಚರಣಾ ದೃಷ್ಟಿಕೋನ ವೈಜ್ಞಾನಿಕವಾಗಿದ್ದು. ನಂಬಿಕೆ ದೇವರ ಮೇಲಿನ ಭಕ್ತಿಯ ಹಿನ್ನಲೆಯನ್ನೊಳಗೊಂಡಿದ್ದವು.

ದಿನವಿಡೀ ಶ್ರಮ ಜೀವಿಗಳಾಗಿದ್ದ ರೈತಾಪಿ ವರ್ಗ. ಮನೆಯ ಸ್ವಚ್ಛತೆಯ ಕಡೆಗೆ. ಆರೋಗ್ಯದೆಡೆಗೆ ಲಕ್ಷ್ಯಕೊಡಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ, ಅಂದು ಗಡಿಯಾರದ ವ್ಯವಸ್ಥೆಯಾಗಲಿ ಹವಾ ಮುನ್ಸೂಚನಾ ಇಲಾಖೆಯಾಗಲಿ ಇರಲಿಲ್ಲ. ನೀರಾವರಿ ಪದ್ಧತಿಯ ಕೃಷಿ ಇರದೆ ಕೇವಲ ಮಳೆಯಾಧಾರಿತ ಬೇಸಾಯ ಪದ್ಧತಿಯ ಕೃಷಿ ಅವರು ಅವಲಂಬಿಸಿದರು. ಹಾಗಾಗಿ ಬೆಳೆಯ ಬೀಜವನ್ನು ಬಿತ್ತುವಾಗ ಅವರು ಮೋಡಗಳ ಚಲನೆಯ ಆಧಾರದ ಮೇಲೆ ಈಗ ಮಳೆ ಬೀಳಬಹುದೆಂದು ಊಹಿಸುತ್ತಿದ್ದರು. ಅವುಗಳಿಗೆ ಒಂದೊಂದು ಹೆಸರು ಕೊಡಲು ಹುಣ್ಣಿಮೆ ಅಮವಾಸ್ಯೆಯೆಂದು ವಿಭಾಗಿಕರಿಸಿ ಅವಕ್ಕೊಂದೊಂದು ಹೆಸರು ಕೊಡುತ್ತಾ ಬಂದರು. ಯಾವಾಗಲೂ ರೊಟ್ಟಿ ಬೇಳೆಯನ್ನೆ ಆಹಾರವಾಗಿ ಸೇವಿಸುತ್ತಿದ್ದು. ದೇಹಕ್ಕೆ ಯಾವುದೇ ಆಲಂಕಾರ ನೀಡದ ಕಾರಣ, ನಾಲಿಗೆಗೆ ರುಚಿ ನೀಡುವ ಮತ್ತು ದೇಹಕ್ಕೆ ಅದೊಂದು ದಿನವಾದರೂ ಅಲಂಕಾರ ಮಾಡುವ ನೆಪದಿಂದ ಹಬ್ಬ – ಹರಿದಿನಗಳನ್ನು ಮೂಡುವುದು ರೂಢಿಸಿಕೊಂಡು ಬಂದರು.

ಮತಾವರಣದಲ್ಲಿ ಪಲ್ಲಟವಾಗುವ ಹವಾಗುಣಕ್ಕೆ ತಕ್ಕಂತೆ ದೇಹಕ್ಕೆ ಆಹಾರ ಒದಗಿಸುವ ಕಾರಣದಿಂದ ಎಳ್ಳಮಾಸ್ಯೆ ಹಬ್ಬವನ್ನು ಮಾಡುತ್ತಾಬಂದರು. ಹೊಲದಲ್ಲಿ ಬೆಳೆದ ಆಹಾರವನ್ನು ಹಸಿ – ಬಿಸಿ ಇರುವಾಗಲೇ ಕೊಯ್ದು ತಂದು ತಿನ್ನುವುದರಿಂದ ದೇಹಕ್ಕೆ ಹಿತಕಾರಿಯಾಗುವುದಿಲ್ಲ. ಪೂರ್ಣ ಬೆಂದ ಆಹಾರವೇ ತಿನ್ನಬೇಕು ಹಸಿ – ಬಿಸಿ ಬೆಂದ ಅನ್ನ ತಿನ್ನುವುದರಿಂದ ಹೊಟ್ಟೆಯಲ್ಲಿ ನೋವಾಗುವಂತೆ ಅರ್ಧ ಮಾಗಿದ ಧಾನ್ಯ ತಿನ್ನುವುದರಿಂದ ಆಗುತ್ತದೆ. ಆದರೆ, ಬಡತನವನ್ನೇ ಜೀವನ ಆಗಿಸಿಕೊಂಡಿದ್ದ ರೈತರು ಹಸಿವಿನ ಹಾಹಾಕಾರದಿಂದ ಇನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಯದೆ ಇರುವ ಧಾನ್ಯವನ್ನು ಕೊಯ್ದು ತಿನ್ನುತ್ತಿದ್ದರು. ಆಗ ಇದನ್ನು ತಡೆಗಟ್ಟುವಲ್ಲಿ ದೇವರ ಹೆಸರನ್ನ ಬಳಸದರು. ಯಾಕೆಂದರೆ ಜನರಿಗೆ ದೇವರಲ್ಲಿ ಗೌರವ ಭಕ್ತಿ ಹೆಚ್ಚಾಗಿತ್ತು. ಹಾಗಾಗಿ ಅವರು ಗೋಧಿಯೇರಿಸುವ ಹಬ್ಬವೆಂದು ಫಬ್ರವರಿ – ಏಪ್ರೀಲ್‌ನಲ್ಲಿ ಆದಿನ ಅನೇಕ ರೀತಿಯ ವಿಧಿಗಳನ್ನು ನೇರವೇರಿಸುತ್ತಾರೆ.

ಇನ್ನು ದಸರಾ ಹಬ್ಬ ಈ ಹಬ್ಬವಂತೂ ಇಂದಿಗೂ ತುಂಬಾ ಮಡಿವಂತಿಕೆಯಿಂದ ಆಚರಿಸುತ್ತಾರೆ. ಈ ಆಚರಣೆಯಲ್ಲಿ ಎನಾದರೂ ಲೋಪಮಾಡಿದರೆ ಅಂಬಾ ಭವಾನಿ ಕಣ್ಣು ಕಳೆಯುತ್ತಾಳೆಂದು ಹೇಳುತ್ತಾರೆ ಇದು ನಮಗೆ ಮುಂಢನಂಬಿಕೆ ಸರಿ ಆದರೆ ಇದರೆ ಹಿಂದಿರುವ ಉದ್ದೇಶ ಹೆಚ್ಚು ಸಮರ್ಪಕವಾದದ್ದು. ಮನೆಯನ್ನು ದಿನಗುಡಿಸುತ್ತೇವೆ ಬಟ್ಟೆ ದಿನ ಒಗೆಯುತ್ತೇವೆ ಆದರೆ ಇಡೀ ಹಾಸಿಗೆ ಮನೆಯಲ್ಲಿರುವ ಬಟ್ಟೆ ದಿನ ಒಗೆಯುವುದಿಲ್ಲ. ಮನೆಗೆ ಪೇಂಟ್ ಮಾಡುವುದಿಲ್ಲ ಎಲ್ಲಾ ಸಾಮಾನುಗಳು ತೊಳೆಯುವುದಿಲ್ಲ ಹಾಗಾಗಿ ಅಲ್ಲಲ್ಲಿ ಜಾಡು ಹತ್ತಿರುತ್ತೆ ಅಲ್ಲಲ್ಲಿ ಸುಣ್ಣ ಉದುರಿ ಕರಿ ಗೋಡೆ ಕಾಣುತ್ತಿರುತ್ತದೆ ಗಡಿಗಿಯಲ್ಲಿ ಎನಾದರು ತುಂಬಿಟ್ಟಿದ್ದರೆ ಅದು ಅಲ್ಲಿಯೇ ನುಸಿ ತಿಂದಿರುತ್ತದೆ. ಅದಕ್ಕೆ ಆವೆಲ್ಲ ಎಲ್ಲರೂ ವರುಷಕ್ಕೆ ಒವ್ಮೆಯಾದರೂ ಶುಚ್ಚಿಗೊಳಿಸಲೇಬೇಕು ಇಲ್ಲವಾದರೆ ಮನೆಯ ವಾತಾವರಣದಿಂದ ರೋಗಗಳು ಹುಟ್ಟಬಹುದು. ಅದಕ್ಕಾಗಿ ಘಂಟೆ ಹಾಕಬೇಕು. ದೇವರನ್ನು ಕೂಡಿಸಬೇಕೆಂದು ಹೇಳಿ ಎಲ್ಲರೂ ಮನೆಗಲ್ಲ ಸುಣ್ಣ-ಬಣ್ಣ ಮಾಡಿ ಬಟ್ಟೆಗಳು ಒಗೆದು ಸಾಮಾನುಗಳನ್ನು ತೊಳೆದು ಮಡಿ ಮಾಡುತ್ತಾರೆ. ಮತ್ತು ಮುಂದೆ ಬರುವ ಹಂಗಾಮಿ ಬಿತ್ತನೆಗೆ ಹಾಕುವ ಬೀಜಗಳಲ್ಲಿ ಜಗಲಿಯ ಮೇಲೆ ಫಲವತ್ತಾದ ಮಣ್ಣಿನ ಹಾಕಿ ನೋಡಿ ಹೋಲದಲ್ಲಿ ಬಿತ್ತಲು ಅಣಿಯಾಗುತ್ತಾರೆ. ಅಂದರೆ ಇಂದಿನ ಶೈಕ್ಷಣಿಕ ನಾಗರೀಕ ವರ್ಗ ಮಾಡುವ ಯೋಚನೆ ಅವರು ಈ ರೀತಿಯಾಗಿ ಹಿಂದೆಯೇ ಬೆಳೆಸಿಕೊಂಡಿದ್ದಾರೆ. ಆದರೆ ಬೇರೆಯಾರನ್ನು 9 ದಿನ ಮುಟ್ಟಿಸಿಕೊಳ್ಳಬಾರದೆಂದು ಮಾತ್ರ ಅವರಲಿಲ ಆವೈಜ್ಞಾನಿಕತೆ.

ಸಂಕ್ರಾತಿ:-

ನವೆಂಬರ ನಿಂದ ಫೆಬ್ರವರಿ ವರೆಗೆ ಇರುವ ಚಳಿಗಾಲದಲ್ಲಿ ಅಚರಿಸಲ್ಪಡುವ ಹಬ್ಬವೇ ಈ ಸಂಕ್ರಾತಿ ಸೂರ್ಯ ತನ್ನ ದಿಕ್ಕನ್ನು ಬದಲಾಯಿಸುವ ದಿನದಂದು ಆಚರಿಸುತ್ತಾರೆ. ಚಳಿಗಾಲದಲ್ಲಿ ಚರ್ಮ ಸುಂಕು-ಸುಂಕ್ಕಾಗಿ ತನ್ನ ಕಾಂತಿಯನ್ನು ಕಳೆದುಕೊಳ್ಳುತ್ತದೆ. ಅದಕ್ಕಾಗಿ ತೇವಾಂಶದ ಅಗತ್ಯ ಹೆಚ್ಚಾಗಿರುತ್ತದೆ. ಅದಕ್ಕೆ ಎಣ್ಣೆ ಅಂಶದ ಅಗತ್ಯ ಅದಕ್ಕಿರುತ್ತದೆ. ಎನಾದರು ಎಣ್ಣೆ ಯಾವುದೂ ಅದಕ್ಕೆ ಹೊಲದಲ್ಲಿ ಬೆಳೆದ ಎಳ್ಳು, ಶೇಂಗಾಗಳನ್ನು ಬಳಸುತ್ತಾರೆ ಮೇಲೆ ದೇಹಕ್ಕೆ ಎಳ್ಳು ಕುಟ್ಟಿ ನೈಸರ್ಗಿಕವಾದ (ಯಾವದೇ ರಾಸಯನಿಕ ಮಿಶ್ರವಲ್ಲದ) ಎಣ್ಣೆ ಮೈಗೆಲ್ಲ ತಿಕ್ಕಿ ಸ್ಥಾನ ಮಾಡುತ್ತಾರೆ. ಎಳ್ಳು - ಶೇಂಗಾ ಹೋಳಿಗೆ ಮಾಡಿ & ಎಳ್ಳು ಸಕ್ಕರೆ ಉಣ್ಣುವುದರಿಂದ ತಿನ್ನುವುದರಿಂದ ದೇಹದ ಒಳಕ್ಕೂ ಎಣ್ಣೆ ಅಂಶ ಸೇರೆದಂತಾಗುತ್ತದೆ. ಅಲ್ಲದೆ ಸಂಕ್ರಾಂತಿಯಲ್ಲಿ 2 ದಿವಸ ಮನೆಯಿಂದ ಹೊರಹೋಗಬಾರದೆಂದು ಹೇಳುತ್ತಾರೆ. ಆದರೆ ಅದು ಅವರಲ್ಲಿರುವ ವಿಜ್ಞಾನ ಗುಣವಾಗಿದೆ ಯಾಕೆಂದರೆ ಎಣ್ಣೆಗೆ ಕ್ರೀಮಿಗಳು / ಧೂಳುಗಳು ಬಹುಬೇಗ ಆಕರ್ಷಿಸುತ್ತವೆ ಹಾಗಾಗಿ ಎಣ್ಣೆ ಸ್ಥಾನ ಮಾಡಿದ ದೇಹ ಹೊರಗೆ ಹೋಗುವುದರಿಂದ ಬೇಗ ರೋಗಗಳು ಕೈ ಬೀಸಿ ಕರೆದಂತೆ ಅದರಿಂದ ಸ್ವಲ್ಪ ಎಣ್ಣೆ ಆರುವವರೆಗೂ ಹೊರಗೆ

ಹೋಗಬಾರದೆಂಬುದೇ ಅವರ ಅನಿಸಿಕೆ ದಾನ ಧರ್ಮ ಗುಣ ಹೊಂದಿರುವ ಅವರು ಈ ದಿನ ಹಲವು ವಸ್ತುಗಳನ್ನು ದಾನ ನೀಡುತ್ತಾರೆ.

ಸೋಮುವಾರ:-

ಎಂಟು ದಿವಸಗಳಿಗೊಮ್ಮೆ ಮನೆಯನ್ನು ಸಾರಿಸಿ ಶುಚಿಮಾಡುವದರಿಂದ ಅದು ಚೆನ್ನಾಗಿಕಾಣುವುದರೊಂದಿಗೆ ದೇಹಕ್ಕೆ ಬೇಕಾದ ಚಳಿ - ಬಿಸಿಗಳ ಅಂಶಗಳನ್ನು ನೀಡುತ್ತಾಹೋಗುತ್ತದೆ ಅದಕ್ಕೆ ಕಡ್ಡಾಯವಾಗಿ ಎಲ್ಲರೂ ಶಿವನ ಹೆಸರಿನಲ್ಲಿ ಆ ದಿನ ಮನೆಯನ್ನು ಸಾರಿಸುವ ನೆಲವೇ ಇರಬೇಕು ಎನ್ನುತ್ತಾರೆ. ಯಾಕೆಂದರೆ ಹೆಂಡಿಯಲ್ಲಿ ಅಂಥ ಒಂದು ಶಕ್ತಿ ಇದೆ ಅದು ಪಾದದ ಮುಖಾಂತಾರ ಇಡೀ ದೇಹವನ್ನೆ ಉಷ್ಣ - ಶೀತದಿಂದ ಸಮತೋಲನವಾಗಿರಿಸುತ್ತದೆ.

ಏಕಾದಶಿ : -

ಯಾವುದೇ ಯಂತ್ರ ದುಡಿದು ದುಡಿದು ಒಮದು ದಿನ ಬಂದ್ ಆಗುತ್ತದೆ ಅದಕ್ಕೆ ಅದು ಹಾಗೇ ದೇಹವೆಂಬ ದೇಹ ಕೆಡಬಾರದೆಂದು ತಿಳಿದು ವಾರಕ್ಕೊವ್ಮೆಯಾದರು ತಿಂಗಳಿಗೊಮ್ಮೆ
ಅದಕ್ಕೆ ರೆಸ್ಟ್ ಕೊಡುತ್ತಾರೆ ಸುಮ್ಮನೆ ಉಪವಾಸ ಇರು ಎಂದರೆ ಯಾರ ನಾಲಿಗೆ ಹೋಟ್ಟೆನು ಸುಮ್ಮನಿರುವುದಿಲ್ಲ ಅದಕ್ಕೆ ದೇವರು ಹೆಸರಿನಲ್ಲಿ ಉಪವಾಸವೆಂದು ಇರುತ್ತಾರೆ. ಅದರೆ ದೇಹ ದಿನ ತಿಂದು ತಿಂದು ಒಂದು ದಿನ ಎನು ತಿನ್ನದಿದ್ದರೆ ಕೆಲಸ ಮಾಡಲಾಗದೇ ನಿತ್ರಾಣವಾಗತ್ತದೆಂದು ತಿಳಿದು ಶಕ್ತಿಯಾಗಿ ಹಾಲು - ಹಣ್ಣನ್ನು ನೀಡುತ್ತಾರೆ. ಇದನ್ನೆ ಈಗ ಡಾಕ್ಟರು ಸಲಹೆ ನೀಡುತ್ತಾರೆ ಅಂದರೆ old is gold ಎನ್ನುವಂತೆ ಜನಪದರ ಬೆಳೆಸಿಕೊಂಡು ಬಂದಿದ್ದನ್ನೆ ಇಂದು ವಿಜ್ಞಾನಿಗಳು ಮಾಡುತ್ತಿದ್ದಾರೆ.

ಹೀಗೆ ಒಂದಲ್ಲ ಎರಡಲ್ಲ ಹಲವು ವೈಜ್ಞಾನಿಕ ಕ್ರಿಯೆಗಳನ್ನು ಜನಪದರ ಒಂದೊಂದು ಹಬ್ಬದ ಹಿನ್ನಲೆಯಲ್ಲಿ ಬೆಳಸಿಕೋಂಡು ಬಂದಿದ್ದಾರೆ ಅದರಲ್ಲಿ ಎಳ್ಳಮಾಸಿಯಾ ಒಂದು ದೇಹಕ್ಕೆ ಬೇಕಾಗುವ ಎಲ್ಲಾ ರೀತಿಯ ಪೌಷ್ಠಿಕಾಂಶವುಳ್ಳ ಎಲ್ಲಾ ತರಹದ ಅಡಿಗೆಗಳನ್ನು ಅದು ಹೊಲದಲ್ಲೆ ಬೆಳೆದ ಬೆಳೆಗಳಿದಂದ ಆಹಾರವನ್ನು ತಯ್ಯಾರಿಸಿ ಆ ದಿನ ಊಟವನ್ನು ಮಾಡುತ್ತರೆ ಹೀಗೆ ಅವರು ಬಹು ಹಿಂದೆಯೇ ವೈದ್ಯ ವಿದ್ಯೆ ಕುಶಲಕಳೆ ವೈಜ್ಞಾನಿಕತೆ ತಾಂತ್ರಿಕತೆ ಎಲ್ಲವೂ ತಮ್ಮದೇ ಆದ ರೀತಿಯಲ್ಲಿ ಬೆಳೆಸಿಕೊಂಡಿದ್ದಾರೆ. ಇಂದು ಹಲವು ವಿಷಯಗಳಲ್ಲಿ ನಾವು ಅವರನ್ನೆ ಅವಲಂವಿಸಿದ್ದೇವೆ. ಉದಾಹರಣೆಗೆ:- ಆರ್ಯುವೇದಿಕ್, ಇದು ಹಿಂದೆ ಗಿಡಮಾಲಿಕೆ ಅರೆದು ಔಷಧ ತಯ್ಯಾರಿಸುತ್ತಿದ್ದರು ಅದರ ಒಂದು ಬದಲಾದ ಮಾರಿಯೇ ಈದಾಗಿದೆ.

ಕೆಲವೊಂದೂ ಮೂಢನಂಬಿಕೆ ಅಂಶಗಳು ಅವರು ಆಚರಣೆಯಲ್ಲಿ ಇದ್ದರು ಅದರಲ್ಲಿಯೇ ವೈಜ್ಞಾನಿಕ ಅಂಶಗಳು ಅಡಗಿವೆ ಎಂಬುವದ್ದನ್ನು ಈ ಮೇಲಿನ ಹಬ್ಬಗಳ ಹಿನ್ನಲೆಯಲ್ಲಿ ನೋಡಿದ್ದೇವೆ ಇದೇ ರೀತಿ ಎಲ್ಲಾ ಆಚರಣೆಗಳಲ್ಲಿ ಇವೆ.

ಎಳ್ಳಮಾಸ

ಎಳ್ಳಮಾಸೆ ಈ ದಿನ ರೈತರ ಹಬ್ಬಗಳಲ್ಲಿ ಸೇರಿ ಒಂದಾಗಿರುವದು ಇದನ್ನು ಅವರು ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸುತ್ತಾರೆ. ಇಲ್ಲಿ ಎಲ್ಲವೂ ಕೇವಲ ಹೊಲದಲ್ಲಿ ಬೆಳೆದ ಆಹಾರ ಧಾನ್ಯಗಳಿಂದ ಮಾತ್ರ ಅಡಿಗೆಯನ್ನು ತಯ್ಯಾರಿಸುತ್ತಾರೆ. ಇದರ ಅಂದಿರುವ ಅವರ ಉದ್ದೇಶವೆಂದರೆ ದೇಹಕ್ಕೆ ದಿನ ರೊಟ್ಟಿ ಬೇಳೆಯನ್ನೆ ಹಾಕಿ ಹಾಕಿ ದೇಹದ ಪುಷ್ಠಿ ಕಡಿಮೆಯಾಗಿರುತ್ತದೆ. ಅದಕ್ಕೆ ಒಮ್ಮೆಯಾದರೂ Vitamin iron calcium ಗಳನ್ನ ನೀಡುವ ಉದ್ದೇಶದಿಂದ ಅವರು ವಿವಿಧ ರೀತಿಯ ಭಕ್ಷ್ಯ ಭೋಜಗಳನ್ನು ತಯ್ಯಾರಿಸಿ ತಿನ್ನುತ್ತಾರೆ. ಎಂಥ ಅಡಿಗೆ ಊಟ ಮಾಡುತ್ತೇವೆ ಎನ್ನುವುದಕ್ಕಿಂತ ಹೇಗೆ ಊಟ ಮಾಡುತ್ತೇವೆ ಎನ್ನುವುದು ತುಂಬಾ ಮಹತ್ವದ್ದಾಗಿರುತ್ತದೆ. ಅದಕ್ಕಾಗಿ ಎಲ್ಲಾ ರೀತಿಯ ಭಕ್ಷ್ಯಗಳನ್ನು ಮಾಡಿ ನಿಸರ್ಗದ ಮಡಿಲಾಗಿರುವ ಹೊಲದಲ್ಲಿ ಕೂತು ತಿನ್ನುತ್ತಿದ್ದರು.

ಹೊಲಕ್ಕೆ ಮುಂಜಾನೆದ್ದು ಮನೆಯವರೆಲ್ಲ ಸಂಭ್ರಮದಿಂದ ರೆಡಿಯಾಗಿ ಬಂದು ಬಳಗದವರನ್ನ ಕರೆದುಕೊಂಡು ಮನೆಯಲ್ಲಿ ತಯ್ಯಾರಿಸಿದ ಭಕ್ಷ್ಯಗಳನ್ನೆಲ್ಲ ಬಂಡಿಯಲ್ಲಿ ಇಟ್ಟುಕೊಂಡು ಹೋಗುತ್ತಾರೆ. ಯಾವುದೇ ವಿಷಯವಾದರು ಅವರು ಮೊದಲು ದೇವರಿಗೆ ಪೂಜೆ ಸಲ್ಲಿಸಿ, ನೈವೆದ್ಯವನ್ನು ಅರ್ಪಿಸಿ ತಿನ್ನುತ್ತಾರೆ. ಅದಕ್ಕಾಗಿ ಆಶ್ರಯಕ್ಕೋಸ್ಕರ ಗುಡಿಸಲು ಒಂದನ್ನು ನಿರ್ಮಿಸಿ ಅಲ್ಲಿಯೇ ಮಣ್ಣಿನ ಮುದ್ದೆಗಳಿಂದ ಪಾಂಡವರೆಂದು ಮಾಡಿ ಪೂಜಿಸಿ ಅಲ್ಲಿಯೇ ಅಡಿಗೆಗಳನ್ನೆಲ್ಲ ಇಟ್ಟು ನಂತರ ಎಲ್ಲರು ಕೂತು ಊಟ ಮಾಡುತ್ತಾರೆ. ಆದಿನ ದೇಹಕ್ಕೆ ಅವಶ್ಯವಾದ ಅಂಶಗಳಲ್ಲಿ ಒಂದಾದ ಜೇನನ್ನು ಹೊಡೆದು ತಿನ್ನುತ್ತಾರೆ. ತೆಂಗನ್ನ ತಿನ್ನುತ್ತಾರೆ.

ಮಕ್ಕಳು ಹಿರಿಯರು ಎಲ್ಲರೂ ಸೇರಿ ಸಂಭ್ರಮದಿಂದ ಹಾಡಿ ಕುಣಿಯುತ್ತಾರೆ. ಜೋಕಾಲಿ ಹಾಕಿ ಆಡುತ್ತಾರೆ. ಇದರಿಂದ ಇಡೀ ದೇಹಕ್ಕೆ ವಿಶಿಷ್ಟವಾದ ವಿಧ ವಿಧದ ಆಹಾರದ ಜೊತೆಗೆ ಒಳ್ಳೆಗಾಳಿ Exercise ಮನೋರಂಜನೆ ಎಲ್ಲವೂ ದೊರಕುತ್ತದೆ. ಇಂದಿನ ಸಿಟಿ ಜೀವನದಲ್ಲಿ ಎಲ್ಲವೂ ವ್ಯವಹಾರಿಕವಾಗಿದ್ದು, ಯಂತ್ರಗಳ ಸಹಾಯದಿಂದಲೇ ಬದುಕುತ್ತಿದ್ದಾರೆ. ಅದರಿಂದ ದೇಹದಲ್ಲಿ ಕೊಬ್ಬು ಬೆಳೆಯುತ್ತದೆ. Fast Food ಗಳನ್ನ ವಾಹನ ಕಾರ್ಖಾನೆಗಳ ಹೊಗೆಯನ್ನೆ ಸೇವಿಸುತ್ತೇವೆ. ಇದರಿಂದ

ಆರೋಗ್ಯ ಹದಗೆಡುತ್ತದೆ. ಈ ಸನ್ನಿವೇಶದಲ್ಲಿ ನಮಗೆ ಇಂಥ ಹಬ್ಬಗಳ ಆಚರಣೆ ಬಹು ಮುಖ್ಯವಗಿರುತ್ತದೆ.

ಯುಗಾದಿ :–

ವರ್ಷಕ್ಕೊಮ್ಮೆ ಮಾನ್ಸೂನ್‌ಗಳು ಕಾಲಮಾನಗಳಲು ನೈಸರ್ಗಿಕವಾಗಿ ಬದಲಾಗುತ್ತಾ ಹೋಗುತ್ತವೆ ಅದಕ್ಕೆ ಅನುಗುಣವಾಗಿ ಮನುಷ್ಯನ ಜೀವನದಲ್ಲೂ ಬದಲಾವಣೆಗಳು ಕಾಣುತ್ತಾ ಹೋಗುತ್ತವೆ ಅದರಿಂದ ರೈತನ ಕೃಷಿಯ ಜೀವನದ ಮೇಲೂ ಪರಿಣಾಮ ಬೀರುತ್ತವೆ. ಮಳೆಗಾಲ, ಚಳಿಗಾಲ, ಬೇಸಿಗೆ ಕಾಲಕ್ಕೆ ತಕ್ಕಂತೆ ಬದಲಾಗುತ್ತವೆ. ಹಾಗೇ ಜೀವನದಲ್ಲಿ ಲಾಭ–ನಷ್ಟಗಳು ಸಹಜವಾಗಿರುವಂತೆ ಸುಖ–ದುಖಗಳು ಬರುತ್ತಾ ಹೋಗುತ್ತವೆ. ಅದಕ್ಕೆ ಆ ದಿನ ರೈತರು ಕಷ್ಟ ಬಂದರು ಅದನ್ನ ಎದುರಿಸುವ ಶಕ್ತಿ ತನಗೆ ಬರಲೆಂಬ ಉದ್ದೇಶದಿಂದ ಕಹಿಗೆ ಪ್ರತೀಕವಾದ ಬೇವನ್ನು ಜೊತೆಗೆ ಜೀವನದಲ್ಲಿ ರಾತ್ರಿ ಕಳೆದ ಮೇಲೆ ಹಗಲುಗಳು ಸಹಜ ವಾಗಿರುವಂತೆ ದುಃಖಗಳು ಕಳೇದ ಮೇಲೆ ಸುಖ ಬರಲೆಂದು ಬಯಸಿ ಸಿಹಿಯನ್ನು ತಿನ್ನುತ್ತಾರೆ. ಸಿಹಿ ತಿನ್ನುವುದರಿಮದ ಮನುಷ್ಯನ ಮನಸ್ಸು ಶಾಂತವಾಗುತ್ತದೆಂಬುದು ನಮಗೆ ತಿಳಿದ ವಿಷಯವೇ ಆಗಿದೆ. ಅದರಿಮದ ದೇಹಕ್ಕೆ ಶಕ್ತಿ ಮತ್ತು ಸಹನೆ ಗುಣ ನೀಡುವ ಅಂಶಗಳನ್ನು ಸ್ವೀಕರಿಸುತ್ತಾರೆ. ಅಲ್ಲದೇ ಅಂದು ಬೆಳೆಯ ಬರುವಿಕೆಗೆ ಹರ್ಷವನ್ನು ವ್ಯಕ್ತಪಡಿಸುತ್ತಾರೆ.

ಪಂಚಮಿ :–

ಜೋಳದಿಂದ ಏನೆಲ್ಲ ತಯ್ಯಾರಿಸ ಬಹುದೆಂಬುದು ನಾವು ಈ ಹಬ್ಬದ ವಿಶೇಷವಾಗಿರುವ ಜೋಳದ ಅಳ್ಳು ಮತ್ತು ಅಳ್ಳಿಟ್ಟುಗಳಿಂದ ತಿಳಿಯಬಹುದು ಅಲ್ಲದೇ ಪಂಚಮಿ July ತಿಂಗಳಲಿ ಬರುತ್ತಿರುವುದರಿಂದ ಆಗ ಮಳೆಗಾಲ ಪ್ರಾರಂಭವಾಗಿರುತ್ತದೆ. ಮಳೆಗಾಲದಲ್ಲಿ ದೇಹ ಹೆಚ್ಚು ತೇವವಾಗಿದ್ದು ಅಲ್ಲಿ ಬಿಸಿ ಶಕ್ತಿಯ ಅಗತ್ಯತೆಯಿದ್ದು ಏನೆಲ್ಲ ತಿನ್ನಬೇಕೆಂಬ ಹಂಬಲವಿರುತ್ತದೆ. ಅದಕ್ಕೆ ಆ ಸಂದರ್ಭದಲ್ಲಿ ಹೆಚ್ಚಿನ ವೆಚ್ಚವಾಗಲಿ Ready Made Food ಗಳಾಗಲಿ ಸಿಗುತ್ತಿರಲಿಲ್ಲ ಅದಕ್ಕೆ ಜೋಳದಿಂದ ಬರಿ ರೊಟ್ಟಿ ತಿಂದು ತಿಂದು ಸಾಕಾಗಿರುವುದರಿಂದ ಅದರಿಂದ ವಿಶಿಷ್ಟವಾದ ಅಳ್ಳನ್ನು ಮನೆಯಲ್ಲಿಯೇ ಹುರಿದು ಅದರಿಂದ ರುಚಿಯಾದ ಸಕ್ಕರೆ ಸೇರಿಸಿ ಅಳ್ಳಿಟ್ಟನ್ನು ಮಾಡಿ ತಿನ್ನುತ್ತಾರೆ ಈಗ ಅದನ್ನು ಜನ ಹೆಚ್ಚಾಗಿ ಮಾಡುತ್ತಿಲ್ಲ ಅದಕ್ಕೆ ಪರ್ಯಾಯವಾಗಿ ಇತರ ತಿಂಡಿ ತಂದು ತಿನ್ನುತ್ತಾರೆ.

ಕಾರುಣಿ :–

ಎತ್ತು, ಎಮ್ಮೆ, ದನ ಕರುಗಳ, ರೈತನ ಜೀವನದಲ್ಲಿ ತುಂಬ ಪ್ರಮುಖವಾಗಿದ್ದವು, ಅದಕ್ಕೆ ಅವುಗಳಿಗೂ ಮನಯಷ್ಯರಂತೆ ಹಲವು ರೋಗಗಳು ಬರುತ್ತಿದ್ದರಿಂದ ಇಂದಿನಂತೆ ಪಶುವೈದ್ಯಕೀಯ ಆಸ್ಪತ್ರೆಗಳು ಅಂದು ಇರಲಿಲ್ಲ ಅದಕ್ಕೆ ಅವುಗಳಿಗೆ ರೋಗ ಬಂದರು ಮನುಷ್ಯರಂತೆ ಗಿಡಮೂಲಿಕೆಗಳಿಂದ ತಯ್ಯಾರಿಸಿದ ಔಷಧಿಗಳನ್ನೆ ನೀಡುತ್ತಿದ್ದರು ಆದರೆ ಪ್ರಾಣಿಗಳಿಗೆ ಮನುಷ್ಯರಂತೆ ಮಾತನಾಡುವ ಶಕ್ತಿ ಇಲ್ಲವಾದ್ದರಿಂದ ಅವುಗಳಿಗೆ ಬಂದಿರುವ ರೋಗದ ಬಗ್ಗೆ ತಿಳಿದುಕೊಳ್ಳವಷ್ಟರಲ್ಲೆ ಕೆಲ ಪ್ರಾಣಿಗಳು ಸತ್ತು ಹೋಗುತ್ತಿದ್ದರಿಂದ ರೋಗಗಳು ಬರುವ ಮೊದಲೇ ಮುನ್ನೆಚ್ಚರಿಕೆ ಕ್ರಮವಾಗಿ ಅವುಗಳಿಗೆ ಚುಟಿಕೆಗಳನ್ನು ಕಬ್ಬಿಣದಿಂದ ಹಾಕುತ್ತಿದ್ದರು ಇದರಿಂದ ಪ್ರಾಣಿಗಳಿಗೆ ರೋಗಗಳು ಬರುತ್ತಿರಲಿಲ್ಲ.

ಅಲ್ಲದೆ ಇದೇ ದಿನ ಪ್ರಾಣಿಗಳನ್ನ ಮದುಮಕ್ಕಳಂತೆ ಶೃಂಗಾರ ಮಾಡಿ ಮೆರವಣಿಗೆ ಮಾಡುತ್ತಾರೆ. ಅಲ್ಲಿ ಯಾರ ಎತ್ತುಗಳು, ದನಕರುಗಳು ಹೆಚ್ಚು ಬಲಶಾಲಿಯಾಗಿವೆ ಎಂಬುದು ಗೊತ್ತಾಗುತಿತ್ತು.

ಲಕ್ಷ್ಮೀ ಕೂರಿಸುವುದು:–

ತರಕಾರಿ ತಿನ್ನುವುದು ದೇಹಕ್ಕೆ ಹೆಚ್ಚು ಪುಷ್ಠಿದಾಯಕ ಅದಕ್ಕೆ ಲಕ್ಷ್ಮೀ ಕೂರಿಸುವ ನೇಪದಲ್ಲಿ ಎಲ್ಲಾ ಬಗೆಯ ಹಸಿರು ತರಕಾರಿಗಳಿಂದ ಅಡಿಗೆ ತಯ್ಯಾರಿಸಿ ಊಟಮಾಡುತ್ತಾರೆ. ಮೂಗಿಗೆ ಬಗೆ ಬಗೆಯ ವಾಸನೆ, ಕಣ್ಣಿಗೆ ಸೌಂದರ್ಯಗಳನ್ನು ಉಣ ಬಡಿಸಲು ಹಲವು ಬಗೆಯ ಹೂಗಳನ್ನು ತಂದು ಪೂಜಿಸುತ್ತಾರೆ. ಮನುಷ್ಯ ಹೆಚ್ಚು ಮಾತಾಡುವುದರಿಂದ ಆತನ ರಕ್ತ ಸುಟ್ಟು ಹೋಗುತ್ತದೆ ಅದಕ್ಕಾಗಿ ದೇಹಕ್ಕೆ ಆಹಾರದ ಉಪವಾಸ ಇರುವಂತೆ ಅಂದು ಮಾತಿನ ಉಪವಾಸ ಇರುತ್ತಾರೆ. ಇದರಿಂದ ಕಣ್ಮನಗಳಿಗೂ ದೇಹಕ್ಕೂ ಶಾಂತಿ, ಪುಷ್ಠಿಗಳು ಸಿಗುತ್ತವೆ. ಪೂಜೆ ಧ್ಯಾನದ ಒಂದು ಅಂಗವಾಗಿರುವುದರಿಂದ ಇಂಥ ಪೂಜೆ ಪುನಸ್ಕಾರಗಳ ಅನಿವಾರ್ಯತೆಯಿದೆ.

ಅಧ್ಯಾಯ –6

ಸಮಾರೋಪ

ಸಮಾರೋಪ

ಬೀದರ ಜಿಲ್ಲೆ ಕರ್ನಾಟಕದ ಉತ್ತರ ತುದಿಯಲ್ಲಿರುವ ಬೀದರ ಜಿಲ್ಲೆಯ ಪೂರ್ವಕ್ಕೆ ಆಂಧ್ರಪ್ರದೇಶದ ಉತ್ತರ ಮತ್ತು ಪಶ್ಚಿಮಕ್ಕೆಂದು ಮಹಾರಾಷ್ಟ್ರದ ಜಿಲ್ಲೆಗಳು ಸುತ್ತುವರೆದಿದೆ. ಫಲವತ್ತಾದ ಕೆಂಪು ಮುಸಾರಿ ಹಾಗು ಕಪ್ಪು ಎರೆಮಣ್ಣಿನ ನೆಲ:ಜಿಲ್ಲೆಯೂದಕ್ಕೂ ಉಕ್ಕಿ ಹರಿಯುವ ಝುರಿ ಜಲ: ಹಿತವಾಗಿ ತಂಪಾಗಿ ಸೂಸುವ ಹವೆ ಬೀದರ ಜಿಲ್ಲೆಯಲ್ಲಿ ಆರೋಗ್ಯಕರ ವಾತಾವರಣ ನಿರ್ಮಾಣಕ್ಕೆ ಕಾರಣವಾಗಿದೆ.

ಬೀದರ ಪದವನ್ನು ಪಂಡಿತರು ವಿದರ್ಭ, ವಿದುರ ಬಿದರಿ ಮುಂತಾದ ರೂಪಗಳಿಂದ ನಿರ್ದಿಷ್ಟತೆ ಮಾಡುವುದುಂಟು. ಮಹಾಭಾರತ ವಿದರ್ಭ ವಿದುರ ನಗರಗಳಿಂದ ಬೀದರ ನಗರವಾಯಿತೆಂದು ನಳಂದಯಂತಿಯರ ಪ್ರಾಣಯೋದ್ದನ ವಿದ್ಯೆಂದು ಅನೇಕರು ಊಹಿಸಿದ್ದಾರೆ. ಬಿದಿರು ಬೆಳೆಯುವ ಪ್ರದೇಶ ಇದಾಗಿತೆಂದು ಆದರಿಂದ ಬೀದರ ಬಂದಿದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಬೀದರ ಕೋಟ್ಟೆ ಕಲ್ಬುರ್ಗಿಯಲ್ಲಿದ್ದು ಬಹುಮನಿ ಅರಸರಲ್ಲಿ ಅಹ್ಮದ ಶಾಹ್ ಬೀದರದ ಹವಾಗುಣಕ್ಕೆ ಮನಸೋತು ಕ್ರಿ.ಶ.1428 ರಲ್ಲಿ ಕಲ್ಬುರ್ಗಿಯಿಂದ ಬೀದರಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದ.

ಬೀದರದ ಹೊರವಲಯದಲ್ಲಿ ಬೀದರ ಶಾಹಿ ಅರಸರ ಇನ್ನೀತರ ಅನೇಕ ಸಮಾಧಿಗಳಿವೆ. ಬೀದರ ಹೊರ ಭಾಗದಲ್ಲಿ ಶೈವರ ಪಾಪನಾಶ ಕ್ಷೇತ್ರ , ವೈಷ್ಣವರ ನರಸಿಂಹ ಝುರ ಝುರಣಿ ದೇಗುಲ ಶಿಖರ್ ಗುರುದ್ವಾರ, ಜೈನರ ಜನಮಂದಿರ, ಕ್ರಿಸ್ತರ ಅಧುನಿಕ ಚರ್ಚ ಮುಂತಾದವು ಗಮನಾರ್ಹವಾದುವು.

ಬೀದರ ಜಿಲ್ಲೆಯ ಅಧ್ಯಾತ್ಮಿಕ ಪರಿಸರದಿಂದ ಶ್ರೀಮಂತವಾದುದ್ದು ಧರ್ಮದ ಧ್ವಜ ಪ್ರಾಚೀನ ಕಾಲದಿಂದ ಪ್ರಸ್ತುತ ಕಾಲಮಾನದವರೆಗೂ ನಭಸ್ಥಳಕ್ಕೆ ಹಾರುತ್ತವೆ ಇದೆ. ಅಯಾ ಶತಮಾನಗಳಲ್ಲಿ ಮಹಾನ್ ಸಿದ್ದ ಪುರುಷರು ಬೀದರಿನ ಕೆಂಪು ಮಣ್ಣಿನಲ್ಲಿ ಜನಿಸಿ ಧರ್ಮದ ಜ್ಯೋತಿಯನ್ನು ಅವರಲ್ಲಿ 18–19 ನೇ ಶತಮಾನದ ಆದಿಕಾಲದಲ್ಲಿ ಹುಟ್ಟಿ ಕನ್ನಡ ನಾಡಿಗೆ ಕ್ಭರ್ತಿತಂದವರು ಚಳಕಾಪೂರದ ಶ್ರೀಸಿದ್ಧರೂಢರು.

ಹೆಣ್ಣು ಹೊನ್ನು, ಮಣ್ಣುಗಳಿಗೆ ಆಸೆ ಪಡದೇ, ಸಮಾಜ, ಸಂಘಗಳಿಗೆ ಕಣ್ಣು ತೆರೆದು ನೋಡದೇ, ಸದಾ ಒಂಟಿತನದ ಜೀವನ ಸಾಗಿಸಿ ತಮ್ಮ ಅಮೂಲ್ಯ ಸಮಯವನ್ನು ಜಪ, ತಪ,ಯೋಗ ಸಾಧನೆ, ಆನುಷ್ಠಾನಗಳಿಗೆ ಮೀಸಲಾಗಿಟ್ಟವರು ಶ್ರೀ ಮಾಣಿಕೇಶ್ವರರು. ಇವರು ಬೀದರ ತಾಲೂಕಿನ ಯರನಳ್ಳಿ ಗ್ರಾಮದ ಆಗರ್ಭ ಶ್ರೀಮಂತರಾದ ವೀರಸಂಗಮ್ಮ ಮತ್ತು ವೀರಸಂಗಪ್ಪ ಎಂಬ ದಂಪತಿಗಳ ಆರನೆಯ

ಪುತ್ರರಾಗಿ ಸುಮಾರು 1901ರಲ್ಲಿ ಜನಿಸಿದರು. ಸಮಾಜದಲ್ಲಿ ಹಬ್ಬಿರುವ ಅನ್ಯಾಯ, ಅತ್ಯಾಚಾರ, ಮೋಸ, ವಂಚನೆ, ದರೊಡೆ-ಕೊಲೆ-ಸುಲಿಗೆಗಳನ್ನು, ಶ್ರೀಗಳು ಪ್ರತ್ಯಕ್ಷ ಕಂಡರು. ಇಂತಹ ಜಗದ ಜಂಜಾಟದಲ್ಲಿ ಬಾಲವುದು ವ್ಯರ್ಥವೆಂದು ಬಾಲ್ಯದಲ್ಲಿಯೇ ನಿರ್ಧರಿಸಿದರು. ರಾಜ್ಯ ಮನೆತನವನ್ನು ತ್ಯಾಗ ಮಾಡಿ ಹರಿಯುವ ಮಾಂಜ್ರಾ ನದಿಯಲ್ಲಿ ಬಿದ್ದು ಯಾರ ಸಹಾಯವಿಲ್ಲದೇ ಆಚೆ ದಡವನ್ನು ಸೇರಿದ ಮಹಾತ್ಮ ಪುರುಷರಿವರು.

ಜನಪದ ಕಲೆಗಳು ಹೊಂದಿದಂತೆ ಜಗತ್ ಪ್ರಸಿದ್ಧವಾದ ಬಿದರಿ ತಿಯನ್ನು ಹೊಂದಿದೆ. ಅದಕಾಗಿಯೇ ಇದಕ್ಕೆ ಬೀದರಿನ ಹೆಸರಂಟಿದೆ. ಆಂಧ್ರದಲ್ಲಿ ಪ್ರಚಲಿತವಿರುವ ಚಿಟಿಕಿ ಭಜನೆಯ ಬಿದರ ತಾಲುಕಿನ ಬರೂರು ಗ್ರಾಮದ ಶ್ರಿ ನಾರಾಯಣರೆಡ್ಡಿಯವರ ಮೇಳದವರು ರೂಢಿಸಿಕೊಂಡಿದ್ದಾರೆ.

ಬೀದರ ಜಿಲ್ಲೆಯ ಕಲೆಗೆ ತವರಾಗಿದ್ದಂತೆ ಜನಪದ ಸಾಹಿತ್ಯದ ಭಂಡಾರವಾಗಿದೆ. ಜಾನಪದ ಸಾಹಿತ್ಯ ಪ್ರಕರಗಳಾದ ಗೀತೆ, ಕಥೆ, ಗದೆ, ಒಗಟು, ಒಡುಪು ಮುಂತಾದವುಗಳೆಲ್ಲು ಬೀದರ ಜಿಲ್ಲೆಯಲ್ಲಿ ಲಾಭವಿದೆ.

ಬೀದರ ಜಿಲ್ಲೆಯಾದ್ದಂತ ಲೆಕ್ಕಕ್ಕೆ ಸಿಗದಷ್ಟು ಕೋಲಾಟದ ತಂಡಗಳಿವೆ. ನೌಬಾದ, ಬೀದರ, ಸಂತಪೂರ ಮುಂತಾದ ಕೋಲಾಟದ ತಂಡದವರು ಮೈಸೂರಿನ ದಸರಾ ಉತ್ಸವದಲ್ಲಿ ಪ್ರದರ್ಶನ ನೀಡಿ ಬಂದಿದ್ದಾರೆ.

ಕರ್ನಾಟಕ ಸಂಸ್ಕೃತಿ ಜನಜೀವನ ಹಾಗೂ ಸಂಪ್ರಾದಾಯಗಳನ್ನು ಗಮನಿಸಿದರೆ ಸಾವಿರಾರು ವರ್ಷಗಳಿಂದ ಅವರ ದಿನ ನಿತ್ಯದ ಬದುಕಿನಲ್ಲಿ ಕೃಷಿ ಆಚರಣೆಗಳು ಹಾಸುಹೊಕ್ಕಾಗಿರುವುದು ಅರಿವಾಗುತ್ತದೆ. ಇವು ನಮ್ಮ ಒಕ್ಕಲುಮಕ್ಕಳ ವೈವಿದ್ಯಪೂರ್ಣ ಬದುಕಿನ ದರ್ಶನ ಮಾಡಿಸುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಆಚರಣೆ ವಿಧಾನಗಳಲ್ಲಿ ಬದಲಾವಣೆಯಿರಬಹುದು, ಆದರೆ ಉದ್ದೇಶ ಮಾತ್ರ ಒಂದೇ. ನಮ್ಮ ರಾಜ್ಯ ವೈವಿದ್ಯಮಯ ಭೂಪ್ರದೇಶವನ್ನು ಹೊಂದಿದೆ. ಅದಕ್ಕನುಗುಣವಾಗಿಯೇ ಕೃಷಿ ಪದ್ಧತಿಗೂ ಸಹ ರೂಪುಗೊಂಡಿವೆ. ಒಂದೊಂದು ಪ್ರದೇಶಕ್ಕೂ ವಿಭಿನ್ನ ಹವಮಾನ, ಮಳೆಗಾಲ, ವಿಭಿನ್ನ ಬೆಳೆಗಳು ಮತ್ತು ಬೆಳೆ ಪದ್ಧತಿಗಳಿದ್ದು ಬೆಳೆ ಇಡುವ ಕಾಲಮಾನದಲ್ಲೂ ಸಹ ಭಿನ್ನತೆ ಇರುವುದನ್ನು ಕಾಣಬಹುದು. ಮಣ್ಣಿನ ಗುಣ ಸ್ವಭಾವದಲ್ಲೂ ಸಹ ಇದೇ ಪರಿಸ್ಥಿತಿಯಿದೆ.

ಕೃಷಿ ಆಚರಣೆಗಳು ಕೃಷಿಕರ ನಿಸರ್ಗಾರಾಧನೆ ಎಂಬ ಮಾತು ನೂರಕ್ಕೆ ನೂರರಷ್ಟು ಸತ್ಯ. ಏಕೆಂದರೆ ಬೀಜ ಬಿತ್ತನೆಯಿಂದ ಮೊದಲುಗೊಂಡು ಬೆಳೆ ಕಟಾವಾಗಿ, ಒಕ್ಕಣೆಯಾಗಿ ಕಾಳು ಮನೆಗೆ ಬರುವ ಪ್ರತಿಯೊಂದು ಹಂತದಲ್ಲೂ ಆಚರಣೆಗಳಿವೆ. ಈ ಆಚರಣೆಗಳ ಚಕ್ರದ ಮೇಲೆಯೇ ಕೃಷಿಕರ ಬದುಕು ಸಾಗುತ್ತಾ ಬರುತ್ತದೆ. ಜನಪದ

ಬದುಕಿನ ಬಹುಭಾಗವನ್ನು ಆವರಿಸಿರುವ ಈ ಆಚರಣೆಗಳು ಋತಮಾನಕ್ಕನುಗುಣವಾಗಿ ಬಳಕೆಯಲ್ಲಿವೆ. ಕೃಷಿ ಸಂಸ್ಕೃತಿಯ ಮುಖ್ಯ ಅಂಗವಾಗಿ ಸಾಗಿ ಬಂದಿರುವ ಈ ಆಚರಣೆಗಳು ಕೃಷಿಕರ ಬದುಕಿನ ರಕ್ಷಣೆಯ ಹೊಣೆ ಹೊತ್ತು ನಿಂತಿವೆ. ಇವಕ್ಕೆ ಕೊನೆ ಮೊದಲೆಂಬುದಿಲ್ಲ.

ಕೃಷಿ ಆಚರಣೆಗಳೆಂದರೆ ಊರೊಗ್ಗಟ್ಟಿನ ಸಂಕೇತ. ಅದಕ್ಕಿಂತಲೂ ಮೀಗಿಲಾಗಿ ಇವು ಕೃಷಿಕರನ್ನು ಭೂಮಿ, ಮಳೆ ಬೀಜ ಮತ್ತು ಪ್ರಕೃತಿಯ ಇತರೆಲ್ಲಾ ಅಂಗಗಳೊಂದಿಗೆ ಗಾಢ ಸಂಬಂಧವನ್ನು ಬೆಸೆಯುವ ಕೊಂಡಿಗಳು. ಒಂದು ಗ್ರಾಮ ಸುತ್ತಲು ಹತ್ತೆಂಟು ಹಳ್ಳಿಗಳು. ಈ ಮೂಲಕ ಒಟ್ಟು ಸಮಾಜದ ಸಮಗ್ರತೆಯನ್ನು ಕಾಯ್ದುಕೊಳ್ಳುವಲ್ಲಿ ಆಚರಣೆಗಳ ಪರಿಕಲ್ಪನೆ ಪೂರಕವಾಗಿರುವುದು ಗಮನಿಸಬೇಕಾದ ಅಂಶ. ಅಷ್ಟೇ ಅಲ್ಲದೇ ಇವು ಹಿರಿಯರ ಬೇಸಾಯ ಜ್ಞಾನ, ಶ್ರದ್ಧೆ ನಂಬಿಕೆಗಳು ಸಮಷ್ಟಿ ಪ್ರಜ್ಞೇಗಳು ಹಿರಿಯ ತಲೆಮಾರುಗಳಿಗೆ ಕೈಬದಲಾಗುವ ಮಾರ್ಗಗಳು ಹೌದು.

ಬೇಸಾಯದಲ್ಲಿ ಅನೀರಿಕ್ಷತವಾಗಿ ಬರುವ ನೈಸರ್ಗಿಕ ವಿಕೋಪಗಳನ್ನು ಪರಿಹರಿಸಲು ನಮ್ಮ ಪೂರ್ವಿಕರು ವಿವಿಧ ಆಚರಣೆಗಳನ್ನು ಪ್ರಾರಂಭಿಸಿದ್ದರು. ಕಣಜ ತುಂಬುವಷ್ಟು ಕಾಳು ನೀಡಿದ ಪ್ರಕೃತಿಗೆ ಧನ್ಯವಾದ ಸಲ್ಲಿಸುವ ವಿಧಾನವಾಗಿಯೂ ಸಹ ಆಚರಣೆಗಳು ಬೆಳೆದು ಬಂದವು. ಬೆಳೆ ನಷ್ಟವಾದಂತಹ ಮತ್ತು ಉತ್ತಮ ಫಸಲು ಬಂದ ಎರಡು ಸಂದರ್ಭಗಳಲ್ಲಿ ಕೃಷಿ ಆಚರಣೆಗಳಿರುವುದನ್ನು ಕಾಣಬಹುದು.

ಬದಲಾದ ಕಾಲಘಟದಲ್ಲಿ ನಮ್ಮ ಬದುಕಿನ ರೀತಿನೀತಿಗಳು ವ್ಯತ್ಯಾಸವಾಗಿವೆ. ಕೃಷಿ ಮತ್ತು ಕೃಷಿಕನ ವ್ಯಾಖ್ಯಾನವೇ ಮಾರ್ಪಾಟಾಗಿವೆ. ಪರಸ್ಪರ ಸಂಬಂಧಗಳೇ ಬದಲಾಗಿ ಹೋಗಿವೆ. ಇವೆಲ್ಲದರ ಪರಿಣಾಮವಾಗಿ ಕೃಷಿ ಆಚರಣೆಗಳು ಸಹ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ಹಾಗೂ ಎಷ್ಟೋ ಕಣ್ಮರೆಯಾಗಿ ಹೋಗಿವೆ.

ಕಾರಣಗಳು ಹಲವಾರು 60ರ ದಶಕದಲ್ಲಿ ಬಂದ ಹಸಿರು ಕ್ರಾಂತಿಯ ಪರಿಣಾಮ ನಮ್ಮ ವೈವಿದ್ಯಮಯ ಬೆಳೆ ಪದ್ಧತಿ ನಾಶವಾಗಿ ಏಕೆ ಬೆಳೆ ಪದ್ಧತಿಯ ಆಗಮನವಾಯಿತು. ಸಾಂಪ್ರದಾಯಿಕ ತಳಿಗಳ ಜಾಗವನ್ನು ಹೈಬ್ರೀಡಗಳು ಆಕ್ರಮಿಸಿದವು. ವಾಣಿಜ್ಯ ಬೆಳೆಗಳ ದಾಂಗುಡಿಯಾಯಿತು. ದಿಢೀರ ಹಸಿರುಕ್ಕಿಸುವ ರಾಸಾಯಾನಿಕ ಗೊಬ್ಬರಗಳಿಂದಾಗಿ ಸಗಣಿ ಗೊಬ್ಬರಕ್ಕೆ ಎಳ್ಳುನೀರು, ದನ-ಕರುಗಳು ಸಾಕಾಣಿಕೆ ಕುಂಠಿತ.

ಹೀಗೆ ಆಧುನಿಕ ಸ್ಪರ್ಶ ಪಡೆದ ಕೃಷಿ ರಂಗದಿಂದ ಸಹಜವಾಗಿಯೇ ಆಚರಣೆಗಳು ನಿರ್ಗಮಿಸತೊಡಗಿದವು. ಬಿತ್ತನೆಗೆ ಟ್ರಾಕ್ಟರ್ ಬಂದಾಗ ನೇಗಿಲು ಪೂಜೆಗೆ ಜಾಗವೆಲ್ಲಿ? ರಾಗಿ ಬೆಳೆಯೇ ಇಲ್ಲದಿರುವಾಗ ಕರಿಬಂಟನ ಅಗತ್ಯವೇನು? ಒಕ್ಕಣೆ ಟಾರು ರಸ್ತೆಗೆ ಬಂದಾಗ ಕಣದ ಪ್ರಜೆ , ರಾಶಿ ಪೂಜೆಗಳನ್ನು ಮಾಡುವುದು ಹೇಗೆ?

ಮಳೆಯ ಏರು–ಪೇರು ಮತ್ತು ಬೆಳೆ ಇಡುವ ಕಾಲ ಬದಲಾಗಿದ್ದು ಸಹ ಆಚರಣೆಗಳು ಮುಸುಕಾಗಲು ಕಾರಣವಾಯಿತು. ಮೊಗ್ಗ ಮುಂಡುಗನನ್ನು ಹಾಕಬೇಕಾದರೆ ಆ ಹೊತ್ತಿಗೆ ಗದ್ದೆ ಬೆಳವಣಿಗೆ ಹಂತದಲ್ಲಿರಬೇಕು. ಆದರೆ ಮಳೆ ಸರಿಯಾಗಿ ಆದರೆ ಬಿತ್ತನೆ ತಡವಾದರೆ ಮಗೆ ಮುಂಡುಗನ ಪ್ರಜೆ ಸಾಧ್ಯವೇ ಇಲ್ಲ.

ದೇಸೀ ದನ–ಕರುಗಳೇ ಇಲ್ಲದಿರುವಾಗ ಸಂಕ್ರಾಂತಿ ಸಡಗರ ಎಲ್ಲಿಯದು? ಈಗ ಹಳ್ಳಿಗಳಲ್ಲಿರುವುದು ಕೇವಲ ಹಾಲು ಹಿಂಡುವ ಸೀಮೆ ಹಸುಗಳು, ಅವುಗಳನ್ನು ಕಿಚ್ಚು ಹಾಯಿಸುವಂತಿಲ್ಲ, ಬೆದರಿಸುವಂತಿಲ್ಲ.

ಇನ್ನೂ ಕಂಬಳ, ಹುತ್ತರಿ, ದೀಪಾವಳಿ ಮುಂತಾದ ಆಚರಣೆಗಳು ತನ್ನಮೂಲ ಅರ್ಥ ಸ್ವರೂಪವನ್ನು ಕಳಚಿಕೊಂಡಿವೆ. ತಿರುಳು ಹೋಗಿ ಬರೀ ಸಿಪ್ಪೆ ಉಳಿಯಿತು. ಎಂಬುದಾಗಿದೆ. ಅವುಗಳಿಗೂ ರಾಜಕೀಯ ಲೇಪಗೊಂಡು ಬಿಟ್ಟಿದೆ. ಆಚರಣೆಗಳಿಗೂ ಗ್ರಾಮೀಣ ಕಸುಬುಗಳಿಗೂ ಅಂತಹ ಸಂಬಂಧವಿದೆ. ಉದಾಹರಣೆಗೆ ಕರಿಬಂಟನ ಆಚರಣೆಗೆ ಉಬ್ಬೆ, ಕಮ್ಮಾರ ಮತ್ತು ಕುಂಬಾರನ ಮನೆ ಬುದಿಗಳು ಅಗತ್ಯ ಬೇಕು. ಆ ಕಸುಬುಗಳೇ ಇಂದು ನಶಿಸಿವೆ. ಇದರ ಪರಿಣಾಮ ಕರಿಬಂಟನ ಆಚರಣೆ ಮೇಲೆ ಖಂಡಿತ ಉಂಟಾಗಿದೆ. ಆಟಿಕಳಚಿಜ ವೇಷ ಹಾಕುವವರು ಕೆಳ ವರ್ಗದ ಜನ , ಆದರೆ ಅವರ ಸಾಮಾಜಿಕ ಜೀವನದಲ್ಲುಂಟಾದ ಪಲ್ಲಟದಿಂದಾಗಿ ಅವರು ಆ ವೇಷ ಹಾಕಲು ಹಿಂಜರಿಯುತ್ತಿದ್ದಾರೆ.

ಕಾಲ ಬದಲಾದಂತೆ ಕೃಷಿ ಆಚರಣೆಗಳು ಬದಲಾದರೂ ಪರೋಕ್ಷವಾಗಿ ಕಂಡು ಬರುವ ಅವುಗಳ ಎಳೆಗಳನ್ನು ಆಧಾರವಾಗಿಟ್ಟುಕೊಂಡು ವಿವೇಚಿಸಬಹುದು. ಆದರೆ ಇದು ಸಾಧ್ಯವಾಗುವುದು ಅವುಗಳ ದಾಖಲಾತಿ ರೂಪದಲ್ಲಿ ಲಭ್ಯವಿದ್ದಾಗ ಮಾತ್ರ ದುರಂತವೆಂದರೆ ಈ ಆಚರಣೆಗಳು ಇಂದಿಗೂ ಮೌಖಿಕವೇ ಹೊರತು ಅಕ್ಷರ ರೂಪಕ್ಕಿಳಿದಿಲ್ಲ. ಅವುಗಳ ಒಳ ಹೊರಗನ್ನು ಬಲ್ಲಂತಹ ತಲೆ ಮಾರು ಸಹ ಅಳಿಯುತ್ತಿದೆ.

ಇಂದು ಕೃಷಿಕ ತಲುಪಿರುವ ದೈನ್ಯ, ಅಭದ್ರ, ಅತಂತ್ರ ಸ್ಥಿತ್ತಿಯಿಂದ ಹಳ್ಳಿಗಳಿಂದ ಕ್ಷಣ್ಮರೆಯಾದ ಸಂಪ್ರಾದಾಯಕ ವಾತಾವರಣ ಸಹ ಕಾರಣ, ಕೃಷಿ ಆಚರಣೆಗಳು ಚಿಕ್ಕ–ಚಿಕ್ಕ ಕ್ರಿಯೆಗಳಾದರೂ ಮನಸ್ಸಿಗೆ ಮುದ, ಧೈರ್ಯ, ಆತ್ಮವಿಶ್ವಾಸ ನೀಡುತ್ತಿದ್ದವು, ಪರಸ್ಪರ ಸಂಬಂಧ ಬೆಸೆಯುತ್ತಿದ್ದವು. ಅಂತಹ ಆಪ್ತ ವಾತಾವರಣದಿಂದ ಇಂದಿನ ಕೃಷಿಕ ವಚಿಚಿತನಾಗಿರುವದೇ ದುರಂತ.

ಉಳಿದಿರುವ ಹಿರಿ ತಲೆಗಳನ್ನು ಮಾತಾಡಿಸಿ, ಈಗಲೂ ಆಧುನಿಕತೆ ಅಷ್ಟಾಗಿ ಸೋಕದ ಕಾಡುಹಳ್ಳಿಗಳಲ್ಲಿ ಅಡ್ಡಾಡಿ ಅಳಿದುಳಿದ ಆಚರಣೆಗಳನ್ನು ಸಮಗ್ರವಾಗಿ ದಾಖಲಿಸುವುದೇ ನಮಗಿರುವ ಮಾರ್ಗ.

ಆಕಾರ ಗ್ರಂಥಗಳು

ಕ್ರಸಂ.	ಗ್ರಂಥದ ಹೆಸರು	ಲೇಖಕರ ಹೆಸರು
01	ಬೀದರ ಜಿಲ್ಲಾ ದರ್ಶನ	ಸಂಪಾದನಾ ಗ್ರಂಥ ಸೋಮನಾಥ ಯಾಳವಾರ ಮತ್ತು ಪ್ರೇಮ ಸಿರ್ಸೆ
02	ಬಸವ ಪ್ರಭೆ (ಸವಿ ಸಂಚಿಕೆ)	ಡಾ.ರಮೇಶ ಮೂಲಗೆ (7ನೇ ಸಾಹಿತ್ಯ ಸಮ್ಮೇಳನ)
03	ಬೀದರ ಜಿಲ್ಲೆಯ ಸಾಂಸ್ಕೃತಿಕ ಪಲ್ಲಟಗಳು	ಡಾ.ಬಸವರಾಜ ಬಲ್ಲೂರ
04	ಬೀದರ ಜಿಲ್ಲೆಯ ಚರಿತ್ರೆ	ಪ್ರೋ. ಸೂಗಯ್ಯಾ ಹೀರೆಮ್ಮಠ
05	ಬೀದರ ಜಿಲ್ಲಾ ಇತಿಹಾಸ	ಕಲ್ಯಾಣರಾವ ಜಿ. ಪಾಟೀಲ್
06	ಪರಮಜ್ಞಾನಿ ಶ್ರೀ ಸಿದ್ಧಾರೂಢರು	ಡಾ.ಭತಮುರ್ಗಿ ಚಂದ್ರಪ್ಪ
07	ಕೃಷಿ ಆಚರಣೆಗಳು	ಮಲ್ಲಿಕಾರ್ಜುನ ಹೊಸಪಾಳ್ಯ
08	ಹಂತಿ ಹಾಡುಗಳು	ಬಸವರಾಜ ಪೋಲಿಸ್ ಪಾಟೀಲ್

ಕ್ರಸಂ	ಹೆಸರು	ವಯಸ್ಸು	ಗ್ರಾಮ
01.	ಪರಗಬಾಯಿ ಗಂಡ ಅಂಬದಾಸರಾವ	50	ಲಾಧಾ ತಾ. ಔರಾದ
02	ರಂಗಮ್ಮ ಗಂಡ ಬಾಬುರಾವ	55	ಲಾಧಾ ತಾ. ಔರಾದ
03	ಕಮಳಾಬಾಯಿ ಗಂಡ ವೈಜಿನಾಥ	65	ಲಾಧಾ ತಾ. ಔರಾದ